ಜನಶಕ್ತಿ

ದುಡಿಯುವ ಜನರ ಪ್ರಾಣ ಮಿತ್ರ

ಕನ್ನಡ ವಾರಪತ್ರಿಕೆ



ಕಾಮ್ರೇಡ್
ಸಿ.ನಾರಾಯಣ
ಲಾಲ್ ಸಲಾಮ್

ಸಂಪುಟ 10 | ಸಂಚಿಕೆ 17 | ಪುಟ 16 | ಏಪ್ರಿಲ್ 24, 2016 | ರೂ. 10/-

web: www.janashakthi.co.in e-mail : js_weekly@yahoo.com



ಪಿಯು ವಿದ್ಯಾರ್ಥಿ-ಶಿಕ್ಷಕರ ಭವಿಷ್ಯದ ಜತೆ ಚೆಲ್ಲಾಟವೇಕೆ?

- ಮೇ ನಲ್ಲಿ ಎಡಪಕ್ಷಗಳ ಜಾಥಾ
- ರ್‍ಯಾಡಿಕಲ್ ಅಂಬೇಡ್ಕರ್ ಮರಳಿ ಪಡೆಯಬೇಕು - ಕಾರಟ್
- ಯೆಡ್ಡಿ ಬಿಜೆಪಿ ಅಧ್ಯಕ್ಷ = ಭ್ರಷ್ಟಾಚಾರ + ಕೋಮುವಾದದ ಕಾಕ್ ಟೈಲ್
- ಅಮೆರಿಕಕ್ಕೆ ಮಿಲಿಟರಿ ನೆಲೆ ತೆರೆಯುವುದು ರಾಷ್ಟ್ರದ್ರೋಹ



ಸಮಾನತಾ ಸಂಕಲ್ಪ ದಿನ

ಅಮೆರಿಕನ್ ಮಿಲಿಟರಿಗೆ ಭಾರತದ ನೆಲದಲ್ಲಿ ನೆಲೆ

ರಾಷ್ಟ್ರೀಯವಾದಿ ಎನ್ನುವ ಮೋದಿ ಸರಕಾರದ ರಾಷ್ಟ್ರ-ವಿರೋಧಿ ಕ್ರಮ: ಸಿಪಿಐ(ಎಂ) ಖಂಡನೆ



ಅಮೆರಿಕಾದ ರಕ್ಷಣಾ ಕಾರ್ಯದರ್ಶಿ ಮತ್ತು ಭಾರತದ ರಕ್ಷಣಾ ಮಂತ್ರಿ ಒಂದು 'ಸೇನಾ ಸರಬರಾಜು ವಿನಿಮಯ ಒಪ್ಪಂದ ಮನವಿ ಪತ್ರ'(ಎಲ್ಇಎಂಒಎ) ದ ಬಗ್ಗೆ ಒಪ್ಪಂದಕ್ಕೆ ಬರಲಾಗಿದೆ ಎಂದು ಪ್ರಕಟಿಸಿದ್ದಾರೆ. ಅಂ- ದರೆ ಇನ್ನು ಮುಂದೆ ಭಾರತ ತನ್ನ ವಿಮಾನಪಡೆಯ ಮತ್ತು ನೌಕಾಪಡೆಯ ಮಿಲಿಟರಿ ನೆಲೆಗಳಲ್ಲಿನ ಸೌಕರ್ಯಗಳನ್ನು ಬಳಸಲು ಅಮೆರಿಕಾಸ ಸಶಸ್ತ್ರ ಸೇನಾ ಪಡೆಗಳಿಗೆ ಅವಕಾಶ ಕೊಡಲಿದೆ.

ಈ ಹಿಂದೆ ಯುಪಿಎ ಸರಕಾರದ ಅವಧಿಯಲ್ಲಿ ಸೇನಾ ಸರಬರಾಜು ಬೆಂಬಲ ಒಪ್ಪಂದ(ಎಲ್ಎಸ್ಎ) ಎಂಬುದಕ್ಕೆ ಸಹಿ ಹಾಕಲು ಕಳೆದ ಹತ್ತು ವರ್ಷಗಳಿಂದ ಅಮೆರಿಕಾ ಒತ್ತಡ ಹಾಕುತ್ತಿತ್ತು. ಎಡಪಕ್ಷಗಳ ಒತ್ತಡದಿಂದಾಗಿ ಯುಪಿಎ-1 ಸರಕಾರ, ನಂತರ ಯುಪಿಎ-2 ಸರಕಾರ ಕೂಡ ಇಂತಹ ಒಂದು ರಾಷ್ಟ್ರ-ವಿರೋಧಿ ಒಪ್ಪಂದಕ್ಕೆ ಸಿದ್ಧವಾಗಲಿಲ್ಲ.

ಆದರೆ ಈಗ ರಾಷ್ಟ್ರೀಯವಾದದ ಬಗ್ಗೆ ಬಹಳಷ್ಟು ಮಾತಾಡುವ ಬಿಜೆಪಿ ಸರಕಾರ ಈ ರಾಷ್ಟ್ರ-ವಿರೋಧಿ ಒಪ್ಪಂದಕ್ಕೆ ಸಹಿ ಹಾಕಲು ಸಿದ್ಧವಾಗಿ ನಿಂತಿದೆ. ಇದು ಅದಕ್ಕಿಂತ ಸೌಮ್ಯವಾದ ಒಪ್ಪಂದ ಎನ್ನಲಾಗಿದೆ. ಆದರೆ ಇದು ಅಮೆರಿಕಾ ತನ್ನ ಮಿಲಿಟರಿ ಮಿತ್ರದೇಶಗಳಾದ ಫಿಲಿಪ್ಪೈನ್ಸ್, ದಕ್ಷಿಣ ಕೊರಿಯ, ಜಪಾನ್ ನೊಂದಿಗೆ ಈಗಾಗಲೇ ಮಾಡಿಕೊಂಡಿರುವ ಎಲ್ಎಸ್ಎ ಮಾದರಿಯಲ್ಲೇ ಇದೆ. ಭಾರತದ ನೆಲದಲ್ಲಿ ವಿದೇಶಿ ಅಮೆರಿಕನ್ ಸೈನಿಕರು ಇರುವುದಿಲ್ಲ, ಅಮೆರಿಕನ್ ಯುದ್ಧ ವಿಮಾನಗಳಿಗೆ, ಸಮರ ನೌಕೆಗಳಿಗೆ ಇಂಧನ ತುಂಬಿಸುವುದು, ರಿಪೇರಿ ಸೌಲಭ್ಯಗಳನ್ನು ಒದಗಿಸಲಿಕ್ಕಾಗಿ ಯಷ್ಟೇ ಈ ಒಪ್ಪಂದ ಎಂದು ರಕ್ಷಣಾ ಮಂತ್ರಿಗಳು ಹೇಳಿದ್ದಾರೆ. ಇದು ಸಬೂಬು ಅಷ್ಟೇ, ಏಕೆಂದರೆ ಇವನ್ನೆಲ್ಲ ಮಾಡಲು ಅಮೆರಿಕನ್ ಸರಕಾರ ಭಾರತೀಯ ಸೈನಿಕರನ್ನು ಬಳಸುತ್ತದೆಯೇ, ಖಂಡಿತಾ ಇಲ್ಲ, ತಮ್ಮ ಸೈನಿಕರನ್ನೇ ನಮ್ಮ ನೆಲದಲ್ಲಿ ತಂದಿಡುತ್ತಾರೆ. ಅವರನ್ನು ಆಗಾಗ ಬದಲಿಸುತ್ತಿರುತ್ತಾರೆ.

ಆದ್ದರಿಂದ ಈ ಮೂಲಕ ಮೋದಿ ಸರಕಾರ ಅಮೆರಿಕಾದೊಂದಿಗೆ ಮಿಲಿಟರಿ ಶಾಮೀಲಿನತ್ತ ಒಂದು ಅಪಾಯಕಾರಿ ಹೆಜ್ಜೆ ಇಟ್ಟಿದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಹೇಳಿದೆ.

ಇದರೊಂದಿಗೆ ಇನ್ನೂ ಎರಡು ಒಪ್ಪಂದಗಳನ್ನು ಮಾಡಿಕೊಳ್ಳಲಾಗುವುದಂತೆ. ಒಂದು, 'ಸಂಪರ್ಕ ಮತ್ತು ಮಾಹಿತಿ ಭದ್ರತಾ ಒಪ್ಪಂದ ಮನವಿ ಪತ್ರ'(ಸಿಐಎಸ್ಎಂಒಎ) ಮತ್ತು ಇನ್ನೊಂದು, 'ಮೂಲ ವಿನಿಮಯ ಮತ್ತು ಸಹಕಾರ ಒಪ್ಪಂದ'(ಬಿಇಸಿಎ). ಇವುಗಳ ಮೂಲಕ ಭಾರತದ ಸಶಸ್ತ್ರ ಪಡೆಗಳ ಸೇನಾಧಿಪತ್ಯ ಮತ್ತು ನಿಯಂತ್ರಣ ವ್ಯವಸ್ಥೆಯನ್ನು ಅಮೆರಿಕಾದ ಸಶಸ್ತ್ರ ಪಡೆಗಳ ವ್ಯವಸ್ಥೆಯೊಂದಿಗೆ ಸಮಗ್ರೀಕರಿಸಲಾಗುತ್ತದೆ. ಹೀಗೆ ಮಾಡುವಲ್ಲಿ ಬಿಜೆಪಿ ಸರಕಾರ ಸ್ವಾತಂತ್ರ್ಯದ ನಂತರ ಯಾವ ಸರಕಾರವೂ ಮಾಡದ ಕೆಲಸವನ್ನು ಮಾಡುತ್ತಿದೆ, ಅಂದರೆ ಭಾರತವನ್ನು ಅಮೆರಿಕ ಸಂಯುಕ್ತ ಸಂಸ್ಥಾನಗಳ ಮಿಲಿಟರಿ ಮಿತ್ರನಾಗಿ ಪರಿವರ್ತಿಸುತ್ತಿದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಅಭಿಪ್ರಾಯ ಪಟ್ಟಿದೆ.

ಈ ಮೂಲಕ ಮೋದಿ ಸರಕಾರ ನಮ್ಮ ರಾಷ್ಟ್ರೀಯ ಸಾರ್ವಭೌಮತೆ ಮತ್ತು ದೇಶದ ಸಾಮರಿಕ ಸ್ವಾಯತ್ತತೆಯನ್ನು ಪಣಕ್ಕೊಡ್ಡಿದೆ. ಅಂದರೆ ಯುದ್ಧ ಸಂದರ್ಭದಲ್ಲಿ ಭಾರತ ತನ್ನ ಹಿತದೃಷ್ಟಿಯಿಂದ ಮಾತ್ರ ನಿರ್ಧಾರಕ್ಕೆ ಬರಲು ಸಾಧ್ಯವಾಗದಂತಹ ಕಟ್ಟುಪಾಡಿಗೆ ಒಳಗಾಗಬಹುದು. ಅಮೆರಿಕಾ ಸಂಯುಕ್ತ ಸಂಸ್ಥಾನದ ಮುಂದೆ ಇಂತಹ ಶರಣಾಗತಿಯನ್ನು ದೇಶದ ಎಲ್ಲ ರಾಜಕೀಯ ಪಕ್ಷಗಳು ಮತ್ತು ದೇಶಪ್ರೇಮಿಗಳು ವಿರೋಧಿಸಬೇಕು ಎಂದು ಸಿಪಿಐ(ಎಂ) ಹೇಳಿದೆ. ಇಂತಹ ರಾಷ್ಟ್ರ-ವಿರೋಧಿ ಕ್ರಮಗಳಿಗೆ ಜನತೆಯ ಬೆಂಬಲ ಇಲ್ಲ, ಮೋದಿ ಸರಕಾರ ಈ ಕೂಡಲೇ ಈ ಒಪ್ಪಂದಕ್ಕೆ ಸಹಿ ಹಾಕದೆ ಹಿಂದೆ ಸರಿಯಬೇಕು ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಆಗ್ರಹಿಸಿದೆ.

ಇದೇನಾ ಮೋದಿ ಸರಕಾರದ 'ಬಲವಾದ ಸಂದೇಶ'?- ಯೆಚೂರಿ

ಪಾಕಿಸ್ತಾನಕ್ಕೆ ಅತ್ಯಾಧುನಿಕ ಯುದ್ಧವಿಮಾನಗಳನ್ನು ಒದಗಿಸಲು ನಿರ್ಧರಿಸಿರುವ ಅಮೆರಿಕನ್ ಆಳರಸರಿಗೆ ಮೋದಿ ಸರಕಾರ ಕೊಡುತ್ತಿರುವ 'ಬಲವಾದ ಸಂದೇಶ' ಇದೇನಾ ಎಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚೂರಿ ಲೇವಡಿ ಮಾಡಿದ್ದಾರೆ.

ಭಾರತ ದಶಕಗಳಿಂದ ಯುದ್ಧಗಳ ಸಂದರ್ಭದಲ್ಲಿ ತನ್ನ ಹಿತದೃಷ್ಟಿಯಿಂದ ನಿರ್ಧಾರಗಳನ್ನು ತಾನೇ ಕೈಗೊಳ್ಳಬಹುದಾದ ಸ್ವಾಯತ್ತತೆಯನ್ನು ಕಾಯ್ದು- ಕೊಂಡು ಬಂದಿತ್ತು. ಅದನ್ನು ಈಗ ಈ ಒಪ್ಪಂದಕ್ಕೆ ಸಹಿ ಹಾಕಲು ಒಪ್ಪುವ ಮೂಲಕ ಬಿಟ್ಟುಕೊಡುತ್ತಿದೆ ಎಂದು ಈ ಬಗ್ಗೆ ಪ್ರತಿಕ್ರಿಯಿಸುತ್ತ ಅವರು ಹೇಳಿದ್ದಾರೆ.

ಮೋದಿ ಸರಕಾರ ಹೀಗೇಕೆ ಮಾಡುತ್ತಿದೆ? ಇತ್ತೀಚೆಗಷ್ಟೇ ಅದು ಅಮೆರಿಕಾ ಪಾಕಿಸ್ತಾನಕ್ಕೆ ಎಫ್-16 ಮತ್ತು ವೈಪರ್‌ಯುದ್ಧ ವಿಮಾನಗಳನ್ನು ಕಳಿಸಲು ನಿರ್ಧರಿಸಿದಾಗ ಮುನಿಸನ್ನು ವ್ಯಕ್ತಪಡಿಸಿತ್ತು, ಅಮೆರಿಕಾಕ್ಕೆ 'ಬಲವಾದ ಸಂದೇಶ ಕಳಿಸುವುದಾಗಿ ಹೇಳಿತ್ತು.

ಪುಟ 7 ನೋಡಿ

ಪಶ್ಚಿಮ ಬಂಗಾಲ: ಮುಕ್ತ, ನ್ಯಾಯಯುತ ಚುನಾವಣೆಯ ಭರವಸೆಯನ್ನು ಈಡೇರಿಸುತ್ತಿಲ್ಲ-ಸಿಪಿಐ(ಎಂ) ಪೊಲಿಟ್‌ಬ್ಯುರೊ

ಪಶ್ಚಿಮ ಬಂಗಾಲದಲ್ಲಿ ಮತದಾನದ ಎರಡನೇ ದಿನವಾದ ಎಪ್ರಿಲ್ 11ರಂದು ಆಳುವ ಟಿಎಂಸಿ ಬೆಂಬಲಿತ ಕಿಡಿಗೇಡಿಗಳು ಮುಕ್ತ ಮತ್ತು ನ್ಯಾಯುತ ಚುನಾವಣೆಗಳ ಪ್ರಕ್ರಿಯೆಯನ್ನು ಛಿದ್ರಗೊಳಿಸಿರುವ ರೀತಿಯ ಬಗ್ಗೆ ಸಿಪಿಐ(ಎಂ) ಪೊಲಿಟ್‌ಬ್ಯುರೊ ಆಘಾತವನ್ನು ವ್ಯಕ್ತಪಡಿಸಿದೆ.

ಪ್ರತಿಪಕ್ಷಗಳ ಮೇಲೆ ದಾಳಿ, ಮತದಾರರಿಗೆ ಹಿಂಸಾಚಾರದ ಬೆದರಿಕೆ, ಅಭ್ಯರ್ಥಿಗಳ ಪೋಲಿಂಗ್ ಏಜೆಂಟರನ್ನು ತಡೆದು ಅಭ್ಯರ್ಥಿಗಳ ಪ್ರಜಾತಾಂತ್ರಿಕ ಹಕ್ಕುಗಳ ನಿರಾಕರಣೆ ಮುಂತಾದ ಘಟನೆಗಳು ಹಲವಡೆ ನಡೆದಿವೆ. ಚುನಾವಣಾ ಆಯೋಗ ತಾನು ಪಶ್ಚಿಮ ಬಂಗಾಲದ ಜನತೆಗೆ ನೀಡಿದ್ದ ಭರವಸೆಗಳನ್ನು ಈಡೇರಿಸುವಲ್ಲಿ ವಿಫಲವಾಗಿರುವುದನ್ನು ಇದು ಸೂಚಿಸುತ್ತದೆ ಎಂದು ಪೊಲಿಟ್‌ಬ್ಯುರೊ ಕಟುವಾಗಿ ಹೇಳಿದೆ.

ಈ ಹಿಂಸಾಚಾರಗಳು ಮತ್ತು ಅನಿಯಮಿತತೆಯ ಘಟನೆಗಳು ಮಾಧ್ಯಮಗಳಲ್ಲಿ, ಅದರಲ್ಲೂ ಇಲೆಕ್ಟ್ರಾನಿಕ್ ಮಾಧ್ಯಮಗಳಲ್ಲಿ ವ್ಯಾಪಕವಾಗಿ ವರದಿಯಾಗಿವೆ. ಇನ್ನುಳಿದ 5 ಘಟ್ಟಗಳಲ್ಲಿ 245 ಕ್ಷೇತ್ರಗಳಲ್ಲಿ ಮುಕ್ತ ಮತ್ತು ನ್ಯಾಯುತ ಮತದಾನ ನಡೆಯುವಂತೆ ನೋಡಿಕೊಂಡು ಚುನಾವಣಾ ಆಯೋಗ ತನಗೆ ಸಂವಿಧಾನ ನೀಡಿರುವ ಆದೇಶದ ಪಾಲನೆಯಾಗುವಂತೆ ಮಾಡಬೇಕು ಎಂದು ಪೊಲಿಟ್‌ಬ್ಯುರೊ ಆಗ್ರಹಿಸಿದೆ.

ಈ ಎಲ್ಲ ದಾಳಿಗಳ ನಡುವೆಯೂ ರಾಜ್ಯದ ರಾಜಕೀಯ ಕಾರ್ಯಕರ್ತರು ಮತ್ತು ಒಟ್ಟಾರೆ ಜನತೆ ಆಳುವ ಟಿಎಂಸಿ ಹರಿಯ ಬಿಟ್ಟಿರುವ ಇಂತಹ ಭಯೋತ್ಪಾದನೆ ಮತ್ತು ಬೆದರಿಕೆಯ ರಾಜಕೀಯವನ್ನು ದೃಢವಾಗಿ ಎದುರಿಸಿ ನಿಂತಿದ್ದಾರೆ ಎಂದು ಅವರನ್ನೆಲ್ಲ ಪೊಲಿಟ್‌ಬ್ಯುರೊ ಅಭಿನಂದಿಸಿದೆ.

ಮುಖ್ಯ ಚುನಾವಣಾ ಆಯುಕ್ತರಿಗೆ ಏಳು ಮನವಿಗಳು

ಇದಕ್ಕೆ ಮೊದಲು ಎಪ್ರಿಲ್11ರಂದು ಮತದಾನದ ದಿನವೇ ಬಂದ ಹಿಂಸಾಚಾರದ ವರದಿಗಳ ಹಿನ್ನೆಲೆಯಲ್ಲಿ ಸಿಪಿಐ(ಎಂ) ಕೇಂದ್ರ ಕಾರ್ಯದರ್ಶಿ ಮಂಡಳಿ ಸದಸ್ಯರಾದ ನೀಲೋತ್ಪಲ ಬಸು ಮುಖ್ಯ ಚುನಾವಣಾ ಆಯುಕ್ತರನ್ನು ಭೇಟಿ ಮಾಡಿ ಆ ದಿನ ಮತದಾನ ನಡೆದ 31 ಕ್ಷೇತ್ರಗಳಲ್ಲಿ ನಡೆದ ಅಕ್ರಮಗಳು ಮತ್ತು ಹಿಂಸಾಚಾರಗಳ ಬಗ್ಗೆ ಮಾಹಿತಿ ನೀಡುವ ಮನವಿ ಸಲ್ಲಿಸಿದರು.

ಪುಟ 14 ನೋಡಿ

ಕೇರಳದಲ್ಲಿ ನೂರಕ್ಕೂ ಹೆಚ್ಚು ಜನರನ್ನು ಬಲಿ ತೆಗೆದುಕೊಂಡ ಪಟಾಕಿ ದುರಂತ



ಎಪ್ರಿಲ್ 10ರ ರಾತ್ರಿ ಕೇರಳದ ಕೊಳ್ಳಂ ಜಿಲ್ಲೆಯ ಪರವೂರ್‌ನ ಪುತ್ತಿಂಗಲ್ ದೇವಿ ದೇವಸ್ಥಾನದ ಆವರಣದಲ್ಲಿ ನಡೆದ ಭೀಕರ ಸಿಡಿಮದ್ದು ದುರಂತದಲ್ಲಿ ಇದು ವರೆಗೆ 112 ಜನ ಪ್ರಾಣ ಕಳಕೊಂಡಿದ್ದಾರೆ, 350 ಮಂದಿ ಗಾಯಗೊಂಡಿದ್ದಾರೆ, ಅವರಲ್ಲಿ 22ಮಂದಿ ಇನ್ನೂ ಗಂಭೀರ ಸ್ಥಿತಿಯಲ್ಲಿದ್ದಾರೆ ಎಂದು ವರದಿಯಾಗಿದೆ.

ಸಿಪಿಐ(ಎಂ) ಪೊಲಿಟ್‌ಬ್ಯುರೊ ಈ ದುರಂತದ ಬಗ್ಗೆ ಆಘಾತ ಮತ್ತು ಆಳವಾದ ದುಃಖವನ್ನು ವ್ಯಕ್ತಪಡಿಸಿದೆ. ರಕ್ಷಣಾ ಕಾರ್ಯಗಳನ್ನು ನಡೆಸಲು, ಸರಿಯಾದ ವೈದ್ಯಕೀಯ ಪರಿಹಾರ ಹಾಗೂ ದುರಂತದಿಂದ ಕಷ್ಟಕ್ಕೀಡಾಗಿರುವವರ ಪುನರ್ವಸತಿಗೆ ಗಮನ ನೀಡಬೇಕಾಗಿದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಹೇಳಿದೆ. ಈ ದುರಂತದಿಂದ ಕಷ್ಟಕ್ಕೀಡಾದ ಕುಟುಂಬಗಳಿಗೆ ಅದು ತನ್ನ ತೀವ್ರ ಸಂತಾಪವನ್ನು ವ್ಯಕ್ತಪಡಿಸಿದೆ.

ಕೊಳ್ಳಂನಲ್ಲಿ ಮತ್ತು ತಿರುವನಂತಪುರದಲ್ಲಿ ಸಿಪಿಐ(ಎಂ) ಮತ್ತು ಎಲ್‌ಡಿಎಫ್‌ನ ಇತರರು ರಕ್ತದಾನ ಇತ್ಯಾದಿಗಳ ಮೂಲಕ ದುರಂತಕ್ಕೀಡಾದವರ ನೆರವಿಗೆ ಧಾವಿಸಿದ್ದಾರೆ.

ಈ ದೇವಸ್ಥಾನದಲ್ಲಿ ನಡೆಯುತ್ತಿದ್ದ ಮೀನ-ಭರಣಿ ಉತ್ಸವದ ಸಮಾರೋಪ ಸಂದರ್ಭದಲ್ಲಿ 'ಕಂಬಂ' ಸಿಡಿಮದ್ದು ಪ್ರದರ್ಶನಕ್ಕೆ ಸಂಗ್ರಹಿಸಿದ್ದ ಪಟಾಕಿಗಳ ದಾಸ್ತಾನಿಗೆ ಬೆಂಕಿ ಬಿದ್ದು ಈ ದುರಂತ ಸಂಭವಿಸಿದೆ ಎನ್ನಲಾಗಿದೆ. ಆಕಾಶದಲ್ಲಿ ಸಿಡಿಯಬೇಕಾಗಿದ್ದ ಪಟಾಕಿ ದಾರಿ ತಪ್ಪಿ ನೆಲದಲ್ಲೇ ಸಿಡಿದು, ಅದರ ಕಿಡಿಗಳು ಸುತ್ತ ಪಸರಿಸಿ, ಪಟಾಕಿಯ ಬೃಹತ್ ಪ್ರದರ್ಶನಕ್ಕೆಂದು

ಪುಟ 14 ನೋಡಿ

ಐಐಟಿಗಳಲ್ಲಿ ಶುಲ್ಕದಲ್ಲಿ ದುಪ್ಪಟ್ಟಿಗಿಂತಲೂ ಹೆಚ್ಚಿನ ಏರಿಕೆ

ದುರ್ಬಲ ವಿಭಾಗಗಳನ್ನು ಹೊರಗಿಡುವ ಇನ್ನೊಂದು ಕ್ರಮ-ಎಸ್‌ಎಫ್‌ಐ ಖಂಡನೆ

ದೇಶದ ಉನ್ನತ ತಂತ್ರಜ್ಞಾನ ಶಿಕ್ಷಣ ಸಂಸ್ಥೆಗಳಾದ ಐಐಟಿಗಳಲ್ಲಿ ಬಿ.ಟೆಕ್ ಕೋರ್ಸ್‌ಗಳಿಗೆ ಬೋಧನಾ ಶುಲ್ಕವನ್ನು ವಾರ್ಷಿಕ 90,000 ರೂ.ನಿಂದ 2ಲಕ್ಷ ರೂ.ಗೆ ಏರಿಸಲು ನಿರ್ಧರಿಸಲಾಗಿದೆ. ಇದನ್ನು ಎಸ್‌ಎಫ್‌ಐ ಕೇಂದ್ರೀಯ ಕಾರ್ಯಕಾರಿ ಸಮಿತಿ ಖಂಡಿಸಿದೆ.

ಪರಿಶಿಷ್ಟ ಜಾತಿಗಳು, ಬುಡಕಟ್ಟುಗಳು ವಿಕಲಚೇತನ ವಿಭಾಗಗಳ ವಿದ್ಯಾರ್ಥಿಗಳಿಗೆ ಸಂಪೂರ್ಣ ಶುಲ್ಕ ವಿನಾಯಿತಿ ನೀಡುವುದಾಗಿ ಹೇಳಲಾಗಿದೆ. ಅಲ್ಲದೆ ವಾರ್ಷಿಕ 5ಲಕ್ಷ ರೂ.ಗಿಂತ ಕಡಿಮೆ ವಾರ್ಷಿಕ ಆದಾಯ ಇರುವ ಕುಟುಂಬಗಳ ವಿದ್ಯಾರ್ಥಿಗಳಿಗೆ 66ಶೇ. ವಿನಾಯ್ತಿ ಕೊಡಲಾಗುವುದಂತೆ. ಇದ- ರಿಂದ ಐಐಟಿಗಳಲ್ಲಿ ಕಲಿಯುತ್ತಿರುವ ಒಟ್ಟು 60,471 ವಿದ್ಯಾರ್ಥಿಗಳಲ್ಲಿ 50ಶೇ.ದಷ್ಟು ವಿದ್ಯಾರ್ಥಿಗಳಿಗೆ ಪ್ರಯೋಜನವಾಗುತ್ತದೆ ಎಂದು ಹೆಚ್‌ಆರ್‌ಡಿ ಮಂತ್ರಿಗಳು ಹೇಳಿದ್ದಾರೆ.

ಆದರೆ ಈ ತರ್ಕ ಈ ಎಲ್ಲ 'ವಿನಾಯ್ತಿ'ಗಳ ನಂತರವೂ ಆರ್ಥಿಕವಾಗಿ, ಸಾಮಾಜಿಕವಾಗಿ ಒಳ್ಳೆಯ ಸ್ಥಿತಿಯಲ್ಲಿರದ ಕುಟುಂಬಗಳಿಂದ ಈ ಸಂಸ್ಥೆಗಳಿಗೆ ವಿದ್ಯಾರ್ಥಿಗಳು ಬರದಂತೆ ತಡೆಯುವ ಅಂಶಗಳನ್ನು ಗಮನಕ್ಕೆ ತಗೊಂಡಿಲ್ಲ ಎಂದು ಎಸ್‌ಎಫ್‌ಐ ಅಭಿಪ್ರಾಯ ಪಟ್ಟಿದೆ. ಒಟ್ಟಾರೆ ಬೋಧನಾ ಶುಲ್ಕವನ್ನು ಜಂಟಿ ಪ್ರವೇಶ ಪರೀಕ್ಷೆ(ಜೆಇಇ)ಗಳನ್ನು ಬರೆಯಲು ಕೋಚಿಂಗ್ ನಿಡುವ ಸಂಸ್ಥೆಗಳು ವಸೂಲಿ ಮಾಡುವ ಭಾರೀ ಶುಲ್ಕಗಳ ಜೊತೆಗೆ ನೋಡಬೇಕಾಗುತ್ತದೆ. ಏಕೆ- ಂದರೆ, ಇವೀಗ ಈ ಸಂಸ್ಥೆಗಳಿಗೆ ಪ್ರವೇಶ ಪಡೆಯುವ ಪ್ರಕ್ರಿಯೆಯ ಅಭಿನ್ನ ಭಾಗಗಳಾಗಿ ಬಿಟ್ಟಿವೆ ಎಂಬ ಸಂಗತಿಯತ್ತ ಎಸ್‌ಎಫ್‌ಐ ಗಮನ ಸೆಳೆದಿದೆ.

ಐಐಟಿಗಳೇ ಪ್ರಕಟಿಸಿರುವ ದಾಖಲಾತಿ ವರದಿಗಳಲ್ಲೇ ಹೇಗೆ ಕೆಳ ಮಧ್ಯಮ ಮತ್ತು ಕಾರ್ಮಿಕ ವರ್ಗದ ಹಿನ್ನೆಲೆಯಿಂದ ಬರುವ ವಿದ್ಯಾರ್ಥಿಗಳ ಪ್ರಮಾಣ ಇಳಿಮುಖವಾಗುತ್ತಿದೆ, ಅವರನ್ನು ಹೇಗೆ ಹೊರಗಿಡಲಾಗುತ್ತಿದೆ ಎಂಬ ಅಂಶ ಎದ್ದು ಕಾಣುತ್ತಿದೆ. ಈ ಶುಲ್ಕ ಏರಿಕೆ ಈ ಪ್ರಕ್ರಿಯೆಯನ್ನು ಇನ್ನಷ್ಟು ತ್ವರಿತಗೊಳಿಸುತ್ತದೆ ಎಂದು ಎಸ್‌ಎಫ್‌ಐ ಖೇದ ವ್ಯಕ್ತಪಡಿಸಿದೆ.

80 ವರ್ಷ ತುಂಬಿರುವ ಎಐಕೆಎಸ್

1930 ರ ದಶಕದ ಮಹಾ ಆರ್ಥಿಕ ಹಿಂಜರಿತದ ಸಮಯದಲ್ಲಿ ನಮ್ಮ ದೇಶದಲ್ಲಿ ಬ್ರಿಟಿಶ್ ಪ್ರಾಂತಗಳು, ಮತ್ತು ಇತರ ಪ್ರದೇಶಗಳಲ್ಲಿ, ಸಂಸ್ಥಾನಗಳಲ್ಲಿ ರೈತರು ಹೋರಾಟಗಳಿಗಿಳಿದ ಹಿನ್ನೆಲೆಯಲ್ಲಿ ಎಪ್ರಿಲ್ 11, 1936ರಲ್ಲಿ ಲಕ್ನೌನಲ್ಲಿ ಅಖಿಲ ಬಾರತ ಕಿಸಾನ್ ಸಭಾ(ಎಐಕೆಎಸ್)ದ ಸ್ಥಾಪನಾ ಸಮ್ಮೇಳನ ನಡೆಯಿತು. ಇದೀಗ ಎಐಕೆಎಸ್‌ಗೆ 80 ವರ್ಷ ತುಂಬಿದೆ.

ಇದರ ಸ್ಮರಣಾರ್ಥ ದೇಶಾದ್ಯಂತ ಧ್ವಜಾರೋಹಣ, ಸಾಮೂಹಿಕ ಸಭೆಗಳು, ವಿಚಾರ ಸಂಕಿರಣಗಳು ಮುಂತಾದ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿತ್ತು, ಎಂದು ವರದಿಯಾಗಿದೆ. ನವದೆಹಲಿಯಲ್ಲಿ ಎಐಕೆಎಸ್‌ನ ಕೇಂದ್ರ ಕಚೇರಿಯಲ್ಲಿ ಜಂಟಿ ಕಾರ್ಯದರ್ಶಿ ಎನ್.ಕೆ.ಶುಕ್ಲ ಎಐಕೆಎಸ್ ಧ್ವಜಾರೋಹಣದ ನಂತರ ಒಂದು ಸಭೆ ನಡೆಯಿತು. ಇದನ್ನು ಉದ್ದೇಶಿಸಿ ಶುಕ್ಲ ಅವರಲ್ಲದೆ ಸಿಐಟಿಯುನ ರಾಷ್ಟ್ರೀಯ ಕಾರ್ಯದರ್ಶಿ ಡಾ. ಹೇಮಲತಾ, ಜನವಾದಿ ಮಹಿಳಾ ಸಂಘಟನೆಯ ಆಶಾ ಶರ್ಮ ಮತ್ತು ಅಖಿಲ ಭಾರತ ಕೃಷಿ ಕೂಲಿಕಾರರ ಸಂಘಟನೆಯ ಬಾಬು ಮೋಹನ್ ಮಾತನಾಡಿದರು.

aÀiÁvÉAzÀgÉ EzÀÄ

ನನಗೆ ಮಾತೃಭೂಮಿಯಿದೆ ಎನ್ನುತ್ತೀರಿ. ಆದರೆ ಮತ್ತೆಮತ್ತೆ ಹೇಳುತ್ತೇನೆ, ನನಗೆ ಮಾತೃಭೂಮಿಯಿಲ್ಲ. ನಮ್ಮನ್ನು ಬೆಕ್ಕು ನಾಯಿಗಳಿಗಿಂತ ಕೀಳಾಗಿ ಕಾಣುವ, ಕುಡಿಯಲು ನೀರು ಕೊಡದ ಈ ನೆಲವನ್ನು ಹೇಗೆ ನನ್ನ ತಾಯಿನೆಲವೆಂದು ಕರೆಯಲಿ? ಈ ಧರ್ಮವನ್ನು ಹೇಗೆ ನನ್ನ ಧರ್ಮವೆಂದು ಕರೆಯಲಿ? ಆತ್ಮಗೌರವವಿರುವ ಯಾವುದೇ ಅಸ್ಪೃಶ್ಯನೂ ಈ ನೆಲದ ಬಗ್ಗೆ ಹೆಮ್ಮೆ ಪಡಲಾರ. ನಮಗೆ ಈ ನೆಲ ತೋರಿದ ಅನ್ಯಾಯ, ನೀಡಿದ ಕಷ್ಟ ಎಷ್ಟೆಂದರೆ ಗೊತ್ತಿದ್ದೋ ಗೊತ್ತಿಲ್ಲದೆಯೋ ನಾವು ಈ ನೆಲಕ್ಕೆ ಅವಿಧೇಯರಾದರೆ ಅದರ ಜವಾಬ್ದಾರಿ ತಾಯಿನೆಲದ್ದೇ ಆಗಿರುತ್ತದೆ. ನನ್ನನ್ನ ದ್ರೋಹಿಯೆಂದು ಕರೆದರೆ ಬೇಸರವಿಲ್ಲ, ನನ್ನ ದ್ರೋಹದ ಜವಾಬ್ದಾರಿ ದ್ರೋಹಿಯೆಂದು ಕರೆದ ನೆಲದ ಮೇಲೆಯೇ ಇದೆ.



-ಡಾ.ಬಿ.ಆರ್.ಅಂಬೇಡ್ಕರ್

ಪಿ ಯು ವಿದ್ಯಾರ್ಥಿಗಳ ಶಿಕ್ಷಕರ ಭವಿಷ್ಯದ ಜತೆ ಚೆಲ್ಲಾಟ ನಿಲ್ಲಿಸಿ!

ಸಂಪಾದಕೀಯ

ಪಿಯು ರಸಾಯನಶಾಸ್ತ್ರ ಪ್ರಶ್ನೆಪತ್ರಿಕೆ ಎರಡು ಬಾರಿ ಸೋರಿಕೆ, ಪಿಯು ಉಪನ್ಯಾಸಕರ ಬೇಡಿಕೆಯನ್ನು ಸಮಯಬದ್ಧವಾಗಿ ಇತ್ಯರ್ಥ ಮಾಡದಿರುವುದು – ರಾಜ್ಯ ಸರಕಾರದ ಹೊಸ ಎರಡು ಅಧ್ವಾನಗಳು. ಸರಕಾರದ ಶಿಕ್ಷಣ ಇಲಾಖೆಯ ಈ ಎರಡು ಅಧ್ವಾನಗಳಿಂದ ಪಿಯು ಫಲಿತಾಂಶ ಮತ್ತು ಸಿಇಟಿ ಪರೀಕ್ಷೆ ವಿಳಂಬಗಳಾಗಿ ಪಿಯು ವಿದ್ಯಾರ್ಥಿಗಳ ಭವಿಷ್ಯ ಹಾಳಾಗುವ ಎಲ್ಲಾ ಸಾಧ್ಯತೆಗಳೂ ಕಾಣುತ್ತಿವೆ. ಸರಕಾರ ಪಿಯು ವಿದ್ಯಾರ್ಥಿಗಳ, ಶಿಕ್ಷಕರ ಭವಿಷ್ಯದ ಜತೆ ಚೆಲ್ಲಾಟವಾಡಲು ನಿರ್ಧರಿಸಿರುವಂತೆ ಕಾಣುತ್ತದೆ.

ಪ್ರಶ್ನೆಪತ್ರಿಕೆ ಎರಡು ಬಾರಿ ಸೋರಿಕೆಯ ತನಿಖೆಯಿಂದ ಹೊರಬರುತ್ತಿರುವ ಸಂಗತಿಗಳು ದಂಗು ಬಡಿಸುವಂಥವು. ಕೋಚಿಂಗ್ ಸ್ಕೂಲ್ ಗಳು, ಆಡಳಿತ, ರಾಜಕೀಯ, ಪೊಲೀಸ್ ವಲಯಗಳ ಕೆಲವರು ಶಾಮೀಲಾಗಿರುವ ಪ್ರಶ್ನೆಪತ್ರಿಕೆ ಸೋರಿಕೆಯ ಮಾಫಿಯಾ ಕೆಲಸ ಮಾಡುತ್ತಿರುವಂತೆ ಕಾಣುತ್ತಿದೆ. ಇಂತಹ ಮಾಫಿಯಾ ಬಗ್ಗೆ ಶೀಘ್ರ ತನಿಖೆ ನಡೆಸಿ ಮಟ್ಟ ಹಾಕುವ ಬದಲು ತಮ್ಮ ಹಕ್ಕುಗಳಿಗೆ ಹೋರಾಟ ನಡೆಸುತ್ತಿರುವ ಪಿಯು ಶಿಕ್ಷಕರ ಮೇಲೆ ಎಸ್ಮಾ ಬ್ರಹ್ಮಾಸ್ತ್ರ ಪ್ರಯೋಗಿಸಲು ಮುಂದಾಗಿದೆ.

ವೇತನ ತಾರತಮ್ಯ ನಿವಾರಣೆಗೆ ಒತ್ತಾಯಿಸಿ ಹಲವಾರು ವರ್ಷದಿಂದ ಪಿ.ಯು. ಉಪನ್ಯಾಸಕರು ಮಂತ್ರಿ, ಶಾಸಕರು, ಅಧಿಕಾರಿಗಳ ಬಳಿ ಹಲವಾರು ಬಾರಿ ಮನವಿ ಮಾಡಿಕೊಂಡಿದ್ದಾರೆ. ನ್ಯಾಯಯುತವಾದ ಬೇಡಿಕೆಯ ಈಡೇರಿಕೆಗಾಗಿ ಶಾಂತಿ, ಸಮಾಧಾನದಿಂದಲೆ ವಿನಂತಿಸಿಕೊಂಡು ಬಂದಿದ್ದಾರೆ. ಪರಿಸ್ಥಿತಿ ಕೈ ಮೀರಿ ಹೋದ ಕಾರಣ, ಬೇರೆ ದಾರಿ ಇಲ್ಲದೆ ಮೌಲ್ಯ ಮಾಪನ ಬಹಿಷ್ಕರಿಸಿ ಧರಣಿ ನಡೆಸುತ್ತಿದ್ದಾರೆ.

1994 ರಲ್ಲಿ ವೇತನ ತಾರತಮ್ಯದ ವಿರುದ್ಧ ಧ್ವನಿ ಎತ್ತಿದ ಉಪನ್ಯಾಸಕರು, 1996 ರಲ್ಲಿ ತೀವ್ರ ಸ್ವರೂಪವನ್ನು ಪಡೆದ ಕೊಂಡು 1996ರಲ್ಲಿ ಹೋರಾಟ ಕಾವು ಜೋರಾಗಿಯೇ ನಡೆಯಿತು. 1998, 2000 ರಲ್ಲಿ ಪಿ.ಯು. ಉಪನ್ಯಾಸಕರು ಮುಷ್ಕರ ನಡೆಸಿದಾಗ ಅವರ ಮೇಲೆ "ಎಸ್ಮಾ" ಎಂಬ ಸರ್ವಾಧಿಕಾರಿ ಕಾನೂನನ್ನು ಹೇರಲಾಯಿತು. ಅನೇಕ ಉಪನ್ಯಾಸಕರು ಜೈಲುವಾಸ ಅನುಭವಿಸಿದರು. ವಿದ್ಯಾರ್ಥಿ ಸಂಘಟನೆಗಳ ಬೆಂಬಲದೊಂದಿಗೆ ಚಳುವಳಿ ಬಲಗೊಂಡು ಉಪನ್ಯಾಸಕರ ಮೇಲೆ ಹಾಕಿದ್ದ ಕಾಯ್ದೆ ವಾಪಸ್ಸಾಯಿತು. ನಂತರ ಅಲ್ಲಿಂದ ಇಲ್ಲಿಯವರೆಗೆ ಪಿ.ಯು ಉಪನ್ಯಾಸಕರು ಶಾಂತಯುತವಾಗಿ ಬೇಡಿಕೆಗಳ ಈಡೇರಿಕೆಗಾಗಿ ಮನವಿ ಮಾಡುತ್ತಾ ಬಂದಿದ್ದಾರೆ. ಮಾನವೀಯತೆ ಇಲ್ಲದ, ಅಕ್ಷರ ನೀಡುವ ಗುರುವನ್ನು ಗೌರವಿಸಿದ ದಪ್ಪನೆಯ ಚರ್ಮದ ಸರಕಾರಕ್ಕೆ ಉಪನ್ಯಾಸಕರ ಗೋಳು ಅರ್ಥವಾಗುತ್ತಿಲ್ಲ. ಅವರ ಬದುಕಿನೊಡನೆ ಸರಕಾರ ನಡೆದು ಕೊಳ್ಳುತ್ತಿರುವ ರೀತಿ ನಿಜಕ್ಕೂ ಖಂಡನೀಯ.

‘ಪದವಿಪೂರ್ವ ಕಾಲೇಜು ಉಪನ್ಯಾಸಕರು ಮತ್ತು ಪ್ರಾಂಶುಪಾಲರ ವೇತನ ತಾರತಮ್ಯ ನಿವಾರಿಸುವ ನಿಟ್ಟಿನಲ್ಲಿ 2011ರಲ್ಲಿ ಶಿಕ್ಷಣ ಇಲಾಖೆಯ ಕಾರ್ಯದರ್ಶಿಯಾಗಿದ್ದ ಜಿ. ಕುಮಾರ್ ನಾಯಕ್ ನೇತೃತ್ವದ ಸಮಿತಿ ವರದಿ ನೀಡಿದೆ. ಈ ವರದಿ ಜಾರಿ ಮಾಡುವಂತೆ ಉಪನ್ಯಾಸಕರು ಕೇಳುತ್ತಿದ್ದರೂ, ಸರಕಾರ ಸ್ಪಂದಿಸದಿರುವುದು ನಾಚಿಕೆಗೇಡಿನ ಸಂಗತಿಯಾಗಿದೆ. ರಾಜ್ಯ ಪಿ.ಯು ಉಪನ್ಯಾಸಕರ ಸಂಘ ಹಾಗೂ ರಾಜ್ಯ ಪಿ.ಯು ಪ್ರಾಂಶುಪಾಲರ ಸಂಘಗಳು ಮೂಲವೇತನವನ್ನು 28,100ರೂ ಗೆ ಹೆಚ್ಚಿಸುವಂತೆ ಬೇಡಿಕೆ ಇಟ್ಟಿವೆ. ಸರಕಾರದ ಜೊತೆ ಹಿಂದೆ ನಡೆಸಿದ ಮಾತು ಕತೆ ಪ್ರಕಾರ ಕುಮಾರ ನಾಯ್ಕ್ ವರದಿಯಂತೆ 26,000 ವೇತನ ನೀಡುವುದಾಗಿ ಒಪ್ಪಿಕೊಂಡಿದ್ದವು. ಅದಕ್ಕೆ ಉಪನ್ಯಾಸಕರ ಸಹಮತವೂ ಸಿಕ್ಕಿತ್ತು. ಆದರೆ ಸರಕಾರ ಜಾರಿ ಮಾಡದೆ "ಮೂಗಿಗೆ ತುಪ್ಪ ಸವರಿ" ಸಂಬಂಧವಿಲ್ಲದವರಂತೆ ಈಗ ವರ್ತಿಸುತ್ತಿದೆ. ಸದ್ಯ ಪಿ.ಯು ಉಪನ್ಯಾಸಕರು 22,800ರೂ ಮೂಲ ವೇತನ ಪಡೆಯುತ್ತಿದ್ದಾರೆ. ನಿಜಕ್ಕೂ ಇದು ಅನ್ಯಾಯವಲ್ಲದೆ ಮತ್ತೇನು? ಇವರಷ್ಟೇ ಓದಿದ ಪದವಿ ಕಾಲೇಜಿನ ಉಪನ್ಯಾಸಕರು ಇವರಿಗಿಂತ 50 ಸಾವಿರ ರೂಪಾಯಿಯಷ್ಟು ಹೆಚ್ಚು ಸಂಬಳ ಪಡೆಯುತ್ತಿದ್ದಾರೆ. ಅಕ್ಕಪಕ್ಕದ ರಾಜ್ಯಗಳ ಉಪನ್ಯಾಸಕರು ಇವರಿಗಿಂತ ಅತಿಹಚ್ಚು ಸಂಬಳ ಪಡೆಯುತ್ತಿದ್ದಾರೆ.

ಉಪನ್ಯಾಸಕರು ಮೌಲ್ಯಮಾಪನ ಬಹಿಷ್ಕರಿಸದೆ ಬೇರೆ ಮಾರ್ಗಗಳೇ ಇಲ್ಲ. ಸರಕಾರ ಅದನ್ನು ಸರಿ ಮಾಡುವ ಮುತುವರ್ಜಿ ತೋರಬೇಕಿದೆ. ಮಕ್ಕಳ ಭವಿಷ್ಯದ ಜೊತೆ ಉಪನ್ಯಾಸಕರಾರು ಚಲ್ಲಾಟವಾಡುತ್ತಿಲ್ಲ. ಮೌಲ್ಯಮಾಪನ ಬಹಿಷ್ಕರಿಸಿರುವ ಉಪನ್ಯಾಸಕರಲ್ಲಿ ಬಹುತೇಕರ ಮಕ್ಕಳು ದ್ವಿತೀಯ ಪಿ.ಯು.ಪರೀಕ್ಷೆ ಬರೆಯುತ್ತಿದ್ದಾರೆ. ವೇತನ ತಾರತಮ್ಯ ನಿವಾರಿಸುವಂತೆ ಒತ್ತಾಯಿಸಿ ಕಳೆದ ವರ್ಷವೂ ಪಿ.ಯು. ಉತ್ತರ ಪತ್ರಿಕೆ ಮೌಲ್ಯಮಾಪನವನ್ನು ಒಂದು ದಿನ ಬಹಿಷ್ಕರಿಸಲಾಗಿತ್ತು.

ಈ ಬಾರಿಯ ಶೈಕ್ಷಣಿಕ ಅವಧಿಯಲ್ಲಿ 2016ರ ಜನವರಿ 13ರಂದು ಒಂದು ದಿನದ ಸಾಂ–ಕೇತಿಕ ಉಪವಾಸ ಸತ್ಯಾಗ್ರಹ ನಡೆಸಲಾಗಿತ್ತು. ಕಪ್ಪುಪಟ್ಟಿ ಧರಿಸಿ ದ್ವಿತೀಯ ಪಿ.ಯು.ಸಿ ಪರೀಕ್ಷೆ ಕರ್ತವ್ಯ ನಿಭಾಯಿಸುವ ಮೂಲಕ ಸಾಂಕೇತಿಕ ಪ್ರತಿಭಟನೆ ನಡೆಸಲಾಗಿದೆ ಆದರೂ, ಸರ್ಕಾರ ಬೇಡಿಕೆ ಈಡೇರಿಸಲು ಮುಂದಾಗಲಿಲ್ಲ. ಈಗ ಅನಿವಾರ್ಯವಾಗಿ ಮೌಲ್ಯಮಾಪನ ಬಹಿಷ್ಕರಿಸಿ ಅನಿರ್ದಿಷ್ಟಾವಧಿ ಸತ್ಯಾಗ್ರಹ ನಡೆಸುತ್ತಿರುವುದಕ್ಕೆ ಸರಕಾರವೆ ಹೊಣೆಯಾಗಿದೆ. ಸತ್ಯಾಗ್ರಹ 12ನೇ ದಿನ ದಾಟಿದೆ. ಅದರ ನಡುವೆಯೂ ರಸಾಯನಶಾಸ್ತ್ರ ಮರುಪರೀಕ್ಷೆಯಂದು ಕೆಲಸಕ್ಕೆ ಹಾಜರಾಗಿದ್ದರು. ಏಪ್ರಿಲ್ 14ರಿಂದ ಉಪವಾಸ ಸತ್ಯಾಗ್ರಹಕ್ಕೆ ಇಳಿದರೂ ಸರಕಾರ ಇನ್ನೂ ಸ್ಪಂದಿಸಿಲ್ಲ. ಆದ್ದರಿಂದಲೇ ಏಪ್ರಿಲ್ 14ರಂದು ಭೇಟಿ ಮಾಡಲು ಬಂದ ಶಿಕ್ಷಕರ/ಪದವೀಧರ ಕ್ಷೇತ್ರದ ಎಂ.ಎಲ್.ಸಿ.ಗಳಿಗೆ ‘ಗೆಟ್ ಔಟ್’ ಹೇಳುವಷ್ಟು ಆಕ್ರೋಶ ಬಂದಿದೆ.

20 ವರ್ಷದಿಂದ ನ್ಯಾಯಯುತವಾದ ಬೇಡಿಕೆಯನ್ನು ಈಡೇರಿಸಲಾಗದ ಸರಕಾರಗಳು ಎಸ್ಮಾ ಎಂಬ ಬ್ರಹ್ಮಾಸ್ತ್ರವನ್ನು ಉಪನ್ಯಾಸಕರ ಮೇಲೆ ಬಿಡಲು ಹೊರಟಿದೆ. ಖಾಸಗಿ ಕಾಲೇಜುಗಳ ಶಿಕ್ಷಕರನ್ನು ತರುವ ಮತ್ತಿತರ ಬದಲಿ ವ್ಯವಸ್ಥೆ ಮಾಡುವ ಬೆದರಿಕೆ ಹಾಕುತ್ತಿದೆ. ಇದನ್ನು ಬಿಟ್ಟು ಕುಮಾರ್ ನಾಯಕ್ ಸಮಿತಿ ವರದಿಯನ್ನು ಜಾರಿ ಮಾಡಬೇಕು. ಪಿಯು ವಿದ್ಯಾರ್ಥಿ ಮತ್ತು ಶಿಕ್ಷಕರ ಭವಿಷ್ಯದ ಜತೆ ಚೆಲ್ಲಾಟ ನಿಲ್ಲಿಸಬೇಕು.

●

ಎಡ ಪಕ್ಷಗಳ ಜಾಥಾ ಹಾಗೂ ರ‍್ಯಾಲಿ

ಕೇಂದ್ರ ಹಾಗೂ ರಾಜ್ಯ ಸರಕಾರಗಳ ಜನವಿರೋದಿ ಬಜೆಟ್‌ಗಳನ್ನು ಮತ್ತು ಕೋಮುವಾದ ಹಾಗೂ ಜಾತಿವಾದವನ್ನು ವಿರೋದಿಸಿ, ರೈತರು, ಕೂಲಿಕಾರರು ಮತ್ತು ಕಾರ್ಮಿಕರ ಹಿತಾಸಕ್ತಿಗಳಿಗಾಗಿ, ಜನತೆಯ ಸಂರಕ್ಷಣೆಗಾಗಿ ರಾಜ್ಯ ಮಟ್ಟದ ಬೃಹತ್ ಪ್ರತಿಭಟನಾ ಜಂಟಿ ರ‍್ಯಾಲಿಯನ್ನು ಜೂನ್ ತಿಂಗಳ ಮೊದಲ ವಾರದಲ್ಲಿ ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಅಯೋಜಿಸಲು ರಾಜ್ಯದ ಐದು ಎಡಪಕ್ಷಗಳು ನಿರ್ಧರಿಸಿವೆ. ಇದನ್ನು ಏಪ್ರಿಲ್ 9ರಂದು ಪತ್ರಿಕಾಗೋಷ್ಠಿಯಲ್ಲಿ ಸಿಪಿಐ(ಎಂ), ಸಿಪಿಐ, ಫಾರ್ವರ್ಡ್ ಬ್ಲಾಕ್, ಎಸ್‌ಯುಸಿಐ(ಸಿ), ಸಿಪಿಐ(ಎಂ.ಎಲ್.)–ಲಿಬರೇಶನ್ ಪಕ್ಷಗಳ ಪ್ರತಿನಿಧಿಗಳು ಪ್ರಕಟಿಸಿದರು.

ಐದು ಎಡಪಕ್ಷಗಳು ಏಪ್ರಿಲ್ 05, 2016ರಂದು ಇಎಂಎಸ್ ಭವನದಲ್ಲಿ ಸಭೆ ಸೇರಿ, ಈ ಕುರಿತ ಕಾರ್ಯಕ್ರಮವನ್ನು ರೂಪಿಸಿವೆ. ಬೆಂಗಳೂರಿನಲ್ಲಿ ನಡೆಯುವ ಬೃಹತ್ ಪ್ರತಿಭಟನಾ ರ‍್ಯಾಲಿಯ ಪೂರ್ವದಲ್ಲಿ ರಾಜ್ಯದಾದ್ಯಂತ ಜಂಟಿ ರಾಜಕೀಯ ಪ್ರಚಾರ ಜಾಥಾವನ್ನು ಮೇ ತಿಂಗಳಾದ್ಯಂತ ಸಂಘಟಿಸಲು ನಿರ್ಣಯಿಸಿವೆ. ಇದಕ್ಕೆ ಪೂರ್ವದಲ್ಲಿ ಎಲ್ಲಾ ಜಿಲ್ಲೆಗಳಲ್ಲಿ ಜಂಟಿ ಸಮಾವೇಶಗಳನ್ನು ಏರ್ಪಡಿಸಲು ಸಹ ನಿರ್ಧರಿಸಿವೆ.

ಎಡ ಪಕ್ಷಗಳ ಸಭೆಯು, ರಾಜ್ಯದ ಜನತೆಯ ಹಿತರಕ್ಷಣೆಯಲ್ಲಿ ಎಡಪಕ್ಷಗಳ ಪಾತ್ರ ಮುಂಚೂಣಿಯಲ್ಲಿರುವುದನ್ನು ಗಮನಿಸಿ ಅದನ್ನು ಮತ್ತಷ್ಟು ಬಲಪಡಿಸಿ ವಿಸ್ತಾರಗೊಳಿಸಲು ಚರ್ಚಿಸಿತು. ದೇಶದಾದ್ಯಂತ ಜನತೆಯ ಹಿತಗಳನ್ನು ಮತ್ತು ಚುನಾವಣೆಯಲ್ಲಿ ಜನತೆಗೆ ನೀಡಿದ ಭರವಸೆಗಳನ್ನು ಈಡೇರಿಸುವಲ್ಲಿ ಘೋರವಾಗಿ ವಿಫಲವಾಗಿರುವ ಆರ್‌ಎಸ್‌ಎಸ್ ನೇತೃತ್ವದ ಬಿಜೆಪಿಯು ಮತ್ತು ಅದರ ಕೇಂದ್ರ ಸರಕಾರವು ಜನತೆಯ ಪ್ರತಿರೋಧವನ್ನು ಎದುರಿಸಲಾಗದೇ ಜನತೆಯನ್ನು ವಿಭಜಿಸಿ ಆಳುವ ಪ್ರಯತ್ನವನ್ನು ಗಂಭಿರವಾಗಿ ಮುಂದುವರೆಸಿರುವುದನ್ನು ಸಭೆಯು ಖಂಡಿಸಿತು.

ಭಾರತದ ಸಂವಿಧಾನದ ಪೀಠಿಕೆಯೇ ಹೇಳಿರುವಂತೆ, ಮೂಲಭೂತ ಹಕ್ಕುಗಳು ಮತ್ತು ಕರ್ತವ್ಯಗಳನ್ನು ವಿಧಿಸಿರುವ, ಒಂದು ಸಾರ್ವಭೌಮ, ಪ್ರಜಾಸತ್ತಾತ್ಮಕ, ಜಾತ್ಯಾತೀತ ಮತ್ತು ಸಮಾಜವಾದಿ ಗಣರಾಜ್ಯವಾಗಿ ಭಾರತ ರಚನೆಗೊಂಡಿದ್ದು, ಪ್ರಭುತ್ವವು ಅದರಲ್ಲಿರುವ ಪ್ರಭುತ್ವದ ಧೋರಣೆಯ ಕುರಿತ ನಿರ್ದೇಶಕ ಸೂತ್ರಗಳಲ್ಲಿ ಅಡಕವಾಗಿರುವ ಕರ್ತವ್ಯಗಳನ್ನು ಈಡೇರಿಸಬೇಕು ಎಂದು ಆದೇಶ ನೀಡಿದೆ. ಹೀಗಿರುವಾಗ, ಪ್ರಭುತ್ವದ ಚುಕ್ಕಾಣಿ ಹಿಡಿದಿರುವ ಬಿಜೆಪಿ ಮತ್ತು ಅದರ ನೇತಾರ ಸಂಘ ಪರಿವಾರ ಜನತೆಯ ಹಿತಗಳನ್ನು ಮರೆತು, ಈಗ ದೇಶದಾದ್ಯಂತ ಎಬ್ಬಿಸಿರುವ ’ರಾಷ್ಟ್ರ–ವಿರೋಧ’ದ ಪ್ರಶ್ನೆ ಸಂವಿಧಾನದ ಪೀಠಿಕೆ ಮತ್ತು ಪ್ರಭುತ್ವದ ಧೋರಣೆಯ ನಿರ್ದೇಶಕ ಸೂತ್ರಗಳಿಗೆ ವಿರುದ್ಧವಾದದ್ದು ಎಂದು ಸಭೆ ಅಭಿಪ್ರಾಯ ಪಟ್ಟಿತು.

ಹೈದರಾಬಾದ್ ಹಾಗೂ ದೆಹಲಿ ಜವಾಹರ್‌ಲಾಲ್‌ನೆಹರು ವಿಶ್ವವಿದ್ಯಾನಿಲಯಗಳ ವಿದ್ಯಾಮಾನಗಳಿಗೆ ಸಂಬಂಧಿಸಿ ಕೇಂದ್ರ ಸರಕಾರ ಮತ್ತು ಬಿಜೆಪಿ ಹಾಗೂ ಸಂಘ ಪರಿವಾರದ ಅಹಿತಕರ ನಡೆಗಳು ಖಂಡನೀಯವಾಗಿವೆ. ಕೋಮುವಾದಿ ಶಕ್ತಿಗಳು ಬಲಪಂಥೀಯ ಆಡಳಿತದ ಮೇಲೆ ನಿರ್ಣಾಯಕ ಪ್ರಭಾವ ಹೊಂದಿರುವುದನ್ನು ಇವು ಮರಳಿ ಸಾಬೀತುಪಡಿಸಿವೆ,

ರಾಜ್ಯದಲ್ಲಿ ಕಾಂಗ್ರೆಸ್ ಸರಕಾರವಿದ್ದರೂ ಇಲ್ಲಿನ ಸನ್ನಿವೇಶ ಬಹಳವಾಗಿಯೇನೂ ಭಿನ್ನವಾಗಿಲ್ಲ ಎಂದು ಎಡಪಕ್ಷಗಳು ಪರಿಗಣಿಸಿವೆ. ರಾಜ್ಯ ಸರಕಾರಕ್ಕೆ ಕೂಡಾ ರಾಜ್ಯದಲ್ಲಿನ ಕೋಮುವಾದಿ ತಿಕ್ಕಾಟಗಳನ್ನು ಮತ್ತು ಚಟುವಟಿಕೆಗಳನ್ನು ರಾಜ್ಯದ ಅಭಿವೃದ್ಧಿ ಹಾಗೂ ಜನತೆಯ ಹಿತಾಸಕ್ತಿಯಿಂದ ತಡೆಯುವ ಗಂಭೀರ ಉದ್ದೇಶ ಕಾಣುತ್ತಿಲ್ಲ ಅಥವಾ ಅದ–ಕ್ಕೆ ಕಾರಣರಾದವರನ್ನು ಶಿಕ್ಷಿಸುವ ಸಾಮರ್ಥ್ಯ ಇದ್ದಂತಿಲ್ಲ. ಈ ಕುರಿತ ಸರಕಾರದ ಮೆದು ಧೋರಣೆ ಖಂಡನೀಯವಾಗಿದೆ.

ಮೈಸೂರುಜಿಲ್ಲೆಯ ಸ್ವತಃ ಮುಖ್ಯಮಂತ್ರಿಗಳ ಕ್ಷೇತ್ರದಲ್ಲಿ ಸಂಘ ಪರಿವಾರಕ್ಕೆ ಸಂಬಂಧಪಟ್ಟ ಶ್ರೀಯುತ ರಾಜು ಎಂಬವರ ಖಂಡನಾರ್ಹ ಕೊಲೆಯ ನಂತರ ಉಂಟಾದ ಗಲಭೆಯ ಸ್ಥಿತಿ ಇದಕ್ಕೊಂದು ತಾಜಾ ಉದಾಹರಣೆ. ದಕ್ಷಿಣಕನ್ನಡ ಜಿಲ್ಲೆಯ ಪುತ್ತೂರು ದೇವಸ್ಥಾನದ ಉತ್ಸವದ ಪ್ರಶ್ನೆಯಲ್ಲಿ ಅಲ್ಲಿಯ ಜಿಲ್ಲಾ ಕಮಿಶನರ್‌ರವರ ಬೆಂಬಲಕ್ಕೆ ನಿಲ್ಲದಿರುವುದರಿಂದ ರಾಜ್ಯದ ಆಡಳಿತದ ಜಾತ್ಯಾತೀತ ಸ್ವರೂಪಕ್ಕೆ ಧ–ಕ್ಕೆ ಬಂದಿದೆ. ಅಲ್ಪಸಂಖ್ಯಾತ ಸಮುದಾಯಕ್ಕೆ ಸೇರಿದ ಜಿಲ್ಲಾ ಕಮಿಶನರ್ ಅವರ ಹೆಸರನ್ನು ಮುದ್ರಿಸಿದ್ದು ಒಂದು ತಪ್ಪು ಎಂದು ರಾಜ್ಯದ ಅಡ್ವೋಕೇಟ್ ಜನರಲ್ ಹೈಕೋರ್ಟಿನ ಮುಂದೆ ಹೇಳಿರುವುದು ರಾಜ್ಯ ಆಡಳಿತದ ವಿಫಲತೆಯನ್ನು ಬಯಲಿಗೆಳೆದಿದೆ.

ದೇಶದಾದ್ಯಂತ ದಲಿತರ ಮೇಲಿನ ದೌರ್ಜನ್ಯಗಳು ಮುಂದುವರೆದಿರುವಂತೆಯೇ, ಅವುಗಳನ್ನು ರಾಜ್ಯದಲ್ಲಿಯೂ ಅವ್ಯಾಹತವಾಗಿ ಮುಂದುವರೆಯಲು ಬಿಡಲಾಗಿದೆ. ಮಾಜಿ ಪ್ರಧಾನಮಂತ್ರಿಗಳಾದ ಶ್ರೀ ಹೆಚ್‌ಡಿ ದೇವೇಗೌಡರ ಸ್ವಕ್ಷೇತ್ರ ಮತ್ತು ಅವರ ಪ್ರಭಾವಿ ಪುತ್ರ ಹೆ ಡಿ ರೇವಣ್ಣನವರ ಶಾಸನಸಭಾ ಕ್ಷೇತ್ರವಾದ ಹೊಳೆನರಸೀಪುರದ, ಸಿಗರೇನಹಳ್ಳಿಯ ದಲಿತರಿಗೆ ಈಗಲೂ ಸಾಮೂಹಿಕ ಬಹಿಷ್ಕಾರ ಮುಂದುವರೆದಿದೆ. ದಲಿತರು ಮತ್ತು ಎಡಚಳುವಳಿಗಾರರ ಒತ್ತಾಯದ ಮೇರಗೆ ದಲಿತರ ಹಕ್ಕುಗಳ ಸಂರಕ್ಷಣೆಗೆ ಮುಂದಾದ ಜಿಲ್ಲಾ ಆಡಳಿತದ ಕ್ರಮದ ಮೇಲೆ ಹೆಚ್‌ಡಿ ರೇವಣ್ಣ ಮತ್ತು ಆತನ ಬೆಂಬಲಿಗರು ಸದರಿ ಗ್ರಾಮದಲ್ಲಿ ದಲಿತರಿಗೆ ಪ್ರವೇಶದ ಹಕ್ಕನ್ನು ನಿರಾಕರಿಸಿ ಧಾಳಿನಡೆಸಿರುವುದು ಖಂಡನೀಯವಾಗಿದೆ. ತಕ್ಷಣವೇ ಅವರ ಮೇಲೆ ಕಾನೂನು ಕ್ರಮ ಜರುಗಿಸಲು ಒತ್ತಾಯಿಸಿದೆ.

ರಾಜ್ಯ ಸರಕಾರ ತನ್ನ ಸ್ವಂತ ಕಾರ್ಮಿಕ ಇಲಾಖೆಯು, ಕಾರ್ಮಿಕರಿಗೆ ಕನಿಷ್ಠ ವೇತನವನ್ನು 10 ಸಾವಿರ ರೂಪಾಯಿಗಳ ಸುತ್ತಲೂ ನಿಗದಿಸಲು ಉದ್ದೇಶಿಸಿದ್ದ ಕ್ರಮವನ್ನು ರಕ್ಷಿಸಿಕೊಳ್ಳುವಲ್ಲಿಯೂ ಘೋರವಾಗಿ ವಿಫಲವಾಗಿದೆ. ಈ ಮೂಲಕ ಮುಖ್ಯಮಂತ್ರಿಗಳು ಈ ಕುರಿತು ಕಾರ್ಮಿಕ ಸಂಘಗಳ ಜೊತೆಗಿನ ಏಪ್ರಿಲ್ 12, 2016ರಂದು ಜರುಗಿದ ಮಾತುಕತೆಯಲ್ಲಿ ನೀಡಿದ್ದ ಭರವಸೆಯನ್ನು ಉಲ್ಲಂಘಿಸಿದಂತಾಗಿದೆ. ಕೆಲ ಶಕ್ತಿಶಾಲಿ ಮಂತ್ರಿಗಳು ರೂಪಿಸಿಕೊಂಡ ಶಕ್ತಿ ಕೂಟವು ಕಾರ್ಮಿಕ ಇಲಾಖೆಯು ನಿಗದಿಸುವ ಕನಿಷ್ಠ ವೇತನದ ಹೆಚ್ಚಳದ ವಿರುದ್ಧ, ಕಾರ್ಯನಿರ್ವಹಿಸುವಂತಾಗಿರುವುದು ತೀವ್ರ ಖಂಡನೀಯ ಬೆಳವಣಿಗೆಯಾಗಿದೆ ಮತ್ತು ತೀವ್ರ ಬೆಲೆ ಏರಿಕೆಗಳ ಈ ದಿನಗಳಲ್ಲಿ ರಾಜ್ಯದ ಕಾರ್ಮಿಕರ ಈ ಕುರಿತ ಹಕ್ಕೊತ್ತಾಯವು ಕಡೆಗಣಿಸಲ್ಪಡುವಂತಾಗಿದೆ.

ರಾಜ್ಯದ ರೈತರು ಮತ್ತು ಕೃಷಿ ಕೂಲಿಕಾರರು ಅತ್ಯಂತ ಯಾತನೆಯ ಮತ್ತು ಸಂಕಷ್ಟಮಯ ವಾತಾವರಣದ ಒತ್ತಡದಲ್ಲಿ ಬದುಕುತ್ತಿದ್ದಾರೆ. ಅವರ ಸಂಕಷ್ಟಗಳನ್ನು ಕೇಂದ್ರ ಹಾಗೂ ರಾಜ್ಯ ಸರಕಾರಗಳು

ಪುಟ 4 ಕ್ಕೆ

ಅಧ್ಯಕ್ಷತೆಗೆ ಯಡ್ಯೂರಪ್ಪ ನೇಮಕ: ಬಿಜೆಪಿಯ ದಿವಾಳಿತನದ ಪ್ರತೀಕ

ಎಸ್. ವೈ. ಗುರುಶಾಂತ್

'ನಾನೀಗ ಹಿಂದಿನ ತಪ್ಪುಗಳಿಂದ, ಅನುಭವಗಳಿಂದ ಕಲಿತಿದ್ದೇನೆ. ನಾನೀಗ ಪೂರ್ಣ ಬದಲಾದ ಮನುಷ್ಯ' ಹೀಗೆ ಅಂತರಾತ್ಮವನ್ನು ತೆರೆದಿಟ್ಟವರು ಬಿಜೆಪಿಯ ಅಧ್ಯಕ್ಷರಾಗಿ ನೇಮಕಗೊಂಡಿರುವ ಬಿ.ಎಸ್.ಯಡ್ಯೂರಪ್ಪನವರು. ಎ.14 ರ ಸಾರ್ವಜನಿಕ ಸಮಾರಂಭದಲ್ಲಿ ಪದವಿಯ 'ಅಧಿಕಾರ'ವನ್ನು ಸ್ವೀಕರಿಸಿದರು. ಪಕ್ಷದ ಆಂತರಿಕ ವಿದ್ಯಾಮಾನಕ್ಕೆ ಇಂತಹ ಅದ್ದೂರಿ ಸಮಾರಂಭ ಬೇಕಾ? ಇದೇನು ಮಹರಾಜನ ಪಟ್ಟಾಭಿಷೇಕವಾ! ವಿಪರ್ಯಾಸವೆಂದರೆ ಮನುವಾದದ ವಿರುದ್ಧ ರಾಜಿಯಿಲ್ಲದ ಅವಿರತ ಹೋರಾಟ ಮಾಡಿದ ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ರವರ ಜನ್ಮ ದಿನದಂದು ಇಂತಹ ಸಮಾರಂಭ! ಬಾಬಾ ಸಾಹೇಬರು ಯಾರನ್ನು, ಯಾವುದನ್ನು ವಿರೋಧಿಸಿದ್ದರೋ ಅದೇ ಮನುವಾದಿಗಳಿಂದಲೇ ನಟನೆ! ಲಿಂಗಾಯತರ ಮತಗಳನ್ನು ಸೆಳೆಯಲೆಂದೇ ಮೇಲ್ ಜಾತಿ ರಾಜಕೀಯ ತಂತ್ರ ಹೆಣೆದಿರುವ ಬಿಜೆಪಿ ದಲಿತರನ್ನು ಓಲೈಸಲು ಸಹ ಒಂದು ಪ್ರಯತ್ನವನ್ನು ಮಾಡುತ್ತಿರುವುದು ಕಾಣದ ಸಂಗತಿಯೇನಲ್ಲ. ವಿಚಿತ್ರವೆಂದರೆ ಬಿ.ಎಸ್.ವೈ. ಅಧ್ಯಕ್ಷ ಗಾದಿಗೆ ಹೆಸರನ್ನು ಹೈಕಮಾಂಡ್ ಪ್ರಕಟಿಸಿದ ಬಳಿಕವೇ ಅದು ಅಧಿಕಾರಕ್ಕೆ ಬಂದೇ ಬಿಟ್ಟಿದೆಯೆಂಬ ಭ್ರಮೆಯಲ್ಲಿ ತೇಲುತ್ತಿದೆ. ಅಧಿಕಾರಕ್ಕೆ ಬರೋದು ಅಷ್ಟು ಸುಲಭವೇ?

ನೇಮಕದ ಹಿಂದೆ–ಮುಂದೆ

ಕಳೆದ ವಾರದಲ್ಲಿ ರಾಜ್ಯ ಬಿಜೆಪಿಯ ಕಾರ್ಯಕಾರಿಣಿ ನಡೆಯಿತಾದರೂ ಅಲ್ಲಿ ಅ ಧ್ಯಕ್ಷರ 'ಆಯ್ಕೆ' ಆಗಲಿಲ್ಲ. ಕಾರ್ಯಕಾರಿಣಿ ಮುಗಿದ ಮೇಲೆ ದೆಹಲಿ ದೊರೆಗಳು ತಮ್ಮ ಅಣತಿಯಂತೆ ನಡೆಯಬೇಕೆಂಬ ಒಬ್ಬ ಸಾಮಂತನನ್ನು ಕರ್ನಾಟಕಕ್ಕೆ 'ನೇಮಿಸಿ ಆದೇಶ' ಹೊರಡಿಸಿದರು. ಆದರೂ ಬಿಜೆಪಿ ಕಾಂಗ್ರೆಸ್‌ಗಿಂತ ಭಿನ್ನ ಪಕ್ಷವೆಂದೂ, ಕಾಂಗ್ರೆಸ್‌ನಂತೆ ಹೈಕಮಾಂಡ್ ಸಂಸ್ಕೃತಿ ನಮ್ಮದಲ್ಲ ಎಂದು ಅವರು ಹೇಳಿದರೆ ನಾವು ನಂಬಬೇಕೆಂದು ಬಯಸುತ್ತಾರೆ! ಅಧ್ಯಕ್ಷರ ಆಯ್ಕೆಯನ್ನು ಪ್ರಜಾಪ್ರಭುತ್ವ ಕ್ರಮದಂತೆ ಅಂದೇಕೆ ಮಾಡಲಿಲ್ಲ?

ಯಡ್ಯೂರಪ್ಪನವರು ಹೇಳಿರುವಂತೆ ಹಿಂದಿನ ತಪ್ಪುಗಳಿಂದ ಅದೇನನ್ನು ಕಲಿತಿದ್ದಾರೆ, ಅವರೆಷ್ಟು ಬದಲಾಗಿದ್ದಾರೆ ಎಂಬುದನ್ನು ಕಾಲವೇ ಮತ್ತೇ ಹೇಳಬೇಕು. ಯಡ್ಯೂರಪ್ಪ ಮತ್ತು ಬಿಜೆಪಿಯ ಹೊಗಳು ಭಟ್ಟಂಗಿ ತುತ್ತೂರಿಗಳು ಹಾಗೇ ಹೇಳಿದಾಕ್ಷಣ ನಂಬಿ ಬಿಡಬೇಕೆ? ತಾನೊಬ್ಬ ದುರಂಹಕಾರಿ, ಭ್ರಷ್ಟ ಎಂಬ ಸಾರ್ವಜನಿಕರ ಅನಿಸಿಕೆಯನ್ನು ಮರೆಸಲು ಈ ವಿನಯವೂ ಇರಬಹುದು! ಈಗಲೂ ಅವರ ಮೇಲೆ ಅನೇಕ ಹಗರಣ, ಭ್ರಷ್ಟಚಾರದ, ಡಿ ನೋಟಿಫಿಕೇಷನ್‌ನ ಹತ್ತಾರು ಪ್ರಕರಣಗಳಿವೆ. ಅಕ್ರಮಗಳ ಆರೋಪಗಳಿವೆ. ರಾಜ್ಯ ಹೈಕೋರ್ಟ್‌ನಲ್ಲಿ ಕೆಲ ಪ್ರಕರಣಗಳ ಖುಲಾಸೆಯ ತೀರ್ಪು ಪ್ರಕಟಗೊಳಿಸಿದ ಕೂಡಲೇ ಸಚ್ಚಾರಿತ್ರ್ಯ ಪ್ರಾಪ್ತವಾಗುವುದಿಲ್ಲ. ಅವೀಗ ಮತ್ತೇ ಸುಪ್ರಿಂ ಕೋರ್ಟ್‌ನ ಮೆಟ್ಟಿಲೇರಲಿವೆ. ಮೇಲಾಗಿ ಇದೀಗ ಶಿವಮೊಗ್ಗ ಜಿಲ್ಲೆ ಭದ್ರಾವತಿ ತಾಲೂಕಿನ ಹುಣಸೇಕಟ್ಟೆ ಗ್ರಾಮದ ಅರಣ್ಯ ಭೂಮಿ ಒತ್ತುವರಿ ಅರೋಪದಲ್ಲಿ ಬಿ.ಎಸ್.ವೈ ಮತ್ತು ಪುತ್ರ ರಾಘವೇಂದ್ರರ ಮೇಲೆ ಮೊಕದ್ದಮೆ ಹೂಡುವಂತೆ ಹೈಕೋರ್ಟ್ ನೀಡಿದ ನಿರ್ದೇಶನವನ್ನು ತಡವಾಗಿಯಾದರೂ ಲೋಕಾಯುಕ್ತ ಈಗ ಜಾರಿಗೊಳಿಸುತ್ತಿದೆ.

ಎಂತಹ ವಿಚಿತ್ರ! ಹಿಂದೆ ಬಿಜೆಪಿ ರಾಜ್ಯದಲ್ಲಿ ಅಧಿಕಾರದಲ್ಲಿರುವಾಗಲೇ ಯಡ್ಯೂರಪ್ಪನವರ ಮೇಲೆ ಕ್ರಿಮಿನಲ್ ಮೊಕದ್ದಮೆಗಳು ಹೂಡಲ್ಪಟ್ಟವು. ಮೊಟ್ಟ ಮೊದಲ ಬಾರಿಗೆ ಮುಖ್ಯಮಂತ್ರಿಯೊಬ್ಬರು ಸೆಂಟ್ರಲ್ ಜೈಲಿಗೆ ತಳ್ಳಲ್ಪಟ್ಟರು. ರಾಜ್ಯವೇ ಗಣಿ ಹಾಗೂ ಭೂಮಾಫಿಯಾಗಳ ಲೂಟಿ, ಅಕ್ರಮಗಳಿಂದ ತತ್ತರಿಸಿತು. ಜನರ ಪೀಡನೆಗೆ ಎಣೆಯಿಲ್ಲವಾಯಿತು. ಜನ ದ್ರೋಹ, ಅರಾಜಕತೆ, ದುರಾಡಳಿತದಂತಹ ಘನ ಕೃತ್ಯಗಳಿಂದ ಜನ ಯಡ್ಯೂರಪ್ಪನವರಿಗೆ, ಬಿಜೆಪಿಗೆ ಧಿಕ್ಕಾರ ಹಾಕಿದರು. ಸರ್ವ ಫಲವನ್ನೂ ಅನುಭವಿಸಿದ ಸಂಘಪರಿವಾರ, ಬಿಜೆಪಿ ಮುಖ್ಯ ನಾಯಕರು ಮುಖ ಹೀನರಾದಾಗ ಕ್ರಿಮಿನಲ್ ಕೇಸ್‌ಗಳ ಕಾರಣಗಳಿಂದ ಯಡ್ಯೂರಪ್ಪನವರನ್ನು ದೂರವಿಟ್ಟರು! ಯಡ್ಯೂರಪ್ಪ ಅಷ್ಟೊಂದು ಪಾತಾಳಕ್ಕೆ ಇಳಿಯಲು ಇಡೀ ಸಂಘಪರಿವಾರ ಕಾರಣವಾದರೂ ಅದರ ಹೊಣೆಯನ್ನೆಲ್ಲ ಯಡ್ಡಿಯವರ ಹೆಗಲೇರಿಸಿ ಮೆತ್ತಗೆ ಹಿಂದೆ ಸರಿದರು. ತಾವು ಅಧಿಕಾರದಲ್ಲಿದ್ದಾಗ ನಡೆಸಿದ ಪಾತಕಗಳಲ್ಲಿ ತನ್ನ ಪಾಲಿಲ್ಲವೆಂದರೂ ಜನ ಸರಿಯಾಗಿ ತೀರ್ಪು ನೀಡಿ ಸೋಲಿಸಿ ಅಧಿಕಾರದಿಂದ ಉಚ್ಚಾಟಿಸಿದರು. ಆದರೆ ಈಗ ಆ ಜನಾದೇಶವನ್ನೂ ಗಾಳಿಗೆ ತೂರಿದ್ದಾರೆ. . ಅವರೇ ಮತ್ತೇ ಅದೇ ಯಡ್ಯೂರಪ್ಪನನ್ನೇ ಹಿಡಿದು ಬಿಜೆಪಿಯನ್ನು ಮತ್ತೇ ಅಧಿಕಾರಕ್ಕೆ ತರಲು ದುಂಬಾಲು ಬಿದ್ದಿದ್ದಾರೆ! ಅಂದರೆ ನೀತಿ ಪಾಠ ಹೇಳುವ ಸಂಘಪರಿವಾರ –ಬಿಜೆಪಿಯ ಕೇಂದ್ರ ಮತ್ತು ರಾಜ್ಯ ನಾಯಕತ್ವ ಎಂತಹ ತಾತ್ವಿಕ, ರಾಜಕೀಯ, ನೈತಿಕ ದಿವಾಳಿ ಎದ್ದಿದೆ ಎಂಬುದನ್ನು ನಾಚಿಕೆ ಬಿಟ್ಟು ಒಪ್ಪಿಕೊಂಡಿದೆ. ಈಗದರ ಸ್ಥಿತಿ 'ಹಳೆಯ ಗಂಡನ ಪಾದವೇ ಗತಿ' ಎಂಬಂತೆ ಯಡ್ಯೂರಪ್ಪನ ಕಾಲು ಹಿಡಿದು ಜೋತು ಬಿದ್ದಿದೆ. ಹಾಗೇ ಯಡ್ಯೂರಪ್ಪನವರಿಗೂ ಬೇರೆ ಗತಿಯೇನಿದೆ?

ತಂತ್ರಗಾರಿಕೆ

ನಿಜ, ಬಿಜೆಪಿ–ಸಂಘಪರಿವಾರ ಸಮಯ ಸಾಧಕತನ ಮತ್ತು ಸಂದರ್ಭಸಾಧಕತೆಯಲ್ಲಿ ನುರಿತ ಕಲೆಗಾರರು! ಬಿಜೆಪಿಗೆ ಯಡ್ಯೂರಪ್ಪನವರ ಅಗತ್ಯವಿದೆ. ಹಾಗೇ ಬಿ.ಎಸ್.ವೈ.ಗೆ ಬಿಜೆಪಿ ಎಂಬ ದೋಣಿಯೂ ಬೇಕಿದೆ. ಯಡ್ಯೂರಪ್ಪನವರನ್ನು ರಾಜ್ಯ ಅಧ್ಯಕ್ಷ ಹುದ್ದೆಗೆ ನೇಮಿಸುವಾಗಲೂ ಮುಂಬರುವ 2018ರ ವಿಧಾನಸಭಾ ಚುನಾವಣೆಯಲ್ಲಿ ಮತ್ತೇ ಲಿಂಗಾಯತರ ಓಟುಗಳನ್ನು ಕ್ರೋಢೀಕರಿಸಿಕೊಳ್ಳುವ ಲೆಕ್ಕಾಚಾರ ಸ್ಪಷ್ಟ. ರಾಜ್ಯದ ಕಾಂಗ್ರೆಸ್‌ನ ಸರಕಾರದ ಶಿಥಿಲ ಆಡಳಿತ, ನಿಯಂತ್ರಣವೇ ಇಲ್ಲದ ಭ್ರಷ್ಟಾಚಾರ ಮತ್ತು ರಾಜಕೀಯ ನಿಷ್ಕ್ರಿಯತೆಯ ಸೋಲಿನಿಂದ ಭ್ರಮನಿರಸನಕ್ಕೆ ಒಳಗಾಗುತ್ತಿರುವುದು ಜನರು ಪರ್ಯಾಯದತ್ತ ಯೊಚಿಸುತ್ತಿದ್ದಾರೆ. ರಾಜ್ಯದಲ್ಲಿ ಸಂಖ್ಯೆಯಲ್ಲಿ ಮತ್ತೊಂದು ಪ್ರಬಲ ಜಾತಿಯಾಗಿರುವ ಕುರುಬ ಸಮುದಾಯ ಮತ್ತು ಕೆಲವು ಹಿಂದುಳಿದ ಜಾತಿಗಳು ಸಿದ್ಧರಾಮಯ್ಯನವರನ್ನು (ಕಾಂಗ್ರೆಸ್‌ನ್ನು) ಬೆಂಬಲಿಸುತ್ತಿರುವ ಸಂದರ್ಭ ಇನ್ನೂ ಇದೆ. ಅದ–ಕ್ಕೆ ಎದಿರೇಟು ನೀಡಲು ಬಿ.ಎಸ್.ವೈ. ನೇಮಕದಿಂದ ಸಾಧ್ಯವೆಂಬ ಜಾತಿಯ ಲೆಕ್ಕ ಒಂದೆಡೆಯಾದ–ರೆ ಮತ್ತೊಂದೆಡೆ ಯಡ್ಯೂರಪ್ಪನವರಲ್ಲಿ ಇರುವ ಆಕ್ರಮಣಕಾರಿ ನಾಯಕತ್ವದ ಗುಣವನ್ನು ಬಳಸುವ ತಂತ್ರವೂ ಇದೆ. ಬಿಜೆಪಿಯಲ್ಲಿ ಆರೆಸ್ಸೆಸ್ ಹೇಳಿದಂತೆ ಕೇಳುವ ಬಹಳ 'ಚೆಡ್ಡಿ ಸಿಪಾಯಿ'ಗಳಿದ್ದಾರೆ ಹೊರತು ಜನ ಸಮೂಹವನ್ನು ಸೆಳೆಯುವ ನಾಯಕರಿಲ್ಲ. ರಾಜ್ಯದಲ್ಲಿ ಕಾಂಗ್ರೆಸ್ ಸರಕಾರದ ವೈಫಲ್ಯಗಳು, ಹೆಚ್ಚುತ್ತಿರುವ ಅತೃಪ್ತಿಯನ್ನು ಸಮರ್ಥವಾಗಿ ಬಳಸಿ ಮುಂದೆ ಅಧಿಕಾರಕ್ಕೆ ಬರುವ ಆಶೆ ಬಿಜೆಪಿಯಲ್ಲಿ ದೊಡ್ಡದಾಗಿ ಚಿಗುರಿದೆ.. ಹೀಗಾಗಿಯೇ ಅವರೇ ಬಹಿರಂಗ ಪಡಿಸಿದಂತೆ ಕಾಂಗ್ರೆಸ್‌ನ ವಿರುದ್ಧ ಅತ್ಯಂತ ಆಕ್ರಮಣಕಾರಿಯಾಗಿ ವರ್ತಿಸುವ ಮೂಲಕ, ಜನರನ್ನು ಎತ್ತಿ ಕಟ್ಟುವ ತಂತ್ರವನ್ನು ಅದು ಅನುಸರಿಸಲಿದೆ. ಈ ಪ್ರಕ್ರಿಯೆಯು ಕೇಂದ್ರದ ವಿರುದ್ಧ ಜನರಲ್ಲಿ ಬೆಳೆಯುತ್ತಿರುವ ಅತೃಪ್ತಿಯನ್ನು ಮಂಕುಗೊಳಿಸುವುದಕ್ಕೂ ಸಹಾಯಕವಾಗಲಿದೆ. ಇಂತಹ ರಾಜಕೀಯ ಕಾರ್ಯಾಚರಣೆಗೆ ಜೊತೆಯಾಗಿ ಭೂಮಿ ಹದ ಮಾಡಿ ಕೊಡಲು ಸಂಘಪರಿವಾರದ ಎಲ್ಲಾ ಶಕ್ತಿಗಳೂ ರಾಜ್ಯದಲ್ಲಿ ಕೋಮುವಿಭಜನೆ ತರಲು ಕಾರ್ಯಾಚರಣೆಗೆ ಇಳಿದಿವೆ ಮತ್ತು ಇನ್ನಷ್ಟೂ ಇಳಿಯಲಿದೆ. ಅದಕ್ಕೆ ಹಣದ ಕೊರತೆಯೇನೂ ಇಲ್ಲ. ಇವೆಲ್ಲಕ್ಕೆ ಹೈಪ್ ಕೊಡಲು ಬಹುತೇಕ ಮಾಧ್ಯಮಗಳು ಚೆಡ್ಡಿಯುಟ್ಟು ಸಿದ್ಧವಾಗಿವೆ. ಹೀಗಾಗಿ ಬಿಜೆಪಿಯದ್ದು ಹಲವು ಆಯಾಮಗಳ ರಾಜಕೀಯ ಯುದ್ಧದ ಧಾಳಿಗಳ ತಂತ್ರಗಾರಿಕೆ. ಇದು ಇತರೆ ಪಕ್ಷಗಳೂ ತಮ್ಮ ತಂತ್ರವನ್ನು ಮರು ಯೋಚಿಸುವಂತೆ ಒತ್ತಡ ಸೃಷ್ಟಿಸಿದೆ.

ಪರ್ಯಾಯದ ಕೊರತೆ

ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ ಸಂಗತಿಯೆಂದರೆ ಕಾಂಗ್ರೆಸ್‌ನ ವಿರುದ್ಧದ ಅತೃಪ್ತಿಯನ್ನು ಬೇರೆ ಶಕ್ತಿಗಳು ಪರಿಣಾಮಕಾರಿಯಾಗಿ ಬಳಸದಂತೆ ನೋಡಿಕೊಳ್ಳುವುದು ಸಹ ಅದರ ತಂತ್ರದ ಪ್ರಮುಖ ಭಾಗ. ಈ ಹೋರಾಟ ತನ್ನ ಮತ್ತು ಕಾಂಗ್ರೆಸ್ ನಡುವೆಯೇ ನಡೆಯುವಂತೆ ಮಾಡುವುದು ಶಕ್ತಿಗಳ ಕ್ರೋಢೀಕರಣದಲ್ಲಿ ಪ್ರಮುಖವಾಗಿದೆ. ಅಂ–ದರೆ ಮೂರನೆಯ ಶಕ್ತಿಗಳು ಪರ್ಯಾಯವೇ ಇಲ್ಲದಂತೆ ವರ್ತಿಸುವ ತಂತ್ರವೂ ಇಲ್ಲಿದೆ. ಈ ವಿಷಯದಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿಯಲ್ಲಿ ಸಹಮತವಿದೆ. ಆದ್ದರಿಂದಲೇ ಜೆಡಿ ಎಸ್ ಪಕ್ಷವನ್ನು ಸಹ ತನ್ನ ಜೊತೆಗೆ ಇರಿಸಿಕೊಳ್ಳಲು ಸಹ ಅದು ಮುಂದಾಗಿರುವ ಸೂಚನೆಗಳಿವೆ. ಜೆಡಿ ಎಸ್ ಪಕ್ಷವು ಕೇಂದ್ರದ ಎನ್.ಡಿ.ಎ. ಸರಕಾರದ ಭಾಗವಾಗಲು ಹಿರಿಯ ನಾಯಕರ ನಡುವೆ ಮಾತುಕತೆಗಳು ನಡೆದ ಮಾಹಿತಿಗಳಿವೆ. ಅಂದ ಮಾತ್ರಕ್ಕೆ ಜೆಡಿ ಎಸ್ ಪೂರ್ತಿ ತನ್ನನ್ನು ಬಿಜೆಪಿಯೊಂದಿಗೆ ವಿಲೀನಗೊಳಿಸಲಾರದು. ಅದೇನಿದ್ದರೂ ಕಾಂಗ್ರೆಸ್ ಮತ್ತು ಬಿಜೆಪಿ ಪಕ್ಷಗಳನ್ನು ವಿರೋಧಿಸುವ ಮತದಾರರ ನೆಲೆ ಕರ್ನಾಟಕದಲ್ಲಿರುವುದನ್ನು ಸ್ವಲ್ಪ ಮಟ್ಟಿಗೆ ಪ್ರತಿನಿಧಿಸಲೂ ಬಹುದು. ಅದೇನಿದ್ದರೂ ಅದು ಒಂದು ಸೀಮಿತ ವ್ಯಾಪ್ತಿಯದು. ಅದನ್ನೇ 'ತಾನು ಎಂದಿದ್ದರೂ 'ಕಿಂಗ್ ಮೇಕರ್' ಎಂದು ಸಾರುತ್ತಿದೆ.

ಗಂಭೀರವಾಗಲಿರುವ ಸನ್ನಿವೇಶ

ಒಂದು ವೇಳೆ ಬಿಜೆಪಿ ಬಯಸಿದಂತಹ ಬೆಳವಣಿಗೆಗಳು ಸಂಭವಿಸಿದಲ್ಲಿ ನಿಜಕ್ಕೂ ಅದೊಂದು ಗಂಭೀರ ಸನ್ನಿವೇಶವೇ ಸರಿ. ಇದು ಒಂದೆಡೆ ಇರಲಿ, ಈಗಲೂ ಯಡ್ಯೂರಪ್ಪನವರ ನಾಯಕತ್ವದಲ್ಲಿ ಬಿಜೆಪಿ ಕಾರ್ಯಾಚರಣೆಗೆ ಇಳಿಯುವುದು ರಾಜ್ಯದಲ್ಲಿ ಕೋಮುವಾದಿ ಕಲಹಗಳನ್ನು ಮತ್ತಷ್ಟೂ ತೀವ್ರಗೊಳಿಸಲು ಪರಿವಾರಕ್ಕೆ ಹೆಚ್ಚು ಇಂಬು ಕೊಡಲಿದೆ. ದೇಶದಲ್ಲಿ ಎಡ, ಪ್ರಜಾಸತ್ತಾತ್ಮಕ ಶಕ್ತಿಗಳ ಮೇಲೆ, ಮೌಲ್ಯಗಳ ಮೇಲೆ ನಡೆದಿರುವ ಧಾಳಿಗಳ ಸಂದರ್ಭದಲ್ಲಿನ ಈ ಬೆಳವಣಿಗೆಗಳು ಗಂಭೀರವಾದ ಎಚ್ಚರಿಕೆಯ ಸೂಚನೆಗಳು. ಕಾಂಗ್ರೆಸ್ ಪಕ್ಷ ಮತ್ತು ಅದರ ಸರಕಾರ ಬಿಜೆಪಿಯ ಆಕ್ರಮಣಗಳನ್ನು ಪರಿಣಾಮಕಾರಿಯಾಗಿ ತಡೆಯುವ ಸಂಭವವೇ ಇಲ್ಲ. ರಾಜ್ಯದಲ್ಲಿ ಕೋಮುವಾದಿ ಫ್ಯಾಶಿಸ್ಟರ ಅಟ್ಟಹಾಸಗಳು ಅವ್ಯಾಹತವಾಗಿ ನಡೆದರೂ ಅದನ್ನು ಹಿಮ್ಮೆಟ್ಟಿಸುವ, ಎದುರಿಸುವ ಮತ್ತು ಪ್ರಗತಿಪರ ಶಕ್ತಿಗಳು, ಅಲ್ಪಸಂಖ್ಯಾತರು, ದಲಿತರು, ಆದಿವಾಸಿಗಳನ್ನು, ಮಹಿಳೆಯರನ್ನು ರಕ್ಷಿಸುವ ಛಾತಿಯೇ ಕಾಣುತ್ತಿಲ್ಲ. ಬದಲಾಗಿ ಎಸ್ಮಾ ಬಳಕೆಗೆ ಸಿದ್ಧತೆ, ತುಮಕೂರಿನಲ್ಲಿ ಆರೆಸ್ಸೆಸ್ ಪಡೆಗಳ ಧಾಳಿಗೀಡಾದ ಪ್ರಗತಿಪರರ ಮೇಲೆ ದೇಶದ್ರೋಹದ ಕೇಸ್ ಹಾಕಿ ಜೈಲಿಗಟ್ಟುವುದೆಂದರೆ ಏನರ್ಥ? ನಿಜವಾಗಿಯೂ ಪ್ರಗತಿಪರ, ಪ್ರಜಾಸತ್ತಾತ್ಮಕ, ದೇಶಪ್ರೇಮಿ ಶಕ್ತಿಗಳ ಪ್ರತಿರೋಧ ಅವೆರಡಕ್ಕೂ ಬೇಕಾಗಿಲ್ಲ. ಹೀಗಾಗಿಯೇ ಎರಡು ಪಕ್ಷಗಳ ನಡುವೆಯೇ ಕ್ರೋಢೀಕರಣ ಇಬ್ಬರಿಗೂ ಬೇಕಿದೆ.

ಈ ಸನ್ನಿವೇಶವನ್ನು ಎದುರಿಸಲು ಕಾಂಗ್ರೆಸ್ ಸಮರ್ಥವೇ? ಕಾಂಗ್ರೆಸ್–ಮುಕ್ತ ಭಾರತದ ಗುರಿಯಿರಿಸಿಕೊಂಡಿರುವ ಬಿಜೆಪಿಯ ಧಾಳಿಗಳನ್ನು ಎದುರಿಸುವ ಸಿದ್ಧತೆ, ಸಂಕಲ್ಪ ಅದಕ್ಕಿಲ್ಲ. ಮೇಲಾಗಿ ಅಧಿಕಾರ ಸಿಗದ ಅತೃಪ್ತಿಯಲ್ಲಿ ಅನೇಕರು ನರಳುತ್ತಿದ್ದಾರೆ ಅಥವಾ ಉಳಿಸಿಕೊಳ್ಳಲು ಹೆಣಗುತ್ತಿದ್ದಾರೆ. ಕಾಂಗ್ರೆಸ್ ಇಂತಹ ಹಲವು ಗುಂಪುಗಳ ಕಿತ್ತಾಟದಲ್ಲಿ ಸಾಗುತ್ತಿದೆ. ಭಿನ್ನಮತೀಯ ಶಾಸಕರಿಗೆ ಗಾಳ ಹಾಕಿ ಬಿಜೆಪಿ ಕೂತಿದೆ. ಈ ಕೆಲಸವನ್ನು ನಿರ್ವಹಿಸಲು 'ಆಪರೇಶನ್ ಕಮಲ ಎಕ್ಸ್' ಯಡ್ಯೂರಪ್ಪನವರಿಗೆ ಬಹು ಹಿಂದೆಯೇ ಹೊಣೆ ನೀಡಲಾಗಿತ್ತು.

ಅಧಿಕಾರದಾಹಿಗಳ ಕೂಟ

ಸನ್ನಿವೇಶ ಮತ್ತು ಅದರ ಶಕ್ತಿ ಇಷ್ಟಿದ್ದರೂ ಬಿಜೆಪಿಗೆ ಅಧಿಕಾರದ ಹಾದಿ ಸುಗಮವೇನಲ್ಲ. ಅದರಲ್ಲೂ ಹೈಕಮಾಂಡ್ ಯಡ್ಯೂರಪ್ಪನವರಿಗೆ ಮುಕ್ತ ಅವಕಾಶ ನೀಡಿದೆ ಎಂದೂ ಅರ್ಥವಲ್ಲ. ಬಿಜೆಪಿ ಹಿಂದಿನಿಂದಲೂ ಒಡೆದ ಮನೆ! ಕದನದ ಕಣ. ಈ ಪಕ್ಷದೊಳಗೆ ಯಡ್ಯೂರಪ್ಪನವರನ್ನು ಕಡು ವಿರೋಧಿಸುವ ನಾಯಕರ ಗುಂಪೇ ಇದೆ. ಈಗ ಬಿ.ಎಸ್.ವೈ.ಯ ನೇಮಕವನ್ನು ಸ್ವಾಗತಿಸಿರುವ ಅನಂತ ಕುಮಾರ್ ಹಿಂದೆ–ಮುಂದೆ ಹಿಗ್ಗಾ ಮುಗ್ಗ ವಿರೋಧಿಸಿದ್ದರು. ಮುಖ್ಯಮಂತ್ರಿ ಗಾದಿಗೆ ಗಂಟು ಬಿದ್ದಿರುವ ಅವರ ನಡುವಿನ ಕದನ ಶಮನಗೊಳ್ಳುವಂತಹುದಲ್ಲ. ಹಾಗೇ ಶೆಟ್ಟರ್, ಸದಾನಂದಗೌಡ, ಅಶೋಕ್, ಈಶ್ವರಪ್ಪ ಎಲ್ಲಿಯವರೆಗೆ ಹಲ್ಲು ಕಚ್ಚಿ ಇರುತ್ತಾರೆ ಎಂಬುದನ್ನು ತೆರೆ ಸರಿದು ಆಟ ಶುರುವಾದ ಮೇಲೆಯೇ ನೋಡಬೇಕು. ಕಳೆದ ಚುನಾವಣೆಯಲ್ಲಿ ಪ್ರತ್ಯೇಕ ಪಕ್ಷ ಕಟ್ಟಿ ಯಡ್ಯೂರಪ್ಪ ಗಳಿಸಿದ ಮತಗಳೇ ಬಿಜೆಪಿಗೆ ದೊಡ್ಡ ಹೊಡೆತ ಕೊಟ್ಟಿದ್ದು, ಈಗ ಮತ್ತೇ ಅದು ಕೂಡಿದರೆ ಅಧಿಕಾರ ಗ್ಯಾರಂಟಿ ಎಂದು ಇವರೆಲ್ಲಾ ಲೆಕ್ಕ ಹಾಕಿ ಮೊದಲು ಬಹುಮತ ಗಳಿಸೋಣ ಆಮೇಲೆ ನೋಡೋಣ ಎಂದು ಕಾದಿದ್ದಾರೆ. ತಾನೇ ಮುಖ್ಯಮಂತ್ರಿ ಕ್ಯಾಂಡಿಡೇಟ್ ಎಂದು ಯಡ್ಯೂರಪ್ಪನವರೇ ಹೇಳಿಕೊಳ್ಳುತ್ತಿದ್ದಾರೆ ಹೊರತು ಬೇರೆಯವರಲ್ಲ.

ಇವೆಲ್ಲಾ ವಾಸ್ತವ ಸಂಗತಿಗಳೇ. ಇದು ಗಂಭೀರ ಸನ್ನಿವೇಶ. ಸಿಪಿಐ(ಎಂ) ಮತ್ತು ಎಡ ಶಕ್ತಿಗಳು ಗುರುತಿಸಿದಂತೆ ಈ ಸವಾಲಿನ ಸಂದರ್ಭವನ್ನು ಎದುರಿಸಲು ಎಲ್ಲಾ ದುಡಿಯುವ ವರ್ಗಗಳು, ಪ್ರಗತಿಪರರು, ಸಾಮಾಜಿಕ ಶಕ್ತಿಗಳು ಬೃಹತ್ ಆಂದೋಲನದ ಮೂಲಕ ಹಿಮ್ಮೆಟ್ಟಿಸಬೇಕು. ●

ಅಂದು ಅಂಬೇಡ್ಕರ್ ಫೋಟೋ ಎಸೆದಿದ್ದರು!

ಯಡ್ಯೂರಪ್ಪ ಅಂದು ಮುಖ್ಯಮಂತ್ರಿ ಕಚೇರಿ ಪ್ರವೇಶ ಮಾಡಿದಾಗ ಅಲ್ಲಿ ಈಗಾಗಲೇ ಇದ್ದ ಡಾ. ಅಂಬೇಡ್ಕರ್ ಫೋಟೋ ಎಸೆದಿದ್ದರು. ರಾದ್ಧಾಂತ ಆಗಿತ್ತು. ಇಂದು ಡಾ. ಅಂಬೇಡ್ಕರ್ ಫೋಟೋ ಗೆ ಹಾರ ಹಾಕಿ ಪಕ್ಷದ ಅಧ್ಯಕ್ಷ ಪದಗ್ರಹಣ ಮಾಡಿದರು. ಎಂತಹ ಮೋಸ ಮತ್ತು ವಿಪರ್ಯಾಸ?!

ನಮ್ಮ ಚುರು-ಟ್ವೀಟ್

@SurjyaKMishra
ಏಪ್ರಿಲ್ 15, 2016

ಮಮತಾ ದಾರ್ಷ್ಟ್ಯ ಎಲ್ಲಾ ಮಿತಿಗಳನ್ನು ಮೀರಿದೆ. ಜನತೆಯನ್ನು ಬೆದರಿಸಿದ ನಂತರ ಆಕೆ ಈಗ ಚುನಾವಣಾ ಕಮಿಶನಿಗೆ ಬೆದರಿಕೆ ಹಾಕುತ್ತಿದ್ದಾರೆ.

ಮಮತಾ ವಿರುದ್ಧ ಚುನಾವಣಾ ಕಮಿಶನ್ ಕ್ರಮ ಕೈಗೊಳ್ಳುತ್ತದೋ ಬಿಡುತ್ತದೋ! ಆದರೆ ಜನ ಆಕೆಯನ್ನು ಅಧಿಕಾರದಿಂದ ಇಳಿಸಿ ಆಕೆಯ ದಾರ್ಷ್ಟ್ಯ ಮತ್ತು ಅಪರಿಮಿತ ಅಪರಾಧಗಳಿಗೆ ತಕ್ಕ ಶಿಕ್ಷೆ ಕೊಡಲಿದ್ದಾರೆ.

– ಸೂರ್ಯಕಾಂತ ಮಿಶ್ರ,
ಸಿಪಿಐ(ಎಂ) ಪ.ಬಂಗಾಳ ಕಾರ್ಯದರ್ಶಿ

ಎಡ ಪಕ್ಷಗಳ ಜಾಥಾ... ಪುಟ 3 ರಿಂದ

ಕಡೆಗಣಿಸಿವೆ. ಬರಗಾಲ, ಅತೀವೃಷ್ಟಿ, ಬೆಳೆವೈಫಲ್ಯ, ಸಾಲನೀಡಿದ ಬಡ್ಡಿಸಾಹುಕಾರರ ತೀವ್ರ ಶೋಷಣೆ, ಗ್ರಾಮಗಳಲ್ಲಿ ಉದ್ಯೋಗ ಲಭ್ಯವಿರದಂತಾಗಿರುವುದು, ಉದ್ಯೋಗ ಖಾತ್ರಿ ಯೋಜನೆಯು ಭ್ರಷ್ಟರ ಪಾಲಾಗಿರುವುದು ಎಲ್ಲವೂ ಒಂದೆಡೆ ರೈತರನ್ನು ಸಾವಿರಾರು ಸಂಖ್ಯೆಯಲ್ಲಿ ಆತ್ಮಹತ್ಯೆ ಮಾಡಿಕೊಳ್ಳುವಂತೆ ಒತ್ತಾಯಿಸಿದೆ. ಕೃಷಿಕೂಲಿಕಾರರನ್ನು ಹಸಿವಿನ ಸಾವುಗಳಿಗೆ ಮತ್ತು ನಗರಗಳ ಕಡೆ ವಲಸೆಯ ಯಾತನಾಮಯ ಜೀವನದೆಡೆ ದೂಡಿದೆ.

ರಾಜ್ಯದಾದ್ಯಂತ ಸರಕಾರಿ ಜಮೀನುಗಳಲ್ಲಿ ಸಾಗುವಳಿಯಲ್ಲಿ ತೊಡಗಿರುವ ಬಡ ರೈತರ ಹಿತಗಳನ್ನು ಕಡೆಗಣಿಸಿ ಅವರನ್ನು ಒಕ್ಕಲೆಬ್ಬಿಸಲು ಕ್ರಮವಹಿಸುವ ಮತ್ತು ವಸತಿಹೀನರಿಗೆ ಉಚಿತ ನಿವೇಶನ ಒದಗಿಸಲು ಕ್ರಮವಹಿಸದ ರಾಜ್ಯ ಸರಕಾರ ಕಾರ್ಪೋರೇಟ್ ಕಂಪೆನಿಗಳಿಗೆ ಉಚಿತವಾಗಿ ಲಕ್ಷಾಂತರ ಜಮೀನು ಒದಗಿಸಲು ಮತ್ತು ದೊಡ್ಡ ದೊಡ್ಡ ಭೂಕಬಳಿಕೆದಾರರನ್ನು ರಕ್ಷಿಸಲು ಮುಂದಾಗುವ ನೀತಿಯನ್ನು ಅನುಸರಿಸುತ್ತಿರುವುದು ಖಂಡನೀಯವಾಗಿದೆ.

ಅದೇ ರೀತಿ, ಲೋಕಾಯುಕ್ತವನ್ನು ದುರ್ಬಲಗೊಳಿಸುವ ಮತ್ತು ಅದಕ್ಕಾಗಿ ಏಸಿಬಿ ರಚಿಸುವ ಕ್ರಮಗಳನ್ನು ಎಡ ಪಕ್ಷಗಳ ಸಭೆ ಖಂಡಿಸಿ ವಿರೋಧಿಸಿದೆ.

ಇಂತಹ ಎಲ್ಲಾ ವಿಚಾರಗಳನ್ನು ಜನತೆಯ ನಡುವೆ ಕೊಂಡೂಯ್ಯಲು ಮತ್ತು ಮುಂಬರುವ ದಿನಗಳಲ್ಲಿ ಭಾರೀ ಪ್ರತಿರೋಧವನ್ನು ರೂಪಿಸಲು ಎಡ ಪಕ್ಷಗಳು ನಿರ್ಧರಿಸಿವೆ. ಇದರ ಭಾಗವಾಗಿಯೇ ಈ ಕಾರ್ಯಕ್ರಮವನ್ನು ರೂಪಿಸಲಾಗಿದೆ.



ಧರ್ಮಾಂದತೆಗೆ ತಿರಸ್ಕಾರ ಮಾನವೀಯತೆಗೆ ಜೈಕಾರ....

– ಕೆ.ಎಸ್.ವಿಮಲ

ಈ ಗತಾನೇ ಟಿ.ವಿ.ಯಲ್ಲಿ ಭರ್ಜರಿ ಪೀಠಾರೋಹಣದ ಭಾಷಣ ಪ್ರಸಾರವಾಗುತ್ತಿತ್ತು. ಅಸ್ಪ್ರಶ್ಯತೆಯ ಬಗ್ಗೆ ಅಂಬೇಡ್ಕರ್ ಮತ್ತು ಸಂಘಪರಿವಾರದ ನಿಲುವು ಒಂದೇ.ಇಂದು ಅಧಿಕಾರ ಸ್ವೀಕರಿಸಲು ಪುಣ್ಯ ಮಾಡಿದ್ದೆ. ಇಂಥು ಅಂಬೇಡ್ಕರ್ ಜಯಂತಿ ಆಚರಿಸುತ್ತಿದ್ದೇವೆ. ಇದು ಯಡಿಯೂರಪ್ಪರ ಭಾಷಣ. ಇನ್ನು ದೇಶದ ಸಂವಿಧಾನ ದ ಮಹತ್ವದ ಬಗ್ಗೆ ಕೇಂಧ್ರ ಸಚಿವ ಅನಂತ ಕುಮಾರ್ ಕೂಡ ಹಾಡಿ ಹೊಗಳುತ್ತಿದ್ದರು. ಆದರೆ ನನ್ನ ತಲೆಯಲ್ಲಿ ಓಡಾಡುತ್ತಿದ್ದುದು ಹಿಂದೂ ಸಂಘಟನೆಗಳು,ಭಜರಂಗದಳದ ನಾಯಕರುಗಳೆಂದೇ ಕರೆದುಕೊಳ್ಳುತ್ತಿರುವವರು ಕಳೆದೆರಡು ದಿನಗಳಿಂದ ಮಂಡ್ಯದಲ್ಲಿ ಮಾಡುತ್ತಿರುವ ಸಂವಿಧಾನ ವಿರೋಧಿ ಕೆಲಸಗಳು ಈ "ನಾಯಕರು"ಗಳ ಗಮನಕ್ಕೆ ಬಂದಿಲ್ಲವೇ?

ಸಂವಿಧಾನ ಶಿಲ್ಪಿಯ ಪ್ರತಿಮೆಗೆ ಮಾಲಾರ್ಪಣೆ ಮಾಡಿ ಹಾಡಿ ಹೊಗಳುತ್ತಿರುವ ಎಲ್ಲ ನಾಯಕರೂ ಮತ್ತೊಮ್ಮೆ ಸಂವಿಧಾನದ ಮೂಲ ತಿರುಳನ್ನು ಓದಬೇಕು ಎನಿಸುತ್ತದೆ. ಸಂವಿಧಾನ ಈ ದೇಶದ ಎಲ್ಲ ಜನರಿಗೆ ಸಮಾನ ಅವಕಾಶ ನೀಡುತ್ತದೆ. ಆದ–ರೆ ಈಗ ಕೆಲವು ದಿನಗಳಿಂದ ಮಂಡ್ಯ ಮೈಸೂರಿನಲ್ಲಿ ನಡೆದ ಘಟನೆಗಳು ಸಂವಿಧಾನದ ಆಶಯಗಳನ್ನು ಗಾಳಿಗೆ ತೂರುವುದಾಗಿದೆ. ಉದಾ: ಮಂಡ್ಯ ಜಿಲ್ಲೆಯ ತಿಮ್ಮನ ಹೊಸೂರಿನಲ್ಲಿ ಮರ್ಯಾದೆ ಗೇಡು ಹತ್ಯೆಯೊಂದು ನಡೆಯಿತು.

ಇನ್ನೂ ಮರ್ಯಾದೆಗೇಡೆಂದರೆ ಇಡೀ ಊರೇ ಆ ಹತ್ಯೆಯನ್ನು ಮುಚ್ಚಿಡಲು ಪ್ರಯತ್ನಿಸಿದ್ದು ಮಾಧ್ಯಮಗಳಲ್ಲಿ ನೇರವಾಗಿ ಕಣ್ಣಿಗೆ ರಾಚುವಂತೆ ಇತ್ತು. ಇದಕ್ಕೆ ಕಾರಣ ಊರಿನವರ ಜಾತಿಯ ಮರ್ಯಾದೆಯ ಪ್ರಶ್ನೆಯಾಯಿತೇ ಹೊರತೂ ಎರಡು ಯುವ ಜೋಡಿಗಳಿಗೆ ಬದುಕು ನೀಡುವ ಪ್ರಶ್ನೆಯಾಗಲಿಲ್ಲ. ಆದರೆ ಅದೇನೋ ಪೋಲೀಸ್ ಇಲಾಖೆಗೆ ಅದನ್ನು ಒಪ್ಪಿಕೊಳ್ಳಲು ಸಾಧ್ಯವಾಗಲಿಲ್ಲ. ಪರಿಣಾಮ ಮಗಳನ್ನು ಹೇಗೆ ಕೊಂದೆವೆಂದು ತಂದೆಯೇ ಬಾಯ್ಬಿಟ್ಟು ಈಗ ಕಸ್ಟಡಿಯಲ್ಲಿ. ಸಧ್ಯ ಹಿಂದಿನಂತೆ ಆಗಲಿಲ್ಲವಲ್ಲ ಎಂದು ಕೊಳ್ಳುವಷ್ಟರಲ್ಲೇ..... ಇನ್ನೊಂದು ಆಘಾತಕಾರೀ ಘಟನೆ.

ಸಾಮಾನ್ಯವಾಗಿ ಮೇಲಿನ ಘಟನೆಯೂ ಸೇರಿದಂತೆ ಅಂತರ ಜಾತಿ, ಅಂತರ್ ಧರ್ಮೀಯ ಮದುವೆಗಳೆಂದರೆ ಕುಟುಂಬಗಳ ಪರವಾನಗಿ ಸುಲಭವಾಗಿ ಸಿಗುವ ಮಟ್ಟಕ್ಕೆ ನಮ್ಮ ಸಮಾಜವಿನ್ನೂ ಹೋಗಿಲ್ಲ. ಅಂಥಹುದರಲ್ಲಿ ಎರಡು ಕುಟುಂಬಗಳು ತಮ್ಮ ಧರ್ಮದ ಕಟ್ಟು ಮೀರಿ ಮನುಷ್ಯ ಧರ್ಮವೇ ಶ್ರೇಷ್ಟ, ಮಕ್ಕಳ ಆಯ್ಕೆಯೇ ತಮ್ಮ ಸಂತೋಷವೆಂದು ಒಪ್ಪಿ ಮದುವೆ ಸಂಭ್ರಮಕ್ಕೆ ಸಜ್ಜಾಗುತ್ತಿರುವಾಗ ಹಿಂದೂ ಸಂಘಟನೆಗಳು ಈ ವಿವಾಹವನ್ನು ವಿರೋಧಿಸಿ ಧರಣ, ಬೆದರಿಕೆಕರೆ, ಬಂದ್ ಇತ್ಯಾದಿಗಳೆಲ್ಲವನ್ನೂ ನಡೆಸುತ್ತಿವೆ. ಭಜರಂಗದಳದವರಿಂದ ನಡೆಯುತ್ತಿರುವ ಈ ಸಂವಿಧಾನ ವಿರೋಧೀ ಕೃತ್ಯಗಳಿಗೆ ಭಾರತೀಯ ಜನತಾ ಪಕ್ಷದ ಯಾವ ನಾಯಕರೂ ಇದುವರೆಗೂ ಚಕಾರ ಪ್ರತಿಕ್ರಿಯೆ ನೀಡಿಲ್ಲ. ಇವರು ಸಂವಿಧಾನ ಅಂಬೇಡ್ಕರ್ ಕುರಿತು ಪುಂಖಾನುಪುಂಖವಾಗಿ ಮಾತನಾಡುತ್ತಿದ್ದಾರೆ. ಮಂಡ್ಯದಲ್ಲಿ ನಿರಂತರವಾಗಿ ನಡೆಯುತ್ತಿರುವ ಇಂಥಹ ಮನುಷ್ಯ ವಿರೋಧೀ ಕ್ರಿಯೆಗಳ ಬಗ್ಗೆ ಅಲ್ಲಿಯೇ ಇರುವ ಮಾಜೀ ಮುಖ್ಯಮಂತ್ರಿಗಳು, ಅಥವಾ ಹಾಲಿ ಮಂತ್ರಿಗಳು ಕೂಡ ಯಾವ ಪ್ರತಿರೋಧವನ್ನೂ ವ್ಯಕ್ತಪಡಿಸುತ್ತಿಲ್ಲ. ಈ ದೇಶದ ದುರಂತವಿದು. ಜಾತಿ ಮತ್ತು ಅಂತಸ್ತಿನ ಹುಸಿ ಪ್ರತಿಷ್ಟೆಗೆ ಜನ ನಾಯಕರೆನಿಸಿಕೊಂಡಿರುವವರೂ ನೇರ ಬೆಂಬಲ ನೀಡುತ್ತಿದ್ದಾರೆ.

12 ವರ್ಷಗಳಿಂದ ಸ್ನೇಹಿತರಾಗಿದ್ದು, ಪರಸ್ಪರ ಪ್ರೀತಿಸಿ ವಿವಾಹವಾಗಲು ಕುಟುಂಬದವರ ಸಮ್ಮತಿಯನ್ನೂ ಪಡೆದು ಸಂಭ್ರಮದಲ್ಲಿ ಬದುಕು ಕಟ್ಟಿಕೊಳ್ಳುವ ಕನಸು ಕಾಣುತ್ತಿದ್ದ ಅಶಿತಾ ಶಕೀಲ್ ಜೋಡಿಗೆ ಮತ್ತು ಅವರ ಕುಟುಂಬಕ್ಕೆ ಧೈರ್ಯ, ಬೆಂಬಲ ರಾಜ್ಯದ ಎಲ್ಲ ಭಾಗಗಳಿಂದ ಹರಿದು ಬರಬೇಕಿದೆ. ಸ್ವಯಂ–ಪ್ರೇರಿತ ಕೇಸ್ ದಾಖಲಿಸಿಕೊಂಡರಷ್ಟೇ ಸಾಲದು ನಿನ್ನೆಯವರೆಗೆ ಹಿಂದೂ ಸಂಘಟನೆಗಳು ಎಂದು ಕರೆದುಕೊಂಡು ಇಂದು ವಕ್ಕಲಿಗರ ಸ್ವಾಭಿಮಾನಿ ವೇದಿಕೆ ಎಂದು ಕರೆದುಕೊಳ್ಳುತ್ತಿರುವ ಜೀವವಿರೋಧೀ ಸಂಘಟನೆಗಳ ಉಪಟಳಕ್ಕೆ ತಕ್ಕ ಉತ್ತರವನ್ನು ಜನ ಕೊಡಬೇಕು.

ಪ್ರಕರಣದಲ್ಲಿ ಅಶಿತಾ ತೆಗೆದುಕೊಂಡ ಗಟ್ಟಿ ನಿಲುವು ಎಲ್ಲರೂ ಮೆಚ್ಚಬೇಕಂತ್ತಾದ್ದು. ಜೊತೆಗೆ ಇಬ್ಬರ ತಂದೆ ತಾಯಿಗಳು ಮತ್ತು ಕುಟುಂಬದವರು ಸಮಾಜಕ್ಕೆ ಮಾದರಿ. ಆಶಿತಾಳ ತಂದೆ ಖ್ಯಾತ ವೈದ್ಯರು, ಅಶಿತಾ ಎಂ.ಬಿ.ಏ ಪದವೀಧರೆ, ಅವಳ ಮನ ಒಲಿಸಿ ಮದುವೆ ನಿಲ್ಲಿಸುವಂತೆ ಅದಾಗದಿದ್ದರೆ ತಾವೇ ಬಂದು ಅವಳ ಬಳಿ ಮಾತನಾಡುತ್ತೇವೆಂದು ಹೇಳುವಷ್ಟು ದಾಷ್ಟ್ರ್ಯ ಈ "ಸಂಸ್ಕೃತಿ ರಕ್ಷಕರಿಗೆ". ಸ್ಪಷ್ಟ ನಿರಾಕರಣೆ ಸಾಲದೆಂಬಂತೆ ನಕಲಿ ಅಂತರ ರಾಷ್ಟ್ರೀಯ ಬೆದರಿಕೆಯ ಕರೆಗಳು, ಇಷ್ಟೆಲ್ಲ ಆಗುತ್ತಿದ್ದರೆ ಜಿಲ್ಲೆಯ ಪೋಲೀಸ್ ವರಿಷ್ಟಾಧಿಕಾರಿಗಳು ಈಗಲೂ ಇವರ ಮೇಲೆ ಕ್ರಮ ಕೈಗೊಳ್ಳಲು ಮೀನ ಮೇಷ ಎಣಿಸುತ್ತಿರುವುದು ದುರಂತ. ಈಗ ಜನರಷ್ಟೇ ಬುದ್ದಿ ಕಲಿಸಲು ಸಾಧ್ಯ. ಇಂಥಹ ಹೊತ್ತಿನಲ್ಲಿ ಬಹುಷಃ ರಾಜ್ಯದ ಜನತೆ ಯೋಚಿಸಬೇಕಾದ ಸಂಗತಿಯೆಂದರೆ ಕೇಂದ್ರದಲ್ಲಿ ಸರ್ಕಾರ ರಚಿಸಿದ ಕ್ಷಣದಿಂದ ಇಡೀ ದೇಶದಲ್ಲಿ ಫ್ಯಾಸಿಸ್ಟ್ ಮಾದರಿಯ ಚಟುವಟಿಕೆಗಳು ನಿರಾತಂಕವಾಗಿ ನಡೆಯುತ್ತಿದೆ. ಗುಜರಾತ್ ಲ್ಯಾಬೊರೇಟರಿಯಲ್ಲಿ ಸಿದ್ಧವಾದ ಹಿಂದುತ್ವ ಮಾದರಿಯ ಪ್ರಯೋಗಕ್ಕೆ ದೇಶದಾದ್ಯಂತ ಈಗ ಚಾಲನೆಗೆ ಅವಕಾಶ ದೊರೆತಿದೆ. ಇದು ಪ್ರಗತಿಪರರಿಗೂ ಸಕಾಲ. ಎದ್ದು ನಿಲ್ಲದಿದ್ದರೆ ಬಿದ್ದು ಹೋಗಬೇಕಾದೀತು ಎಚ್ಚರ

*ಗ್ರಾಮ ವಾಸ್ತವ್ಯ ಓಕೆ. ಸುಣ್ಣ ಬಣ್ಣ ಏಕೆ?

ಸಚಿವ ಆಂಜನೇಯ ಮಂಗಳೂರು ಬಳಿಯ ಮುಲ್ಕಿ ಕೆರೆಕಾಡಿನ ಕೊರಗರ ಕಾಲನಿಯಲ್ಲಿ ವಾಸ್ತವ್ಯ ಹೂಡುತ್ತಾರಂತೆ. ಒಂದಿಬ್ಬರು ಆರಾಮವಾಗಿ ಮಲಗಬಹುದಾದ ಪುಟ್ಟ ಕೋಣೆ, ಅದಕ್ಕೆ ತಾಗಿಕೊಂಡ ಅರ್ಧ ಗೋಡೆಯಿಂದ ಪುಟ್ಟದಾದ ಅಡುಗೆ ಮನೆ ಹೊಂದಿರುವ ಈ ಮನೆಗೆ ಸುಣ್ಣ ಬಣ್ಣ ಮಾಡುತ್ತಿದ್ದಾರಂತೆ.
>ಸುಣ್ಣ ಬಣ್ಣ ಏಕೆ? ಈಗಿರುವ ಸುಣ್ಣ ಬಣ್ಣ ಮಾಸಿದ ಮನೆಯಲ್ಲೇ ವಾಸ್ತವ್ಯ ಹೂಡಲಿ.
> ಹೊಸ ಒಲೆ ಏಕೆ? ಹಳೆಯ ಮುರಿದ, ಕಪ್ಪು ಮಸಿ ತುಂಬಿದ ಒಲೆಯಲ್ಲೇ ಅಡುಗೆ ಮಾಡುವುದನ್ನು ಒಮ್ಮೆ ಸಚಿವರು ನೋಡಲಿ. ಆ ಒಲೆಯ ಹೊಗೆಯನ್ನೊಮ್ಮೆ ಕಣ್ಣಿಗೆ ತುಂಬಿಕೊಳ್ಳಲಿ. ಸಚಿವರ ಕಣ್ಣಲ್ಲೂ ಒಂದಷ್ಟು ಕಣ್ಣೀರು ಬರಲಿ.
> ಮನೆಯ ಅಂಗಳಕ್ಕೆ ಸಿಮೆಂಟ್ ಶೀಟ್ ಏಕೆ?
>ಹೊಸ ಶೌಚಾಲಯದ ನಿರ್ಮಾಣವೇಕೆ>ಹೊಸ ಸ್ನಾನಗೃಹ ನಿರ್ಮಾಣವೇಕೆ?
ಸಚಿವ ಆಂಜನೇಯ ಜನರ ಸಂಕಷ್ಟಗಳನ್ನು ಹತ್ತಿರದಿಂದ ನೋಡಿದ್ದಾರೆ. ಆದರೂ ಅದನ್ನು ಆಗಾಗ್ಗೆ ಸ್ವತಃ ಅನುಭವಿಸುತ್ತಿರಬೇಕು. ಸರ್ಕಾರ ಜನರ ಸಂಕಷ್ಟಗಳಿಗೆ ಪರಿಹಾರ ಕಂಡುಕೊಳ್ಳುವ ಪ್ರಯತ್ನವೂ ಸಚಿವರಿಂದಾಗಬೇಕು. ಆಗ ಮಾತ್ರ ಸಚಿವರ ಗ್ರಾಮ ವಾಸ್ತವ್ಯಕ್ಕೊಂದು ಅರ್ಥ ಬರುತ್ತದೆ.

–ಸಿ. ಸಿದ್ದಯ್ಯ

ಕಾ. ಸಿ. ನಾರಾಯಣ ಲಾಲ್ ಸಲಾಂ!



ಸಿ.ಪಿ.ಐ(ಎಂ) ಪಕ್ಷದ ಹಿರಿಯ ಮುಖಂಡ ಕಾ. ಸಿ. ನಾರಾಯಣ ಅವರು 14–4–2016 ರಂದು ಬೆಳಿಗ್ಗೆ 9.30ಕ್ಕೆ ನಿಧನರಾದರು. ಅವರು ಪತ್ನಿ, ಮಗಳು ಹಾಗೂ 3 ಮಂದಿ ಗಂಡು ಮಕ್ಕಳನ್ನು ಅಗಲಿರುತ್ತಾರೆ. ಇತ್ತೀಚೆಗೆ 3–4 ತಿಂಗಳಿನಿಂದ ಅಸೌಖ್ಯದಲ್ಲಿದ್ದು ಅವರಿಗೆ 81 ವರ್ಷ ವಯಸ್ಸಾಗಿತ್ತು. ಅದೇ ಸಂಜೆ ಅವರ ಅಂತ್ಯಕ್ರಿಯೆ ನಡೆಯಿತು.

ಮಂಗಳೂರು ಹಂಚು ಕಾರ್ಮಿಕರ ಮುಷ್ಕರದ ಬೆಂಬಲವಾಗಿ ನಿಧಿ ಸಂಗ್ರಹದಲ್ಲಿ 14 ವರ್ಷದ ಬಾಲಕನಾಗಿ ತೊಡಗಿಸಿಕೊಳ್ಳುವ ಮೂಲಕ ಅವರು ಕಾರ್ಮಿಕ ಚಳುವಳಿಯ ಸಂಪರ್ಕಕ್ಕೆ ಬಂದರು. ತಮ್ಮ 17ನೇ ವಯಸ್ಸಿನಲ್ಲಿ ಹಂಚು ಕಾರ್ಖಾನೆಯಲ್ಲಿ ಕೆಲಸಕ್ಕೆ ಸೇರಿ ಮುಂದೆ ಕಾರ್ಮಿಕ ಸಂಘಟನೆಯಲ್ಲಿ ಮುಖ್ಯ ಪಾತ್ರ ವಹಿಸಿದ್ದರು. ರೈತ–ಕೃಷಿಕೂಲಿಗಾರರ ಸಂಘಟನೆ ಕೂಡ ಮಾಡಿ, ರೈತ–ಕಾರ್ಮಿಕರ ಹೋರಾಟಗಳಲ್ಲಿ ಸಕ್ರಿಯವಾಗಿ ಭಾಗವಹಿಸಿರುತ್ತಾರೆ. 1960ರ ದಶಕದ ಪ್ರಸಿದ್ಧ ಬಸ್ರೂರು ರೈತ ಹೋರಾಟದಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಅವರು ದೀರ್ಘ ಕಾಲ ಕುಂದಾಪುರ ತಾಲೂಕು ರೈತಸಂಘದ ಅಧ್ಯಕ್ಷರಾಗಿದ್ದರು.

1962ರಲ್ಲಿ ಅವಿಭಜಿತ ಕಮ್ಯುನಿಸ್ಟ್ ಪಕ್ಷದ ಸದಸ್ಯರಾಗಿ, 1964ರಲ್ಲಿ ಸಿಪಿಐ(ಎಂ)ನ ಸ್ಥಾಪಕ ಸದಸ್ಯರಾದರು. 1977ರಲ್ಲಿ ಸಿಪಿಐ(ಎಂ)ನ ಪೂರ್ಣಕಾಲದ ಕಾರ್ಯಕರ್ತರಾದರು. ದೀರ್ಘಕಾಲ ಅವಿಭಜಿತ ದ.ಕ. ಮತ್ತು ಆ ಮೇಲೆ ಉಡುಪಿ ಜಿಲ್ಲೆಯ ಸಿಪಿಐ(ಎಂ) ಜಿಲ್ಲಾ ಸಮಿತಿಯ ಸದಸ್ಯರಾಗಿದ್ದರು. ಒಂದು ಬಾರಿ ಪುರಸಭಾ ಸದಸ್ಯರಾಗಿ, ಸುಮಾರು 45 ವರ್ಷಗಳ ಅವಧಿ ಸಂಘಟನೆ ಮತ್ತು ಹೋರಾಟದಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿರುತ್ತಾರೆ. ಪಕ್ಷದ ನಿಷ್ಟಾವಂತ ಕಾರ್ಯಕರ್ತರಾಗಿ ದೀರ್ಘಕಾಲ ಪಕ್ಷದ ಕೆಲಸ, ಜನಸಾಮಾನ್ಯರ ಹಿತಕ್ಕಾಗಿ ದುಡಿದವರಲ್ಲಿ ಒಬ್ಬರಾಗಿರುತ್ತಾರೆ.

ಸಿ.ಪಿ.ಐ(ಎಂ) ಪಕ್ಷದ ಉಡುಪಿ ಜಿಲ್ಲಾ ಸಮಿತಿ, ಸಿಐಟಿಯು ಜಿಲ್ಲಾ ಸಮಿತಿ, ಉಡುಪಿ ಜಿಲ್ಲಾ ಹಂಚು ಕಾರ್ಮಿಕರ ಸಂಘ ಹಾಗೂ ಇತರ ಸಾಮೂಹಿಕ ಸಂಘಟನೆಗಳು ತೀವ್ರ ಸಂತಾಪ ವ್ಯಕ್ತಪಡಿಸಿವೆ. ●

ಈ ವಾರ ಚರಿತ್ರೆಯಲ್ಲಿ

ಏಪ್ರಿಲ್ 13
1919


ಜಲಿಯಾನ್ ವಾಲಾ ಬಾಗ್ ಹತ್ಯಾಕಾಂಡ

ಅಂದು ಬೈಸಾಖಿ ಹಬ್ಬ. ಅದು 97 ವರ್ಷಗಳ ಹಿಂದೆ, 1919. ಇಬ್ಬರು ಪಂಜಾಬಿ ಸ್ವಾತಂತ್ರ್ಯ ಹೋರಾಟಗಾರರನ್ನು ಯಾವುದೇ ಮುನ್ಸೂಚನೆಯೂ ಇಲ್ಲದೆ, ಆರೋಪ ಏನೆಂಬ ಕಾರಣವನ್ನೂ ಕೊಡದೆ ಬಂಧಿಸಲಾಗಿತ್ತು. ಬೈಸಾಖಿಯ ದಿನ, ತಮ್ಮ ಜನಪ್ರಿಯ ನಾಯಕರ ಬಂಧನವನ್ನು ವಿರೋಧಿಸಿ ಸುಮಾರು 20000 ಜನ ಜಲಿಯನ್ ವಾಲಾ ಬಾಗ್ ಉದ್ಯಾನವನದಲ್ಲಿ ಶಾಂತಿಯುತ ಸಭೆ ನಡೆಸುತ್ತಿದ್ದರು.

ಆಗ ಪಂಜಾಬಿನಲ್ಲಿ ಮೈಕೆಲ್ ರೆಜಿನಾಲ್ಡ್ ಡಯರ್ ಗವರ್ನರ್ ಆಗಿದ್ದ. ಆಗ ನಡೆಯುತ್ತಿದ್ದ ಮೊದಲ ಮಹಾಯುದ್ಧದಲ್ಲಿ ಬ್ರಿಟಿಷರ ಸೈನ್ಯಕ್ಕೆ ಪಂಜಾಬಿನ ತರುಣರನ್ನು ಬಲವಂತದಿಂದ ಸೇರಿಸಿದ್ದ. ಈ ಜಬರ್ ದಸ್ತ್ ಡಯರನಿಗೆ ಕೇವಲ ಇಬ್ಬರ ಬಂಧನಕ್ಕೆ 20 ಸಾವಿರ ಜನ ಸಭೆ ಸೇರಿರುವುದು ಅವನ ಸಿಟ್ಟನ್ನು ನೆತ್ತಿಗೇರಿಸಿತ್ತು. ನಿಶ್ಯಸ್ತ್ರ ಗುಂಪನ್ನು ಹೆದರಿಸಲು ಗೋಲಿಬಾರೆ ಸರಿ ಎಂದುಕೊಂಡವನೆ ನೆರೆದಿದ್ದ ಸಾವಿರಾರು ಜನರ ಮೇಲೆ ಏಕಾಏಕಿ 1650 ಸುತ್ತು ಗುಂಡನ್ನು ಹಾರಿಸಲು ಆಜ್ಞೆ ಮಾಡಿದ. ಕಕ್ಕಾಬಿಕ್ಕಿಯಾದ ಜನ ದಿಕ್ಕಾಪಾಲಾಗಿ ಓಡಿದರು. ಸರ್ಕಾರಿ ದಾಖಲೆ 379 ಸಾವು ಎಂದರೆ, ಆಸ್ಪತ್ರೆ ದಾಖಲೆ 1100 ಎಂದವು.

ಈ ಹತ್ಯಾಕಾಂಡದ ವಿರುದ್ಧ ದೇಶಾದ್ಯಂತ ವ್ಯಾಪಕ ತೀವ್ರ ಪ್ರತಿಭಟನೆ ನಡೆಯಿತು. ಬ್ರಿಟಿಷ್ ಸರ್ಕಾರ ಈ ಪ್ರತಿಭಟನೆಗೆ ಮಣಿದು ಡಯರನನ್ನು ಕೆಲಸದಿಂದ ಕಿತ್ತು ಮನೆಗೆ ಕಳಿಸಿತು. ಜಲಿಯನ್ ವಾಲಾಬಾಗ್ ಹತ್ಯಾಕಾಂಡದಿಂದ ಹೋರಾಟಕ್ಕೆ ಸೆಳೆಯಲ್ಪಟ್ಟ ಯುವಕರಲ್ಲಿ ಭಗತ್ ಸಿಂಗನೂ ಒಬ್ಬ. ಕೇವಲ ಹನ್ನೆರಡು ವಯಸ್ಸಿನ ಭಗತ್ ಹತ್ಯಾಕಾಂಡವಾದ ಕೆಲವೇ ಘಂಟೆಗಳಲ್ಲಿ ಆ ಸ್ಥಳಕ್ಕೆ ಭೇಟಿಕೊಟ್ಟ. ಅಲ್ಲಿ ನಡೆದಿರಬಹುದಾದ ಹತ್ಯೆ, ಆಕ್ರಂದನ, ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದ ಶವಗಳು, ರಕ್ತದಕೋಡಿ ಆ ಎಳೆಯ ಮನಸ್ಸಿನ ಮೇಲೆ ಗಾಢ ಪರಿಣಾಮ ಬೀರಿದವು.

97 ವರ್ಷಗಳ ಹಿಂದೆ ಈ ಬೈಸಾಖಿಯ ದಿನ ನಡೆದ ಘಟನೆ ದೇಶದ ಸ್ವಾತಂತ್ರ್ಯ ಚಳುವಳಿಗೆ ಒಬ್ಬ ಮಹಾನ್ ಕ್ರಾಂತಿಕಾರಿಯನ್ನು ಹುಟ್ಟುಹಾಕಿತು. ಅವನೇ ಹುತಾತ್ಮ ಭಗತ್ ಸಿಂಗ್.



ತೆರಿಗೆಗಳ್ಳತನ, ಭ್ರಷ್ಟಾಚಾರಗಳು ಏಕೆ ಹೆಚ್ಚುತ್ತಿವೆ?

– ವಿ.ಎನ್. ಲಕ್ಷ್ಮೀನಾರಾಯಣ

ಆಹಾರ ಧಾನ್ಯಗಳನ್ನು ಬೆಳೆಯಲು ಹೊಲಗದ್ದೆಗಳಿಗೇ ಹೋಗಿ ದೈಹಿಕ ಶ್ರಮವನ್ನು ಬಳಸದೆ ಬೇರೆ ದಾರಿಯಿಲ್ಲ. ಜೀವನಾಗತ್ಯ ವಸ್ತುಗಳನ್ನು ತಯಾರಿಸಲು ಕಾರ್ಖಾನೆ, ಉದ್ಯಮಗಳ ಕಾರ್ಯಾಗಾರದಲ್ಲಿ ಗಂಟೆಗಟ್ಟಲೆ ಬೆವರು ಸುರಿಸಿ ದುಡಿಯಬೇಕು. ಆದರೆ ಇವುಗಳ ವಿನಿಮಯ ಮಾಧ್ಯಮವಾದ ಹಣವನ್ನು ಮಾತ್ರ ಹೇಗಾದರೂ ಪಡೆಯಬಹುದು ಎಂಬ ಮನಸ್ಥಿತಿ ಯಾವುದೇ ಬಗೆಯ ಬಂಡವಾಳವಾದೀ ಸಮಾಜದಲ್ಲಿ ಸಾಧ್ಯ. ನೇರವಾಗಿ ಹಣವನ್ನೇ ಮುಖ್ಯ ಸರಕೆಂದು ಪರಿಗಣಿಸುವ ವ್ಯಾಪಾರ, ಲಾಭಕೋರತನ, ತೆರಿಗೆಗಳ್ಳತನ, ಸಾಲ, ಜೂಜು, ಮೋಸ, ಭ್ರಷ್ಟಾಚಾರ, ಆರ್ಥಿಕ ಅಪರಾಧಗಳು, ಲೇವಾದೇವಿ, ಲಾಟರಿ, ವಿಮೆ ಮುಂತಾದುವು ಹಣಕಾಸು ಬಂಡವಾಳದ ಆರ್ಥಿಕತೆಯಲ್ಲಿ ಸಹಜವೆನ್ನಿಸುವಷ್ಟು ಅನಿವಾರ್ಯವಾಗಿ ಇರುವಂಥವು. ಇಂಥ ಪರಿಸರದಲ್ಲಿ ಬದುಕುವ ಜನರಿಗೆ ಅದರಲ್ಲೂ ಎಳೆಯರಿಗೆ ಇವೆಲ್ಲಾ ಒಂದಲ್ಲ ಒಂದು ರೀತಿಯಲ್ಲಿ ಬದುಕಿನ ಅನಿವಾರ್ಯ ಅಗತ್ಯಗಳೆಂದೇ ತೋರುತ್ತವೆ. ಈ ಘೋರ ಪರಿಣಾಮಗಳನ್ನು ಹತ್ತಿಕ್ಕಲು, ಹಿಮ್ಮೆಟ್ಟಿಸಲು ಹಣ ಕೇಂದ್ರಿತವಾದ ಹಣಕಾಸು ಆರ್ಥಿಕತೆಯನ್ನು ತಿರಸ್ಕರಿಸಿ ಜೀವನ ಕೇಂದ್ರಿತವಾದ ಸಮಾಜವಾದೀ ಆರ್ಥಿಕತೆಯನ್ನು ಜಾರಿಗೆ ತರುವುದೊಂದೇ ದಾರಿ.

ಪ್ರಕೃತಿಯಲ್ಲಿ ಸ್ವಾಭಾವಿಕವಾಗಿ ಸಿಗುವ ವಸ್ತುಗಳಿಗೆ ಯಾವುದೇ ಮೌಲ್ಯವಿಲ್ಲ. ಅವಕ್ಕೆ ಮನುಷ್ಯನ ಶ್ರಮಶಕ್ತಿಯನ್ನು ಸೇರಿಸಿ ಪಡೆಯುವ ಜೀವನಾವಶ್ಯಕ ವಸ್ತುಗಳಿಗೆ ಮಾತ್ರ ಮೌಲ್ಯವಿದೆ. ಉದಾಹರಣೆಗೆ ಸ್ವಾಭಾವಿಕವಾದ ಕಾಡು, ಮರ ಗಿಡ, ನದಿ, ಕಾಡುಹಣ್ಣು, ಕಾಡುಹೂವು, ಉಳುಮೆಗೊಳಗಾಗದ ಭೂಮಿ, ನೆಲದಿಂದ ತೆಗೆಯದ ಖನಿಜರೂಪದ ಲೋಹಗಳು, ಸಮುದ್ರದ ತಳದಲ್ಲಿರುವ ತೈಲ ಮುಂತಾದವುಗಳಿಗೆ ತಮ್ಮದೇ ಆದ ಮೌಲ್ಯವಿಲ್ಲ. ಅವಕ್ಕೆ ಶ್ರಮಶಕ್ತಿಯನ್ನು ಸೇರಿಸಿ ಪಡೆಯುವ ಮರಮುಟ್ಟು, ಬೇಟೆಯಾಡಿ ಪಡೆದ ಪ್ರಾಣಿ ಮಾಂಸ, ಹಿಡಿದ ಮೀನು, ಕೃಷಿಮಾಡಿ ಬೆಳೆದ ಹೂವು, ಹಣ್ಣು, ಧಾನ್ಯ ಮುಂತಾದ ಆಹಾರ, ಮಣ್ಣು–ಕಲ್ಲಿನಿಂದ ಮಾಡಿದ ಮಡಿಕೆ–ಕುಡಿಕೆಗಳು, ಕಬ್ಬಿಣ, ತಾಮ್ರ, ಬೆಳ್ಳಿ, ಚಿನ್ನ ಮುಂತಾದ ಲೋಹಗಳು, ಅಲಂಕಾರಕ್ಕೆ ಬಳಸುವ ಮುತ್ತು, ರತ್ನ, ವಜ್ರಗಳು ಇವೆಲ್ಲಕ್ಕೂ ತಮ್ಮದೇ ಆದ ಮೌಲ್ಯವಿದೆ. ಕಲ್ಲು, ಲೋಹ ಮತ್ತು ಧಾತುಗಳನ್ನು ಬಳಸಿ ಜೀವನಾವಶ್ಯಕ ವಸ್ತುಗಳನ್ನು ಪಡೆಯಲು, ಸೃಷ್ಟಿಸಲು ಬಳಸುವ ಸಾಧನಗಳಾದ ಉಪಕರಣ ಮತ್ತು ಯಂತ್ರಗಳಿಗೆ, ಅಲ್ಲದೆ ಸ್ವರಕ್ಷಣೆಗಾಗಿ, ಆಕ್ರಮಣಕ್ಕಾಗಿ ಮಾಡಿಕೊಳ್ಳುವ ಆಯುಧಗಳಿಗೆ, ತಮ್ಮದೇ ಆದ ಮೌಲ್ಯವಿದೆ.

ಶ್ರಮಶಕ್ತಿಯ ಬಳಕೆ ಯಾವಾಗಲೂ ಸಾಮಾಜಿಕವಾದದ್ದು. ಅಂದರೆ ಮನುಷ್ಯ–ಮನುಷ್ಯರ ನಡುವಿನ ಸಂಬಂಧಗಳ ಮೂಲಕ ಬಳಸುವಂಥದ್ದು. ಇದರಿಂದ ಸೃಷ್ಟಿಯಾಗುವ ಎಲ್ಲವಸ್ತುಗಳೂ, ಅವುಗಳ ಸೃಷ್ಟಿಗೆ ಆಧಾರವಾದ ಪ್ರಾಕೃತಿಕ ವಸ್ತುಗಳೂ ಸಾಮಾಜಿಕವಾದವುಗಳೇ. ಹೀಗಾಗಿ ಸಾಮಾಜಿಕ ಶ್ರಮಶಕ್ತಿಯಿಂದ ಸೃಷ್ಟಿಯಾಗುವ ಎಲ್ಲವೂ ಎಲ್ಲರ ಬಳಕೆಗಾಗಿ ಇರುವಂಥವು.

ವಿನಿಮಯ ಮೌಲ್ಯ

ಮನುಷ್ಯರ ಶ್ರಮಶಕ್ತಿಯ ವಿವಿಧ ರೂಪಗಳಾದ ದೈಹಿಕ ಸಾಮರ್ಥ್ಯ, ಬುದ್ಧಿ ಬಲ, ಕೌಶಲಗಳು ಎಲ್ಲರಲ್ಲಿಯೂ ಸಮಾನವಾಗಿ ಇರುವುದಿಲ್ಲ. ಮತ್ತು ಪ್ರಾಕೃತಿಕ ವಸ್ತುಗಳು ಎಲ್ಲರಿಗೂ ಸಮಾನವಾಗಿ ಲಭ್ಯವಿರುವುದಿಲ್ಲ. ಮತ್ತು ಎಲ್ಲರೂ ಎಲ್ಲರೀತಿಯ ವಸ್ತುಗಳನ್ನೂ ಎಲ್ಲರೂ ಸೃಷ್ಟಿಸುವುದು ಸಾಧ್ಯವಿಲ್ಲ. ಹೀಗಾಗಿ ವಿವಿಧ ಬಗೆಯ ಶಕ್ತಿ, ಸಾಮರ್ಥ್ಯ, ಕೌಶಲ, ಪ್ರಾಕೃತಿಕ ವಸ್ತುಗಳ ಲಭ್ಯತೆಗಳನ್ನು ಪಡೆದವರ ಮಧ್ಯೆ ಪರಸ್ಪರ ಅವಲಂಬನೆ, ಸಹಕಾರ ಅನಿವಾರ್ಯ. ಅಂದರೆ, ಪ್ರಧಾನವಾಗಿ ದೈಹಿಕ ಶ್ರಮಶಕ್ತಿಯನ್ನು ಬಳಸಿ ಆಹಾರ ಬೆಳೆಯುವ ರೈತರು, ಜೀವನಾವಶ್ಯಕ ವಸ್ತುಗಳನ್ನು ಸೃಷ್ಟಿಸುವ ಕಾರ್ಮಿಕರು, ಪ್ರಧಾನವಾಗಿ ಬುದ್ಧಿಶಕ್ತಿ ಮತ್ತು ಜ್ಞಾನ–ಕೌಶಲಗಳನ್ನು ಬಳಸಿ ಉಪಕರಣಗಳನ್ನು–ಯಂತ್ರಗಳನ್ನು ಸೃಷ್ಟಿಸುವ ಸಂಯೋಜಿಸುವ ಕುಶಲಕರ್ಮಿಗಳು, ತಂತ್ರಜ್ಞಾನಿಗಳು, ವಿಜ್ಞಾನಿಗಳು ತಮ್ಮ ಅಗತ್ಯಗಳಿಗಾಗಿ ಪರಸ್ಪರರನ್ನು ಅವಲಂಬಿಸಬೇಕಾಗುತ್ತದೆ. ಪರಸ್ಪರರ ಸಹಕಾರದಿಂದ ಜೀವಿಸಬೇಕಾಗುತ್ತದೆ. ಆದ್ದರಿಂದ ತಾವು ಸೃಷ್ಟಿಸುವ ವಸ್ತುಗಳನ್ನು ಪರಸ್ಪರವಾಗಿ ವಿನಿಮಯ ಮಾಡಿಕೊಳ್ಳಬೇಕಾಗುತ್ತದೆ. ಇದು ಸಮಾಜ–ಸಮಾಜಗಳ ಮಧ್ಯೆ, ಗ್ರಾಮ–ಗ್ರಾಮಗಳ ಮಧ್ಯೆ, ದೇಶ–ದೇಶಗಳ ಮಧ್ಯೆ ಸಂಬಂಧವನ್ನು ಬೆಸೆಯುವ ಶಕ್ತಿಯಾಗಿ ಸಾಮಾಜಿಕ ಜೀವನವನ್ನು ನಿರ್ಮಿಸುತ್ತದೆ. ಇದೇ ವಸ್ತುಗಳಿಗೆ ವಿನಿಮಯ ಮೌಲ್ಯವನ್ನು ತಂದುಕೊಡುತ್ತದೆ.

ವಸ್ತುಗಳ ಮೌಲ್ಯ ಎಂದರೆ ವಿನಿಮಯ ಮೌಲ್ಯವೇ. ಇದರಲ್ಲಿ ಯಾವ ವಸ್ತುವಿನ ಮೌಲ್ಯ ಸಾಪೇಕ್ಷವಾಗಿ ಹೆಚ್ಚು, ಯಾವ ವಸ್ತುವಿನ ಮೌಲ್ಯ ಕಡಿಮೆ ಎಂಬುದನ್ನು ಆ ವಸ್ತುವಿನ ಸೃಷ್ಟಿಗೆ ಆಧಾರವಾದ ಪ್ರಾಕೃತಿಕ ಮೂಲದ ಲಭ್ಯತೆ, ಅದನ್ನು ಪ್ರಕೃತಿಯಿಂದ ಪಡೆಯಲು ಬೇಕಾಗುವ ಶ್ರಮಶಕ್ತಿಯ ಪ್ರಮಾಣ, ಮತ್ತು ಬದುಕಿಗೆ ಅದು ಎಷ್ಟು ಅಗತ್ಯ ಎಂಬ ಅಂಶಗಳು ನಿರ್ಧರಿಸುತ್ತವೆ. ಆಹಾರವಸ್ತುಗಳು ಎಲ್ಲರಿಗೂ ಬೇಕು ಆದರೆ ಅವನ್ನು ಎಲ್ಲಾ ಕಡೆಗಳಲ್ಲೂ ಬೆಳೆಯುವಂಥ ಫಲವತ್ತತೆ ಮತ್ತು ಮಣ್ಣಿನ ಗುಣಗಳು ಎಲ್ಲಾ ಭೂ ಪ್ರದೇಶಗಳಲ್ಲೂ ಸಮಾನವಾಗಿ ಇರುವುದಿಲ್ಲ. ಎಲ್ಲಾ ಖನಿಜಗಳೂ ಎಲ್ಲಾ ಕಡೆಗಳಲ್ಲೂ ಸಿಗುವುದಿಲ್ಲ. ನೀರಿನ ಲಭ್ಯತೆ ಎಲ್ಲಾ ಪ್ರದೇಶಗಳಲ್ಲೂ ಒಂದೇ ಸಮನಾಗಿರುವುದಿಲ್ಲ. ಇವೆಲ್ಲಾ ಸಮೃದ್ಧವಾಗಿ ದೊರೆಯುವ ಕಡೆ ಅವನ್ನು ಪಡೆಯಲು ಅಗತ್ಯವಾದ ಶ್ರಮಶಕ್ತಿಯನ್ನು ಒದಗಿಸುವಷ್ಟು ಜನಸಂಖ್ಯೆ ಇರುವುದಿಲ್ಲ. ಈ ಕೊರತೆಗಳನ್ನು ಸರಿದೂಗಿಸಲು ಜನರು ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ವಲಸೆ ಹೋಗುವುದು, ಸ್ಥಳೀಯ ಜನರ ಮೇಲೆ ಆಕ್ರಮಣ ಮಾಡುವುದು, ನಿಯಂತ್ರಣ ಮಾಡುವುದು, ಅವರು ವಾಸಿಸುವ ಭೂಪ್ರದೇಶಗಳನ್ನು ಬಲವಂತವಾಗಿ ತಮ್ಮ ವಶಕ್ಕೆ ತೆಗೆದುಕೊಂಡು ನಿಯಂತ್ರಣ ಮಾಡುವುದು. ಅಥವಾ ಆಕ್ರಮಣಕಾರರಿಂದ ಇರುವುದನ್ನು ರಕ್ಷಿಸಿಕೊಳ್ಳಲು ಸ್ಥಳೀಯರು ಹೋರಾಡುವುದು, ಸಂಧಿ, ರಾಜಿ, ಒಪ್ಪಂದಗಳನ್ನು ಮಾಡಿಕೊಳ್ಳುವುದು ಬಹಳ ಹಿಂದಿನಿಂದಲೂ ನಡೆದುಕೊಂಡು ಬಂದಿರುವ ವಿದ್ಯಮಾನಗಳು. ಇವನ್ನೇ ಇನ್ನೊಂದು ರೀತಿಯಲ್ಲಿ, ವಲಸೆ, ಯುದ್ಧ, ವ್ಯಾಪಾರ, ವಸಾಹತೀಕರಣ ಎಂದು ಹೇಳುತ್ತೇವೆ. ಒಟ್ಟಾರೆಯಾಗಿ ರಾಜಕೀಯ ಎಂದು ಕರೆಯುವ ಈ ವಿದ್ಯಮಾನಗಳಲ್ಲಿನ ಮೂಲಭೂತ ಅಂಶ ವಸ್ತುಗಳ ಮೌಲ್ಯನಿರ್ಣಯ ಮತ್ತು ವಿನಿಮಯ.

ವಿನಿಮಯದ ಮಾಧ್ಯಮ ಹಣ

ವಸ್ತಗಳನ್ನು ವಸ್ತುಗಳಿಗೇ ವಿನಿಮಯ ಮಾಡಿಕೊಳ್ಳುವ ಕಷ್ಟಗಳನ್ನು ನಿವಾರಿಸಲು ಬಳಕೆಗೆ ಬಂದಿರುವ ಮಾಧ್ಯಮವೇ ಹಣ. ಯಾವುದೇ ವಸ್ತುವನ್ನು ಹಣಕ್ಕೆ ವಿನಿಮಯ ಮಾಡಿಕೊಂಡರೆ ಅದೇ ಹಣಕ್ಕೆ ಮತ್ಯಾವುದೇ ವಸ್ತುವನ್ನು ಬೇಕಾದರೂ ವಿನಿಮಯ ಮಾಡಿಕೊಳ್ಳಬಹುದು ಎಂಬ ಪದ್ಧತಿಯಿಂದಾಗಿ ಹಣಕ್ಕೆ ಎಲ್ಲಾ ವಸ್ತುಗಳಿಗಿಂತಲೂ ಅತಿಶಯವಾದ ವಿನಿಮಯ ಮೌಲ್ಯದ ಸ್ಥಾನ ಸಿಕ್ಕಿದೆ. ಮೊದ ಮೊದಲು ಯಾವ ವಸ್ತುವನ್ನು ಬೇಕಾದರೂ ಸಾಂಕೇತಿಕವಾಗಿ ಹಣವೆಂದು ಬಳಸಬಹುದಿತ್ತು. ಚರ್ಮದ ಚೂರು, ತಾಮ್ರದ ತುಣುಕು, ಬೆಳ್ಳಿ–ಚಿನ್ನದ ಬಿಲ್ಲೆಗಳು ಕೊನೆಗೆ ವಿಶಿಷ್ಟ ರೀತಿಯಲ್ಲಿ ಮುದ್ರಿಸಿದ ಚಿತ್ರಗಳಿರುವ ಕಾಗದವೂ ಹಣವೆಂದು ವಿನಿಮಯ ಮಾಧ್ಯಮವಾಗಿ ಬಳಕೆಯಾಗಿವೆ. ಶ್ರಮಶಕ್ತಿಯನ್ನು ಬಳಸಿ, ಕಷ್ಟಪಟ್ಟು ಜೀವನಾವಶ್ಯಕ ವಸ್ತುಗಳನ್ನು ಸೃಷ್ಟಿಸುವುದಕ್ಕಿಂತ ಹಣವನ್ನು ಹೇಗೋ ಪಡೆದುಬಿಟ್ಟರೆ ಎಲ್ಲವೂ ಸಿಗುತ್ತದೆಯೆಂಬ ನಂಬಿಕೆ ಇದರಿಂದ ಉಂಟಾಯಿತು. ಯಾರು ಬೇಕಾದರೂ ಹಣವನ್ನು ಸೃಷ್ಟಿಸಬಹುದೆಂಬ ಭಾವನೆ ನಾನಾ ರೀತಿಯ ತೊಂದರೆಗಳಿಗೆ ವ್ಯಾಪಕವಾಗಿ ದಾರಿಮಾಡಿ ಕೊಟ್ಟಿದ್ದರಿಂದ, ಆಳರಸರು ತಮ್ಮ ಲಾಂಛನವನ್ನು ಟಂಕಿಸಿದ ತಾಮ್ರ, ಬೆಳ್ಳಿ, ಚಿನ್ನಗಳ ಬಿಲ್ಲೆಗಳು ಮಾತ್ರ ವಸ್ತುಗಳ ವಿನಿಮಯ ಕ್ಕೆ ಯೋಗ್ಯವಾದ ಸಾಧನವೆಂದು ಹಣದ ನಿಯಂತ್ರಣವನ್ನು ತಮ್ಮ ಕೈಗೆ ತೆಗೆದುಕೊಂಡರು. ಆಧುನಿಕ ಕಾಲದಲ್ಲಿ ಆಯಾ ದೇಶಗಳ ಜನರ ವಸ್ತು ವಿನಿಮಯ ಸೌಲಭ್ಯಕ್ಕಾಗಿ ಆಯಾ ಸರ್ಕಾರಗಳು ಅಧಿಕೃತವಾಗಿ ಟಂಕಿಸಿದ ನಾಣ್ಯಗಳು ಮತ್ತು ಮುದ್ರಿಸಿಕೊಟ್ಟ ಕಾಗದಗಳು ಮಾತ್ರ ಹಣವೆಂದು ಬಳಸುವ ಪರಿಪಾಠ ಬೆಳೆಯಿತು. ವ್ಯಕ್ತಿ ವ್ಯಕ್ತಿಗಳ ನಡುವೆ ನಡೆಯುವ ವಸ್ತುಗಳ ವಿನಿಮಯದಲ್ಲಿ ಹಣ ಹೇಗೆ ವಿನಿಮಯ ಮಾಧ್ಯಮವೋ ಹಾಗೆಯೇ ದೇಶ ದೇಶಗಳ ನಡುವಿನ ವಸ್ತು ವಿನಿಮಯದಲ್ಲಿ, ಅಂದರೆ ವ್ಯಾಪಾರದಲ್ಲಿ ಹಣದ ಬಳಕೆ ಅತ್ಯಗತ್ಯ. ಆದರೆ ಬೇರೆ ಬೇರೆ ದೇಶಗಳ ವಿನಿಮಯ ಮಾಧ್ಯಮವಾದ ಬೇರೆ ಬೇರೆ ಬಗೆಯ ಹಣ, ದೇಶ ದೇಶಗಳ ಮಧ್ಯೆ ಸಮಾನ ವಿನಿಮಯ ಸಾಧನವಾಗಲು ಅನೇಕ ತೊಡಕುಗಳು ಎದುರಾದವು. ಅವನ್ನು ನಿವಾರಿಸಲು ಶುದ್ಧ ಚಿನ್ನವನ್ನು ಅಂತಾರಾಷ್ಟ್ರೀಯವಾಗಿ ಹಣದ ಆಧಾರವನ್ನಾಗಿ ಅಂಗೀಕರಿಸಲಾಗಿದೆ.

ಲೋಹವನ್ನು ಹಣವೆಂದು ಟಂಕಿಸಿ, ಅಥವಾ ಕಾಗದವನ್ನು ಹಣವೆಂದು ಮುದ್ರಿಸಿ ವಿನಿಮಯ ಮಾಧ್ಯಮವನ್ನಾಗಿ ಬಳಕೆಗೆ ತರುವಾಗ ಅವುಗಳಲ್ಲಿ ಸುಲಭವಾಗಿ ನಕಲು ಮಾಡಲು ಬಾರದಂತಿರುವ ಲೋಹಗಳ ಮಿಶ್ರಣ, ಕಾಗದ–ಬಣ್ಣಗಳ ಗುಣಮಟ್ಟ ಮತ್ತು ವಿನ್ಯಾಸ–ವಿಶಿಷ್ಟ ಲಾಂಛನ, ಗುರುತುಗಳನ್ನು ಬಳಸಬೇಕು. ಹಾಗೆ ಮಾಡಿದ ಮೇಲೂ ನಕಲು ಮಾಡಿದ ಹಣ ಅಧಿಕೃತ ಹಣದೊಂದಿಗೆ ವಿನಿಮಯ ಮಾಧ್ಯಮವಾಗಿ ಬಳಕೆಗೊಳ್ಳುವುದು ಅಸಾಧ್ಯವಲ್ಲ ಎಂಬುದು ಎಲ್ಲಾ ದೇಶಗಳ ಅನುಭವವಾಗಿದೆ.

ಅಂತಾರಾಷ್ಟ್ರೀಯ ಹಣಕ್ಕೆ ಆಧಾರವಾಗಿ ಚಿನ್ನವೇ ಏಕೆ ಎಂಬ ಪ್ರಶ್ನೆ ಇಲ್ಲಿ ಏಳುತ್ತದೆ. ಲೋಹದ ಶುದ್ಧತೆ, ಅದರಿನ ಅಲಭ್ಯತೆ, ಲೋಹವಾಗಿ ಸಂಸ್ಕರಿಸಲು ಇರುವ ಕ್ಲಿಷ್ಟತೆ, ಮತ್ತು ಶಾಖ, ಹವೆ, ತೇವಾಂಶ ಮುಂತಾದ ಪ್ರಾಕೃತಿಕ ಅಂಶಗಳಿಂದಾಗಿ ಹಾಳಾಗದ ಗುಣ ಚಿನ್ನವನ್ನು ಅಂತಾರಾಷ್ಟ್ರೀಯ ಹಣವೆಂದು ಪರಿಗಣಿಸಲು ಕಾರಣವಾಗಿದೆ. ಹಣದ ವಿದೇಶೀ ವಿನಿಮಯದಲ್ಲಿ ಯಾವ ದೇಶದಲ್ಲಿನ ಶ್ರಮಶಕ್ತಿಯ ಮೌಲ್ಯ ಹೆಚ್ಚಿರುತ್ತದೆಯೋ ಆ ಹಣದ ವಿನಿಮಯ ಮೌಲ್ಯ ಶ್ರಮಶಕ್ತಿಗೆ ಕಡಿಮೆ ಮೌಲ್ಯವಿರುವ ದೇಶದ ಹಣದ ಮೌಲ್ಯಕ್ಕಿಂತ ಯಾವಾಗಲೂ ಹೆಚ್ಚಿರುತ್ತದೆ.

ಎಲ್ಲಾ ಕಾಲದಲ್ಲೂ, ಎಲ್ಲಾ ದೇಶಗಳಲ್ಲೂ ಜನರು ಯಾವುದೇ ವೃತ್ತಿಯನ್ನು ಕೈಗೊಂಡಿದ್ದರೂ ಅವರ ಜೀವನ ಆಹಾರ ಕೇಂದ್ರಿತವಾಗಿದೆ. ಶ್ರಮಿಕರು ಸೃಷ್ಟಿಸುವ ಜೀವನಾವಶ್ಯಕ ವಸ್ತುಗಳು ಜಾತಿ, ಮತ, ಧರ್ಮ, ಲಿಂಗ, ಸಂಸ್ಕೃತಿಗಳ ಭೇದವಿಲ್ಲದೆ ಆಬಾಲ ವೃದ್ಧರಾದಿಯಾಗಿ ಎಲ್ಲರಿಗೂ ಅತ್ಯಗತ್ಯ. ಇವು ಯಾರಲ್ಲಿ ಸಮೃದ್ಧವಾಗಿವೆಯೋ ಅವರನ್ನು ಸ್ಥಿತಿವಂತರೆಂದು, ಇವುಗಳ ಅಭಾವದಿಂದ ಕಷ್ಟ ಪಡುವವರನ್ನು ಬಡವರೆಂದು ಗುರುತಿಸುವುದು ವಾಡಿಕೆ. ಆಹಾರ ಮತ್ತು ಜೀವನಾವಶ್ಯಕ ವಸ್ತುಗಳ ಸಂಗ್ರಹಕ್ಕಿಂತ ಅವುಗಳ ವಿನಿಮಯ ಮಾಧ್ಯಮವಾದ ಹಣದ ಸಂಗ್ರಹ ಯಾರಲ್ಲಿ ಸಮೃದ್ಧವಾಗಿದೆಯೋ ಅವರನ್ನು ಶ್ರೀಮಂತರೆಂದು, ಇಲ್ಲದವರನ್ನು ಬಡವರೆಂದು ಕರೆಯುವುದು ಈಗ ರೂಢಿಗೆ ಬಂದಿದೆ. ಹೀಗೆ ನಿಜವಾದ ವಿನಿಮಯ ಮೌಲ್ಯವಿರುವ ವಸ್ತುವಿನ ಸ್ಥಾನವನ್ನು ವಿನಿಮಯ ಮೌಲ್ಯದ ಮಾಧ್ಯಮವಾದ ಹಣ ಆಕ್ರಮಿಸಿದೆ. ಹೀಗಾಗಿ 'ದುಡ್ಡಿದ್ದವನೇ ದೊಡ್ಡಪ್ಪ', 'ಹಣವಿಲ್ಲದವನು ಹೆಣಕ್ಕೆ ಸಮಾನ' ಎಂಬಂಥ ನಾಣ್ಣುಡಿಗಳು ಹುಟ್ಟಿಕೊಂಡಿವೆ. 'ಧನಕನಕ ಉಳ್ಳನಕ ದಿವಸಕರನಂತಕ್ಕು/ಧನಕನಕ ಹೋದ ಮರುದಿನವೆ ಹಾಳೂರ/ಶುನಕನಂತಕ್ಕು ಸರ್ವಜ್ಞ' ಎಂಬ ವಚನ, ಹಣಕೇಂದ್ರಿತ ಸಮಾಜವನ್ನು ಬಿಂಬಿಸುತ್ತದೆ.

ದೇಶ ವಿದೇಶಗಳ ವ್ಯವಹಾರದಲ್ಲಿ ದೇಶೀಯ ಹಣಕ್ಕಿಂತ ಶುದ್ಧ ಚಿನ್ನವನ್ನೇ ವಸ್ತುಗಳ ವಿನಿಮಯ ಮಾಧ್ಯಮವನ್ನಾಗಿ ಬಳಸುತ್ತಾರೆ. ಯಾವ ದೇಶದ ಸರ್ಕಾರದ ನಿಯಂತ್ರಣದಲ್ಲಿ ಶುದ್ಧ ಚಿನ್ನದ ದಾಸ್ತಾನು ಸಾಪೇಕ್ಷವಾಗಿ ಅತ್ಯಧಿಕವಾಗಿದೆಯೋ ಅದು ಶ್ರೀಮಂತ ದೇಶವೆಂದೂ, ಕನಿಷ್ಠ ದಾಸ್ತಾನಿನ ದೇಶಗಳನ್ನು ಬಡದೇಶಗಳೆಂದೂ ಗುರುತಿಸುವಾಗ ಆಹಾರ ಮತ್ತು ಜೀವನಾವಶ್ಯಕ ವಸ್ತುಗಳ ಸಮೃದ್ಧಿ ಅಥವಾ ಅಭಾವ ಗೌಣವಾಗುತ್ತದೆ.

ಹಣವೂ ಒಂದು ಸರಕಾದಾಗ

ವಸ್ತುಗಳ ಸೃಷ್ಟಿಯಲ್ಲಿ ಶ್ರಮಶಕ್ತಿ ಮುಖ್ಯ ಪಾತ್ರವನ್ನು ವಹಿಸುತ್ತದೆ. ಬಂಡವಾಳ ಎನ್ನುವುದೂ ಶ್ರಮಶಕ್ತಿಯ ಸಂಚಿತ ರೂಪವೇ. ಹೀಗಾಗಿ ಶ್ರಮಶಕ್ತಿ ಇಲ್ಲದೆ ವಸ್ತುಗಳ ಸೃಷ್ಟಿ ಇಲ್ಲ. ವ್ಯಾಪಾರದಲ್ಲಿ ಎಲ್ಲ ವಸ್ತುಗಳೂ 'ಸರಕು' ಎಂದಾಗುತ್ತವೆ. ಅವುಗಳ ವಿನಿಮಯ ಮಾಧ್ಯಮವಾದ ಹಣ ಎಲ್ಲ ಸರಕುಗಳಿಗಿಂತ ಅತ್ಯಂತ ಮುಖ್ಯವಾದ ಸರಕಾಗುತ್ತದೆ.

ಆಹಾರ ಮತ್ತು ಜೀವನಾವಶ್ಯಕ ವಸ್ತುಗಳನ್ನು ಹಣದ ಮಾಧ್ಯಮದ ಮೂಲಕ ಲಾಭಕ್ಕಾಗಿ ವಿನಿಮಯ ಮಾಡಿಕೊಳ್ಳುವುದನ್ನು ವ್ಯಾಪಾರ ಎನ್ನುತ್ತಾರೆ. ಲಾಭ ಎಂದರೆ ವಸ್ತುಗಳನ್ನು ವಿನಿಮಯ ಮಾಡಿಕೊಳ್ಳುವಾಗ ಸಮಾನ ಮೌಲ್ಯವನ್ನು ಪಡೆಯುವ ಬದಲು ಕೊಳ್ಳುವವರಿಂದ ವ್ಯಾಪಾರಿಗಳು ಪಡೆಯುವ ಹೆಚ್ಚುವರಿ ಮೌಲ್ಯ. ಇದರಲ್ಲಿ ಹಣದ ಲಾಭಕ್ಕಾಗಿ ಕೊಡುವವರನ್ನು ಮಾರುವವರೆಂದು, ವ್ಯಾಪಾರಿಗಳೆಂದು, ಹಣಕೊಟ್ಟು ಬಳಕೆಗಾಗಿ ವಸ್ತುಗಳನ್ನು ಪಡೆಯುವವರನ್ನು ಗಿರಾಕಿಗಳೆಂದು, ಗ್ರಾಹಕರೆಂದು ಅಥವಾ ಬಳಕೆದಾರರೆಂದು ಕರೆಯುವುದು ರೂಢಿ. ಬಳಕೆಗಾಗಿ ಅಲ್ಲದೆ ಮಾರುವ ಉದ್ದೇಶಕ್ಕಾಗಿಯೇ ಅಂದರೆ ವಸ್ತುಗಳನ್ನು ಹಣದ ರೂಪಕ್ಕೆ ಪರಿವರ್ತಿಸುವುದಕ್ಕಾಗಿಯೇ ಸೃಷ್ಟಿಸುವಾಗ ಮಾರುವವರು ವಸ್ತುವಿನ ಪ್ರಮಾಣ ಮತ್ತು ಕೊಳ್ಳುವವರ ಬೇಡಿಕೆಗಳನ್ನು ಅನುಸರಿಸಿ ಬೆಲೆಯನ್ನು ನಿಗದಿಪಡಿಸುತ್ತಾರೆ. ಹೀಗಾಗಿ ವಸ್ತುಗಳ ವಿನಿಮಯ ಮೌಲ್ಯ ಬೆಲೆಗಳ ಏರಿಳಿತಕ್ಕೆ ತಕ್ಕಹಾಗೆ ಬದಲಾಗುತ್ತವೆ. ವಸ್ತುಗಳ ಬೆಲೆಗಳನ್ನು ನಿರ್ಧರಿಸುವ ಶಕ್ತಿ ಶ್ರಮಿಕರ ಕೈಯಿಂದ ಜಾರಿ ವ್ಯಾಪಾರಿಗಳ ಕೈಗೆ ಹೋಗುತ್ತದೆ. ವಸ್ತುಗಳನ್ನು ಸೃಷ್ಟಿಸುವ ಶ್ರಮಿಕರು ವ್ಯಾಪಾರಿಗಳ ನಿಯಂತ್ರಣಕ್ಕೆ ಒಳಪಡುತ್ತಾರೆ. ಹೀಗೆ ಹಣ ಎಲ್ಲ ವ್ಯವಹಾರಗಳ ಕೇಂದ್ರವಾಗುತ್ತದೆ. ಮಾರುಕಟ್ಟೆ ಆರ್ಥಿಕತೆ ಎಂದರೆ ಇದೇ.

ಹಣ ಎನ್ನುವುದು ವಸ್ತುಗಳ ವಿನಿಮಯ ಮಾಧ್ಯಮವಾಗಿ ಉಳಿಯುವ ಬದಲು ವಸ್ತುಗಳಿಗಿಂತ ಹೆಚ್ಚಿನ ಮೌಲ್ಯವನ್ನು ಪಡೆದು ತಾನೇ ಒಂದು ವಸ್ತು ಆದಾಗ ಮಾರುಕಟ್ಟೆಯಲ್ಲಿ ಅದೂ ಒಂದು ಸರಕಾಗುತ್ತದೆ. ವ್ಯಾಪಾರದಲ್ಲಿ ವಸ್ತುಗಳನ್ನು ಮಾರುವ ಹಾಗೆ ಹಣವನ್ನೂ ಮಾರಬಹುದು. ಹೀಗೆ ಹಣವನ್ನು ಮಾರಿ ಲಾಭ ಗಳಿಸುವ ವ್ಯಕ್ತಿ, ಸಂಸ್ಥೆಗಳನ್ನು ಲೇವಾದೇವಿಗಾರರು, ಬ್ಯಾಂಕುಗಳು ಎನ್ನುತ್ತೇವೆ. ಈ ಹಣದ ವ್ಯಾಪಾರಿಗಳು ಮಾರುವ ಹಣಕ್ಕೂ ಗ್ರಾಹಕರು

ಪುಟ 10 ಕ್ಕೆ



ಅಂಬೇಡ್ಕರ್ ಅವರನ್ನು ಕೇವಲ ಸಮಾಜ ಸುಧಾರಕ ಎಂದು ಚಿತ್ರಿಸಿದರೆ ಸಾಲದು. ಅವರೊಬ್ಬ ಉದಾರ ಪ್ರಜಾಪ್ರಭುತ್ವವಾದಿ ಎಂದು ಕಾಣುವುದು ಕೂಡಾ ಸರಿಯಾಗುವುದಿಲ್ಲ. ಒಬ್ಬ 'ಸಾಂವಿಧಾನಿಕ ಪ್ರಜಾಪ್ರಭುತ್ವವಾದಿ' ಎನ್ನುವುದು ಕೂಡ ಅವರ ವ್ಯಕ್ತಿತ್ವಕ್ಕೆ ನ್ಯಾಯ ಒದಗಿಸುವುದಿಲ್ಲ. ಅವರ ತೀವ್ರಗಾಮಿ ವಿಮೋಚನಕಾರೀ ಕಣ್ಣೋಟವನ್ನು ಕಳಚಿ ಹಾಕಿ ಅವರನ್ನು ಕೇವಲ ಒಂದು ಪ್ರತಿಮೆಯಾಗಿ ಮಾಡುವುದನ್ನು ತಪ್ಪಿಸುವುದು ಅಗತ್ಯವಾಗಿದೆ.

ಅಂಬೇಡ್ಕರ್‌ರವರ ವಿಶಾಲ ವಿಮೋಚನಕಾರೀ ಹರಹು ಮತ್ತು ಅವರ ಸಂದೇಶದ ಸರ್ವವ್ಯಾಪೀ ಸ್ವರೂಪ ದಲಿತ ಮತ್ತು ಜಾತಿ–ವಿರೋಧಿ ಚಳವಳಿಗಳಿಗೆ ಉಸಿರನ್ನು ತುಂಬಬೇಕು. ಸಾಮಾಜಿಕ ವಿಮೋಚನೆಯ ಇಂಥದ್ದೊಂದು ವೇದಿಕೆಯು ಭಾರತದಲ್ಲಿ ವರ್ಗ ಸಂಘರ್ಷದ ಅವಿಭಾಜ್ಯ ಅಂಗವೂ ಆಗಿರುತ್ತದೆ. ಈ ರೀತಿ ಅಂಬೇಡ್ಕರ್ ಭಾರತದಲ್ಲಿ ಕಮ್ಯುನಿಸ್ಟರಿಗೆ ಸದಾ ಪ್ರಸ್ತುತರಾಗಿದ್ದಾರೆ.

ಅಂಬೇಡ್ಕರ್‌ರವರ ತೀವ್ರಗಾಮಿ ಕಣ್ಣೋಟವನ್ನು ಮರಳಿ ಪಡೆಯೋಣ

ಏಪ್ರಿಲ್ 14ರಂದು ಡಾ. ಬಿ.ಆರ್. ಅಂಬೇಡ್ಕರ್‌ರ 125ನೇ ಜನ್ಮದಿನಾಚರಣೆಯ ಸಂದರ್ಭದಲ್ಲಿ ದೇಶದಾದ್ಯಂತ ಅವರ ಜೀವನ ಮತ್ತು ಕೃತಿಗಳನ್ನು ಸ್ಮರಿಸಿಕೊಳ್ಳಲಾಗುತ್ತಿದೆ. ಜಾತಿ–ವಿರೋಧಿ ಹೋರಾಟಗಾರ, ದಲಿತರ ವಿಮೋಚಕ, ಸಮಾಜ ಸುಧಾರಕ, ಸಂವಿಧಾನ ಶಿಲ್ಪಿ ,ಮಹಿಳೆಯರ ಹಕ್ಕುಗಳ ಪ್ರತಿಪಾದಕ–ಇವು ಈ ಭವ್ಯ ವ್ಯಕ್ತಿತ್ವದ ವಿವಿಧ ಆಯಾಮಗಳಲ್ಲಿ ಕೆಲವು. ಅದೇ ಹೊತ್ತಿಗೆ, ಅಂಬೇಡ್ಕರ್‌ರವರ ವಾರಸುದಾರಿಕೆಯ ಸ್ಪರ್ಧೆ ನಡೆಯುತ್ತಿದೆ, ಕೋಮುವಾದಿ ಮತ್ತು ಸಂಕುಚಿತ ಮನೋಭಾವದ ಶಕ್ತಿಗಳು ಅದನ್ನು ಸ್ವಾಧೀನ ಪಡಿಸಿಕೊಳ್ಳಲು ಯತ್ನಿಸುತ್ತಿವೆ.

ಈ ಸಂದರ್ಭದಲ್ಲಿ ಅಂಬೇಡ್ಕರ್‌ರವರ ತೀವ್ರಗಾಮಿ ಪ್ರಜಾಪ್ರಭುತ್ವವಾದಿ ಕಣ್ಣೋಟವನ್ನು ಮತ್ತು ಒಂದು ನೈಜ ಪ್ರಜಾಪ್ರಭುತ್ವಕ್ಕೆ ಬುನಾದಿಯಾಗಿ ಸಾಮಾಜಿಕ ವಿಮೋಚನೆಯ ಅವರ ಸಂದೇಶವನ್ನು ಮತ್ತೆ ಎತ್ತಿಕೊಳ್ಳುವುದು ಅಗತ್ಯವಾಗಿದೆ. ಯಾಕೆಂದರೆ, ಮೊದಲನೆಯದಾಗಿ ಹಾಗೂ ಅತ್ಯಂತ ಪ್ರಮುಖವಾಗಿ ಅಂಬೇಡ್ಕರ್ ಒಬ್ಬ ವಿಗ್ರಹಭಂಜಕನಾಗಿದ್ದರು ಹಾಗೂ ಶೋಷಕ ಜಾತಿ ವ್ಯವಸ್ಥೆಯೇ ಪ್ರಧಾನವಾದ ದುಷ್ಟ ಸಾಮಾಜಿಕ ವ್ಯವಸ್ಥೆಯನ್ನು ಪ್ರಶ್ನಿಸುವವರಾಗಿದ್ದರು.

ಹೀಗಾಗಿ, ಅಂಬೇಡ್ಕರ್ ಅವರನ್ನು ಕೇವಲ ಸಮಾಜ ಸುಧಾರಕ ಎಂದು ಚಿತ್ರಿಸಿದರೆ ಸಾಲದು. ಅವರ ಹಲವು ಸಮಕಾಲೀನರು ಪ್ರಯತ್ನಿಸಿದಂತೆ ಅಂಬೇಡ್ಕರ್ ಜಾತಿ ವ್ಯವಸ್ಥೆಯನ್ನಾಗಲೀ ಹಿಂದೂಧರ್ಮವನ್ನಾಗಲೀ ಸುಧಾರಿಸುವ ಗುರಿ ಹೊಂದಿರಲಿಲ್ಲ. ಅವರು ಜಾತಿ ಮತ್ತು ಹಿಂದೂಧರ್ಮ ಇವೆರಡನ್ನೂ ಖಂಡಿಸಿದರು. 1925ರಷ್ಟು ಹಿಂದೆಯೇ ಅಂಬೇಡ್ಕರ್ 'ಮನುಸ್ಮೃತಿ ದಹನ ದಿನ'ವನ್ನು ಸಂಘಟಿಸಿದ್ದರು. ಅಂದು ಅವರು ಮನುಸ್ಮೃತಿಯನ್ನು ಬಹಿರಂಗವಾಗಿ ಸುಟ್ಟು ಹಾಕಿದ್ದರು. ಗಾಂಧೀಜಿಯವರ ಅಸ್ಪೃಶ್ಯತಾ–ವಿರೋಧಿ ಆಂದೋಲನ ಮೇಲ್ಜಾತಿ ಜನರ ಹಿತಗಳನ್ನು ಸಂರಕ್ಷಿಸುವ ಹಾಗೂ ವರ್ಣ ವ್ಯವಸ್ಥೆಯನ್ನು ಮುಂದುವರಿಸಿಕೊಂಡು ಹೋಗುವ ಒಂದು ಸಾಧನ ಎಂದು ಅಂಬೇಡ್ಕರ್‌ಗೆ ಕಂಡಿತ್ತು. ಅಂಬೇಡ್ಕರ್ ಜಾತಿ ಮತ್ತು ಅದನ್ನು ಪೋಷಿಸುವ ಬ್ರಾಹ್ಮಣ್ಯದ ವ್ಯವಸ್ಥೆಯ ವಿರುದ್ಧ ಪಟ್ಟು ಹಿಡಿದು ಹೋರಾಡುವಂತೆ ಪ್ರೇರಣೆ ನೀಡಿದ್ದು ಅವರ ತೀವ್ರಗಾಮಿ ಪ್ರಜಾಸತ್ತಾತ್ಮಕ ಸಿದ್ಧಾಂತವೇ.

ಅಂಬೇಡ್ಕರ್ ಅವರ ರಾಜಕೀಯ ಮತ್ತು ತಾತ್ವಿಕ ಒಲವುಗಳನ್ನು ಗಮನಿಸಿದರೆ ಅವರೊಬ್ಬ ಉದಾರ ಪ್ರಜಾಪ್ರಭುತ್ವವಾದಿ ಎಂದು ಹೇಳಬಹುದು. ಆದರೆ ಅವರನ್ನು ಕೇವಲ ಆ ದೃಷ್ಟಿಯಿಂದ ನೋಡುವುದು ಸರಿಯಾಗುವುದಿಲ್ಲ. ಅಂಬೇಡ್ಕರ್ ಅವರನ್ನು ಒಬ್ಬ 'ಸಾಂವಿಧಾನಿಕ ಪ್ರಜಾಪ್ರಭುತ್ವವಾದಿ' ಎಂದು ಹೊಗಳುವವರೂ ಇದ್ದಾರೆ. ಆದರೆ ಹಾಗೆ ಮಾಡುವುದು ಕೂಡ ಅವರ ವ್ಯಕ್ತಿತ್ವಕ್ಕೆ ನ್ಯಾಯ ಒದಗಿಸುವುದಿಲ್ಲ.

ಅಂಬೇಡ್ಕರ್‌ರವರ ತೀವ್ರಗಾಮಿತ್ವ ಬೂರ್ಜ್ವಾ ಉದಾರವಾದದ ಗಡಿಗಳನ್ನು ಒಡೆದು ಹಾಕಿತು. ಆಗ ಸ್ಥಾಪಿಸಲಿದ್ದ ಸಂವಿಧಾನ ಮತ್ತು ರಾಜಕೀಯ ಪ್ರಜಾಪ್ರಭುತ್ವವು ಆರ್ಥಿಕ ಮತ್ತು ಸಾಮಾಜಿಕ ಸಮಾನತೆ ಇಲ್ಲದಿದ್ದರೆ ಕೇವಲ ತೋರಿಕೆಯಾಗುತ್ತದೆ ಎಂದು ಅವರು ಎಚ್ಚರಿಸಿದ್ದರು. ಅವರ ಆರ್ಥಿಕ ಕಾರ್ಯಕ್ರಮವು ಸಾಂಪ್ರದಾಯಿಕ ಬೂರ್ಜ್ವಾ ವಿಧಿ–ವಿಧಾನಗಳಿಗಿಂತ ಎಷ್ಟೋ ಮುಂದೆ ಇತ್ತು. ಆರ್ಥಿಕ ವ್ಯವಸ್ಥೆಯ ಮೇಲೆ ಪ್ರಭುತ್ವದ ನಿಯಂತ್ರಣ ಇರಬೇಕೆಂದು ಅಂಬೇಡ್ಕರ್ ಪ್ರತಿಪಾದಿಸಿದಾಗ ಅದು 'ಸ್ವಾತಂತ್ರ್ಯ' ವನ್ನು ಹರಣ ಮಾಡುತ್ತದೆ ಎಂದು ಕೆಲವರು ವಿರೋಧಿಸಿದ್ದರು. ಅದಕ್ಕೆ ಪ್ರತಿಯಾಗಿ ಅಂಬೇಡ್ಕರ್ ಪ್ರಶ್ನಿಸಿದ್ದರು: 'ಯಾರ ಹಾಗೂ ಯಾರಿಗಾಗಿ ಈ ಸ್ವಾತಂತ್ರ್ಯ? ಈ ಸ್ವಾತಂತ್ರ್ಯ ನಿಶ್ಚಿತವಾಗಿಯೂ ಗೇಣಿಗಳನ್ನು ಹೆಚ್ಚಿಸಲು ಭೂಮಾಲಿಕರಿಗೆ ಮತ್ತು ಕೆಲಸದ ಅವಧಿಯನ್ನು ಹೆಚ್ಚಿಸಿ ಕೂಲಿಯನ್ನು ಕಡಿಮೆ ಮಾಡಲು ಬಂಡವಾಳಶಾಹಿಗಳಿಗೆ ಇರುವ ಸ್ವಾತಂತ್ರ್ಯ'.



ಪ್ರಕಾಶ ಕಾರಟ್

ಅಂಬೇಡ್ಕರ್ ಮಹಿಳೆಯರ ಹಕ್ಕುಗಳ ಪರವಾಗಿ ಅವಿರತ ಹೋರಾಟ ನಡೆಸಿದವರು. ಸ್ವಾತಂತ್ರ್ಯಾನಂತರ ಪ್ರಥಮ ಸಚಿವ ಸಂಪುಟದಲ್ಲಿ ಕಾನೂನು ಸಚಿವರಾಗಿ ಅವರು ಹಿಂದೂ ಕೋಡ್ ಬಿಲ್ ಮಂಡಿಸಿದರು. ಆ ಮಸೂದೆ ಮಹಿಳೆಯರಿಗೆ ಆಸ್ತಿ ಮತ್ತು ವಾರಸುದಾರಿಕೆಯ ಹಕ್ಕುಗಳನ್ನು ಒದಗಿಸಿತ್ತು. ಕಾಂಗ್ರೆಸ್‌ನ ಒಳಗಡೆಯಿಂದಲೇ ಮತ್ತು ಹಿಂದೂ ಸಂಪ್ರದಾಯವಾದಿಗಳಿಂದ ಈ ಮಸೂದೆಗೆ ತೀವ್ರ ವಿರೋಧ ವ್ಯಕ್ತವಾದಾಗ ಅಂಬೇಡ್ಕರ್ ರಾಜಿ ಮಾಡಿಕೊಳ್ಳುವುದಕ್ಕಿಂತ ತಮ್ಮ ಸಚಿವ ಹುದ್ದೆಗೆ ರಾಜಿನಾಮೆ ನೀಡುವುದೇ ಮೇಲು ಎಂದು ಬಗೆದರು.

ಅಂಬೇಡ್ಕರ್‌ರ ಬರಹಗಳಿಂದ ಕೆಲವು ಉದ್ಧರಣೆಗಳನ್ನು ಆರಿಸಿ, ಅವುಗಳ ಸಂದರ್ಭದಿಂದ ಹೊರ ತೆಗೆದು ಅವರ ವಿಚಾರಗಳು ಮತ್ತು ಬರಹಗಳನ್ನು ಒರಟು–ಒರಟಾಗಿ ವಿರೂಪಗೊಳಿಸಿ ಅವರನ್ನು ಸ್ವಾಧೀನಪಡಿಸಿಕೊಳ್ಳಲು ಬಿಜೆಪಿ ಮತ್ತು ಸಂಘ ಪರಿವಾರ ಕೂಟವು ಸಕ್ರಿಯವಾಗಿ ಪ್ರಯತ್ನಿಸುತ್ತಿದೆ. ಅವರೊಬ್ಬ ಹಿಂದೂ ಸಮಾಜ ಸುಧಾರಕ ಹಾಗೂ ಕಟ್ಟಾ ಇಸ್ಲಾಂ ವಿರೋಧಿ ಎಂದು ಬಿಂಬಿಸಲು ಯತ್ನಿಸುತ್ತಿದೆ. ಅವರು ಹಿಂದೂ ಧರ್ಮವನ್ನು ಬಿಟ್ಟು ಬೌದ್ಧ ಧರ್ಮಕ್ಕೆ ಮತಾಂತರಗೊಂಡಿದ್ದನ್ನು ಉಪೇಕ್ಷಿಸುವ ಪ್ರಯತ್ನ ನಡೆಸಿದೆ. ಅವರ ಉದ್ದೇಶ ಸಂಘ ಪರಿವಾರದ ಹಿಂದೂ ವೀರಾಗ್ರಣಿಗಳ ಪಂಕ್ತಿಯಲ್ಲಿ ಅಂಬೇಡ್ಕರ್‌ರನ್ನು ದಲಿತ ಮೂರ್ತಿಯಾಗಿ ಪರಿವರ್ತಿಸುವುದು.

ಸತ್ಯಕ್ಕೆ ಇದಕ್ಕಿಂತ ದೊಡ್ಡ ಅಪಚಾರ ಬೇರೊಂದಿಲ್ಲ. ಹಿಂದೂ ಮಹಾಸಭಾ ಮತ್ತು ಆರ್‌ಎಸ್‌ಎಸ್ ಸಿದ್ಧಾಂತಗಳಿಗೆ ಅಂಬೇಡ್ಕರ್ ಸಂಪೂರ್ಣ ವಿರೋಧವಿದ್ದರು. "ಒಂದು ವೇಳೆ ಹಿಂದೂರಾಜ್ಯ ಸಾಕಾರಗೊಂಡರೆ, ಅದು ನಿಸ್ಸಂಶಯವಾಗಿಯೂ ದೇಶಕ್ಕೆ ದೊಡ್ಡ ಗಂಡಾಂತರವಾಗುತ್ತದೆ" ಎಂದು ಅಂಬೇಡ್ಕರ್ ಬರೆದಿದ್ದಾರೆ. ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವ ಇವುಗಳು ಒಂದು ನಾಗರಿಕ ಸಮಾಜಕ್ಕೆ ಬೇಕಾದ ಅತ್ಯಂತ ಅಮೂಲ್ಯ ಸೂತ್ರಗಳು ಎಂದು ಅವರು ನಂಬಿದ್ದರು.

ವರ್ಣಾಶ್ರಮ ಧರ್ಮ ಮತ್ತು ಹಿಂದೂ ಶಾಸ್ತ್ರಗಳ ಪರಿಕಲ್ಪನೆಯೇ ಈ ಸೂತ್ರಗಳಿಗೆ ವಿರುದ್ಧವಾದವು ಎಂದು ಅಂಬೇಡ್ಕರ್ ನಂಬಿದ್ದರು. ಮುಸ್ಲಿಮರು ಮತ್ತು ಇತರ ಧಾರ್ಮಿಕ ಅಲ್ಪಸಂಖ್ಯಾತರ ವಿರುದ್ಧ ಗುರಿಯಿಟ್ಟ ಒಂದು ವಿಶಾಲ ಹಿಂದೂ ವ್ಯವಸ್ಥೆಯೊಳಕ್ಕೆ ದಲಿತರನ್ನು ಸೇರಿಸಿಕೊಳ್ಳುವ ಪ್ರಯತ್ನ ನಡೆಸಿದ್ದರೆ ಅಂಬೇಡ್ಕರ್ ಅದರ ವಿರುದ್ಧ ಕಟುವಾದ ಹೋರಾಟ ನಡೆಸುತ್ತಿದ್ದರು.

ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ, ವಿಮೋಚನೆಯ ತಹತಹಿಕೆಯಲ್ಲಿ ಅನೇಕ ಧಾರೆಗಳು ಮತ್ತು ಸಿದ್ಧಾಂತಗಳು ತಲೆಯೆತ್ತಿದವು. ಕಮ್ಯುನಿಸ್ಟರು ಮತ್ತು ಅಂಬೇಡ್ಕರ್ ಅವರ ದೃಷ್ಟಿಕೋನ ಹಾಗೂ ಸಿದ್ಧಾಂತಗಳಲ್ಲಿ ಭಿನ್ನಾಭಿಪ್ರಾಯಗಳಿದ್ದವು. ಆದರೆ ಸಮಾನಮನಸ್ಕತೆ ಕೂಡ ವಿಶಾಲವಾಗಿತ್ತು, ಏಕೆಂದರೆ ಆರ್ಥಿಕ ಮತ್ತು ಸಾಮಾಜಿಕ ವಿಮೋಚನೆ ಮಾತ್ರವೇ ಸ್ವಾತಂತ್ರ‍್ಯಕ್ಕೆ ಆಧಾರವಾಗಬಲ್ಲುದು ಎಂದು ಅದಕ್ಕಾಗಿ ಇಬ್ಬರೂ ಶ್ರಮಿಸುತ್ತಿದ್ದರು.

ಅಂಬೇಡ್ಕರ್‌ರನ್ನು ಅವರ ತೀವ್ರಗಾಮಿ ವಿಮೋಚಕ ಕಣ್ಣೋಟವನ್ನು ಕಳಚಿ ಹಾಕಿ ಕೇವಲ ಒಂದು ಪ್ರತಿಮೆಯಾಗಿ ಮಾಡುವುದನ್ನು ತಪ್ಪಿಸುವುದು ಅಗತ್ಯವಾಗಿದೆ. ಹಲವು ದಲಿತ ಮುಖಂಡರು ಅಂಬೇಡ್ಕರ್‌ರನ್ನು ಉನ್ನತ ಪೀಠದಲ್ಲಿ ಕುಳ್ಳಿರಿಸುತ್ತಲೇ ಅವರ ಪರಂಪರೆಯನ್ನು ಕೇವಲ ಮೀಸಲಾತಿಗೆ ಹಾಗೂ ಕೋಟಾ ರಾಜಕೀಯಕ್ಕೆ ಇಳಿಸಿದ್ದಾರೆ. ಇದು ಅವರನ್ನು ಆಳುವ ವರ್ಗದ ರಾಜಕೀಯದ ಬಾಲಂಗೋಚಿಗಳಾಗಿ ಮಾಡಿದೆ. ಅಂಬೇಡ್ಕರ್‌ರ ವಿಶಾಲ ವಿಮೋಚನಕಾರೀ ಹರಹು ಮತ್ತು ಅವರ ಸಂದೇಶದ ಸರ್ವವ್ಯಾಪೀ ಸ್ವರೂಪ ದಲಿತ ಮತ್ತು ಜಾತಿ–ವಿರೋಧಿ ಚಳವಳಿಗಳಿಗೆ ಉಸಿರನ್ನು ತುಂಬಬೇಕು. ಸಾಮಾಜಿಕ ವಿಮೋಚನೆಯ ಇಂಥದ್ದೊಂದು ವೇದಿಕೆಯು ಭಾರತದಲ್ಲಿ ವರ್ಗ ಸಂಘರ್ಷದ ಅವಿಭಾಜ್ಯ ಅಂಗವೂ ಆಗಿರುತ್ತದೆ. ಈ ರೀತಿ ಅಂಬೇಡ್ಕರ್ ಭಾರತದಲ್ಲಿ ಕಮ್ಯೂನಿಸ್ಟರಿಗೆ ಸದಾ ಪ್ರಸ್ತುತರಾಗಿದ್ದಾರೆ.

ಪ್ರತಿಗಾಮಿ ಶಕ್ತಿಗಳು ಕೋಮುವಾದ ಮತ್ತು ನವ–ಉದಾರವಾದದ ಬಾವುಟಗಳಡಿಯಲ್ಲಿ ಒಟ್ಟುಗೂಡಿರುವಾಗ ಎಡ ಚಳವಳಿ ಮತ್ತು ಅಂಬೇಡ್ಕರ್‌ವಾದಿ ಚಳವಳಿಗಳೆಂಬ ಎರಡು ಧಾರೆಗಳು ಪರಸ್ಪರ ಸಮೀಪಿಸುತ್ತಿವೆ. ಈ ವಿಶಾಲ ಒಗ್ಗಟ್ಟನ್ನು ಮುಂದಕ್ಕೆ ಒಯ್ಯಬೇಕಾದರೆ, ಅಂಬೇಡ್ಕರ್‌ರವರ ನಿಜವಾದ ಮಹತ್ವ ಮತ್ತು ಪರಂಪರೆಯನ್ನು ಸರಿಯಾಗಿ ಗ್ರಹಿಸಿಕೊಂಡು ಮೈಗೂಡಿಸಿಕೊಳ್ಳಬೇಕಾಗಿದೆ. ○

ಅಮೆರಿಕನ್ ಮಿಲಿಟರಿಗೆ ಭಾರತದ ನೆಲದಲ್ಲಿ ನೆಲೆ

ಪುಟ 2 ರಿಂದ

ಸಾಮರಿಕ ಹಿತಗಳನ್ನು ಮಾರಿಕೊಂಡಂತಾಗಿದೆ– ಪ್ರಕಾಶ ಕಾರಟ್

ಈ ಒಪ್ಪಂದದ ಘೋಷಿತ ಉದ್ದೇಶ–ಎರಡೂ ದೇಶಗಳು ಪರಸ್ಪರರ ಸೇನಾನೆಲೆಗಳನ್ನು ಬಳಸಿಕೊಳ್ಳಲು ಅವಕಾಶ ನೀಡುವುದು. ಆದರೆ ವಾಸ್ತವವಾಗಿ ಅಮೆರಿಕಾ ಮೂರನೇ ದೇಶಗಳ ಮೇಲೆ ದಾಳಿಮಾಡಲು, ಮಿಲಿಟರಿ ಕಾರ್ಯಾಚರಣೆ ನಡೆಸಲು ಭಾರತದ ಮಿಲಿಟರಿ ನೆಲೆಗಳನ್ನು ಬಳಸಿಕೊಳ್ಳಲು ಕೂಡ ಇದರಿಂದ ಅವಕಾಶವಾಗುತ್ತದೆ. ಬೇರೆ ದೇಶಗಳ ಮೇಲೆ ಆಕ್ರಮಣದ ದೊಡ್ಡ ದಾಖಲೆಯೇ ಇರುವ ದೇಶ ಅಮೆರಿಕಾ ಎಂದು ಮರೆಯುವಂತಿಲ್ಲ. ಈ ಹಿಂದೆ ಅಫಘಾನಿಸ್ತಾನದ ಮೇಲೆ, ಇರಾಕಿನ ಮೇಲೆ ಅಮೆರಿಕಾ ಮಾಡಿರುವಂತಹ ದಾಳಿಗಳಿಗೆ ಇನ್ನು ಮುಂದೆ ಅದು ಭಾರತದ ಮಿಲಿಟರಿ ನೆಲೆಗಳನ್ನು ಒದಗಿಸಿಕೊಟ್ಟಂತಾಗುತ್ತದೆ ಎಂದು ಇನ್ನೊಬ್ಬ ಸಿಪಿಐ(ಎಂ) ಹಿರಿಯ ಮುಖಂಡ ಪ್ರಕಾಶ ಕಾರಟ್ ಹೇಳಿದ್ದಾರೆ. ಈ ಮೂಲಕ ಭಾರತದ ಸಾಮರಿಕ ಹಿತಗಳನ್ನು ಮಾರಿಕೊಂಡಂತಾಗಿದೆ, ಇದೊಂದು ಅಭೂತಪೂರ್ವ ರಾಷ್ಟ್ರ–ವಿರೋಧಿ ಕೃತ್ಯ ಎಂದು ಅವರು ಹೇಳಿದ್ದಾರೆ.

ಕಳೆದ ಜುಲೈನಲ್ಲಿ ರಕ್ಷಣಾ ಚೌಕಟ್ಟು ಒಪ್ಪಂದವನ್ನು ಇನ್ನೂ ಹತ್ತು ವರ್ಷಗಳ ವರೆಗೆ ಮುಂದುವರೆಸುವ ಬಗ್ಗೆ ಸಹಿ ಹಾಕಲು ವಾಶಿಂಗ್ಟನ್‌ಗೆ ಹೋಗಿದ್ದ ಮೋದಿ ಸರಕಾರದ ರಕ್ಷಣಾ ಮಂತ್ರಿಗಳು ಇನ್ನೂ ಮೂರು ಒಪ್ಪಂದಗಳಿಗೆ ಸಹಿ ಹಾಕುವುದಾಗಿ ಸೂಚಿಸಿದ್ದರು. ಈ ಮೂರು ಒಪ್ಪಂದಗಳು ಭಾರತಕ್ಕೆ ಏಕಾದರೂ ಬೇಕು ಎಂಬ ಮೂಲಭೂತ ಪ್ರಶ್ನೆಗೆ ಸರಿಯಾದ ಉತ್ತರವಿಲ್ಲ.

ಆದರೆ ಇದಕ್ಕೆ ಅಮೆರಿಕನ್ ರಕ್ಷಣಾ ವಕ್ತಾರರುಗಳ ಹೇಳಿಕೆಗಳಲ್ಲಿ ಉತ್ತರ ಸಿಗುತ್ತದೆ. ಅಮೆರಿಕಾ ಈ ಮೂರು ಒಪ್ಪಂದಗಳನ್ನು 'ಬುನಾದಿ ಒಪ್ಪಂದಗಳು' ಎಂದಿದೆ. ಅಂದರೆ ಏಶ್ಯಾದಲ್ಲಿ ಅಮೆರಿಕಾದ ಸಾಮರಿಕ ಉದ್ದೇಶದ ಈಡೇರಿಕೆಗೆ ಬುನಾದಿಯಾಗಿರುವ ಒಪ್ಪಂದಗಳು. **ಅಮೆರಿಕಾದ ಏಶ್ಯ–ಶಾಂತಸಾಗರ ಸಾಮರಿಕ ಉದ್ದೇಶಗಳ ಈಡೇರಿಕೆಗೆ ಭಾರತದ ಸೇನಾಪಡೆಗಳನ್ನು ಅಮೆರಿಕನ್ ಸೇನಾಪಡೆಗಳ ನೊಗ–ಕ್ಕೆ ಕಟ್ಟುವುದು ಇದರ ಮುಖ್ಯ ಗುರಿ ಎಂದು ಪ್ರಕಾಶ ಕಾರಟ್ ವಿಶ್ಲೇಷಿಸಿದ್ದಾರೆ.**

ಏಶ್ಯಾದಲ್ಲಿ ಚೀನಾದ ಪ್ರಭಾವವನ್ನು ಎದುರಿಸಲು ಅಮೆರಿಕಾ ರೂಪಿಸಿರುವ 'ಏಶ್ಯಾಕ್ಕೆ ಆಧಾರಗೂಟ' ಎಂಬ ತನ್ನ ಕಾರ್ಯಯೋಜನೆಗೆ ಅಮೆರಿಕಾದ ನೌಕಾ ಪಡೆಗಳ 60ಶೇ.ದಷ್ಟನ್ನು ಏಶ್ಯ–ಶಾಂತಸಾಗರ ಪ್ರದೇಶಕ್ಕೆ ಸ್ಥಳಾಂತರ ಮಾಡಲಾಗುವುದಂತೆ. ಈ ಕಾರ್ಯಯೋಜನೆಗೆ ಭಾರತವನ್ನು ಸೆಳೆಯಲು ಅಮೆರಿಕಾಕ್ಕೆ ಈ ಮೂರು ಒಪ್ಪಂದಗಳು ಬೇಕಾಗಿವೆ, ಅಷ್ಟೇ.

ಆದರೆ ಭಾರತದ ವಿದೇಶಾಂಗ ಧೋರಣೆ ಮತ್ತು ಸಾಮರಿಕ ನೀತಿಯ ಮೇಲೆ ಅಮೆರಿಕಾದೊಂದಿಗೆ ಹೆಚ್ಚುತ್ತಿರುವ ಮಿಲಿಟರಿ ಮೈತ್ರಿ ಗಂಭೀರ ದುಷ್ಪರಿಣಾಮಗಳನ್ನು ಬೀರಲಿವೆ ಎಂದು ಪ್ರಕಾಶ ಕಾರಟ್ ಹೇಳುತ್ತಾರೆ.

ತಮಾಷೆಯೆಂದರೆ, ಬಿಜೆಪಿ–ಆರೆಸ್ಸೆಸ್ 'ರಾಷ್ಟ್ರೀಯವಾದಿ ಎನ್ನುವ ಭಾವೋದ್ರೇಕವನ್ನು ಬಡಿದೆಬ್ಬಿಸುತ್ತಿರುವಾಗಲೇ, ದೇಶದಲ್ಲಿ ರಾಷ್ಟ್ರ–ವಿರೋಧಿ ಚಟುವಟಿಕೆಗಳು ನಡೆಯುತ್ತಿವೆ ಎಂದು ಗುರಿ ಮಾಡುತ್ತಿರುವಾಗಲೇ ಅವರ ಮೋದಿ ಸರಕಾರ ವಿದೇಶಾಂಗ ಮತ್ತು ಆಂತರಿಕ ವಿಷಯಗಳಲ್ಲಿ ರಾಷ್ಟ್ರ–ವಿರೋಧಿಯಾದ, ರಾಷ್ಟ್ರೀಯ ಹಿತಗಳಿಗೆ ಮಾರಕವಾದ ಧೋರಣೆಯ ಕ್ರಮಗಳನ್ನು ಕೈಗೊಳ್ಳುತ್ತಿದೆ ಎಂದು ಪ್ರಕಾಶ ಕಾರಟ್ ವರ್ಣಿಸಿದ್ದಾರೆ.

ಇದನ್ನು ಬಯಲಿಗೆಳೆಯಬೇಕಾಗಿದೆ, ಜಾತ್ಯಾತೀತ ಬೂರ್ಜ್ವಾ ಪಕ್ಷಗಳಿಗೆ ಈ ಅಪಾಯದ ಅರಿವಿದ್ದಂತಿಲ್ಲ, ಆದ್ದರಿಂದ ಎಡ–ಪ್ರಜಾಪ್ರಭುತ್ವಾದಿ ಶಕ್ತಿಗಳು ಇದನ್ನು ಜನರ ಬಳಿಗೆ ಒಯ್ಯಬೇಕಾಗಿದೆ, ಇಂತಹ ಒಪ್ಪಂದಗಳನ್ನು ತಡೆಯುವಂತೆ ಮಾಡಬೇಕಾಗಿದೆ ಎಂದು ಪ್ರಕಾಶ ಕಾರಟ್ ಹೇಳಿದ್ದಾರೆ.

ಅಂಬೇಡ್ಕರ್ ಮತ್ತು ಎಡಪಂಥ : ಭಾಗ-2

ಜಿ.ಎನ್. ನಾಗರಾಜ್

ವರ್ಣ-ಜಾತಿ ವ್ಯವಸ್ಥೆ ಮತ್ತು ಎಡಪಂಥ



ಸಾಮಾಜಿಕ-ರಾಜಕೀಯ ಪರಿಕಲ್ಪನೆಗಳ ಆಧಾರದಲ್ಲಿ ಜಗತ್ತಿನಲ್ಲಿ ಕಮ್ಯೂನಿಸ್ಟ್ ಚಳುವಳಿಗಳು, ಸಮಾಜವಾದಿಗಳು, ಸಮಾಜದ ಬದಲಾವಣೆಯನ್ನು ಬಯಸುವವರು, ಇತರ ಅನೇಕ ಪ್ರಗತಿಪರರನ್ನೆಲ್ಲಾ ಎಡಪಂಥವೆಂದು ಪರಿಗಣಿಸುವ ಪರಿಪಾಠ ಬೆಳೆದಿದೆ. ಸಮಾಜದ ರಚನೆಯಲ್ಲಿ ತೀವ್ರ ಬದಲಾವಣೆಯನ್ನು ತರಲು, ಮುಖ್ಯವಾಗಿ ಜಾತಿ ಪದ್ಧತಿಯನ್ನು ಮತ್ತು ಅಸ್ಪೃಶ್ಯತೆಯನ್ನು ತೊಡೆಯಲು,

ಅದರಿಂದ ದಮನಕ್ಕೊಳಗಾದ ದಲಿತರು, ಮಹಿಳೆಯರು ಮೊದಲಾದವರಿಗಾಗಿ ಜೀವಮಾನ ಪೂರ್ತಿ ಶ್ರಮಿಸಿದ ಡಾ. ಅಂಬೇಡ್ಕರ್ ಯಾವ ಪಂಥಕ್ಕೆ ಸೇರಿದವರು? ಸಮಾಜ ಬದಲಾವಣೆಯ ತಹತಹವನ್ನು ಹೊತ್ತ ಇವರು ಎಡಪಂಥವಲ್ಲದೇ ಮತ್ತಾವ ಪಂಥವಾಗಿರಲು ಸಾಧ್ಯ?

(5 ಭಾಗಗಳಲ್ಲಿ ಪ್ರಕಟವಾಗಲಿರುವ ಲೇಖನದ 2ನೇ ಭಾಗ)

ವರ್ಣ ವ್ಯವಸ್ಥೆ ಮತ್ತು ಅದರ ಮುಂದಿನ ಬೆಳವಣಿಗೆಯಾದ ಜಾತಿ ವ್ಯವಸ್ಥೆ ಭಾರತದ ಸಮಾಜ ರಚನೆಯ ಪ್ರಧಾನ ರೂಪ. ಅಸ್ಪೃಶ್ಯತೆ ಅದರ ಕರಾಳ ಮುಖ. ಸಾಮಾಜಿಕ, ಆರ್ಥಿಕ, ರಾಜಕೀಯ ಅಸಮಾನತೆಗಳು, ಶೋಷಣೆ, ದಮನ, ಅಮಾನವೀಯ ಆಚರಣೆಗಳು, ಬೇಧಗಳು ಮತ್ತು ದೌರ್ಜನ್ಯಗಳ ಬಹು ಮುಖ್ಯ ಮೂಲ ವರ್ಣ-ಜಾತಿ ವ್ಯವಸ್ಥೆಯೇ. ಆದ್ದರಿಂದ ಭಾರತದಲ್ಲಿ ಸಮಾಜವನ್ನು ಬದಲಾಯಿಸುತ್ತೇವೆ ಮತ್ತು ಸಮಾನತೆ, ಸ್ವಾತಂತ್ರ್ಯ ಮತ್ತು ಸೋದರತ್ವದ ಮೇಲೆ ಹೊಸ ಸಮಾಜವನ್ನು ಕಟ್ಟುತ್ತೇವೆ ಎಂಬುವರ್‍ಯಾರೂ ಕೂಡ ವರ್ಣ-ಜಾತಿ ವ್ಯವಸ್ಥೆಯನ್ನು ನಿರ್ಮೂಲ ಮಾಡುವುದನ್ನು ತಮ್ಮ ಗುರಿಯಾಗಿಸಿಕೊಳ್ಳುವುದೇ ಇರಲಾಗುವುದಿಲ್ಲ. ಆದ್ದ-ರಿಂದ ಭಾರತದಲ್ಲಿ ವರ್ಣ -ಜಾತಿ ವ್ಯವಸ್ಥೆಯ ವಿನಾಶವನ್ನು ಸಾಧಿಸಬಯಸುವವರು ಮಾತ್ರ ಎಡಪಂಥೀಯರೆಂದು ಗುರುತಿಸಿಕೊಳ್ಳಬಹುದು.

ಗಾಂಧೀಜಿ ಜಾತಿ-ವ್ಯವಸ್ಥೆ ವಿರೋಧಿಯೇ?

ಅಂಬೇಡ್ಕರ್ ಮತ್ತು ಅಂಬೇಡ್ಕರ್ ವಾದಿಗಳು ಮತ್ತು ಲೋಹಿಯಾ ಮೊದಲಾದ ಸಮಾಜವಾದಿಗಳು, ಕಮ್ಯೂನಿಸ್ಟರು ಮತ್ತು ಈ ಯಾವುದೇ ಸಾಮಾಜಿಕ ಚಳುವಳಿಗಳ ಭಾಗವಾಗದ ಅನೇಕ ಪ್ರಗತಿಪರರೂ ವರ್ಣ-ಜಾತಿ ವ್ಯವಸ್ಥೆಯನ್ನು ವಿರೋಧಿಸುವ ಪ್ರಗತಿಪರರೂ ಎಡಪಂಥೀಯರಾಗಿದ್ದಾರೆ. ಗಾಂಧಿವಾದಿಗಳು, ಕಾಂಗ್ರೆಸ್, ಆರೆಸ್ಸೆಸ್ ಮತ್ತು ಸಂಘ ಪರಿವಾರವೆಂದು ಕರೆಯಲ್ಪಡುವ ಅದರ ಅಂಗವಾದ ಜನಸಂಘ, ಬಿಜೆಪಿ ಮೊದಲಾದನೇಕ ಸಂಘ, ಸಂಸ್ಥೆಗಳು, ಆರ್ಯ ಸಮಾಜ, ಹಿಂದೂ ಮಹಾ ಸಭಾ ಮೊದಲಾದ ಸಂಘ ಸಂಸ್ಥೆಗಳು ವರ್ಣ-ಜಾತಿ ವ್ಯವಸ್ಥೆಯ ಸಮರ್ಥಕರಾಗಿದ್ದಾರೆ .ಈ ವ್ಯವಸ್ಥೆ ಭಾರತದ ಜನರಿಗೆ ಒಳಿತನ್ನೇ ಮಾಡಿದೆ, ಆ ವ್ಯವಸ್ಥೆ ಮುಂದುವರೆಯಬೇಕು ಎಂದು ಬಲವಾಗಿ ಪ್ರತಿಪಾದಿಸುವವರಾಗಿದ್ದಾರೆ. ಆದ್ದರಿಂದ ಈ ಎಲ್ಲರೂ ಬಲಪಂಥೀಯರು.

ಸ್ವತಃ ಗಾಂಧೀಜಿಯವರು ಜಾತಿ ವ್ಯವಸ್ಥೆಯನ್ನು ವಿರೋಧಿಸಿದರು ಮತ್ತು ಅಸ್ಪೃಶ್ಯತೆಯನ್ನು ನಿರ್ಮೂಲ ಮಾಡಲು ಶ್ರಮಿಸಿದರು ಎಂಬುದನ್ನು ಯಾರಾದರೂ ಎತ್ತಿ ತೋರಿಸಬಹುದು. ಆದರೆ ಅವರೇ ಅನೇಕ ಬಾರಿ ಹೇಳಿರುವಂತೆ ಜಾತಿ ವ್ಯವಸ್ಥೆಗೆ ಮಾತ್ರ ವಿರೋಧಿಗಳು ಅದರ ಮೂಲವಾದ ವರ್ಣ ವ್ಯವಸ್ಥೆಯ ಪ್ರತಿಪಾದಕರು. ಆರ್ಯ ಸಮಾಜವೂ ಕೂಡ ಇದನ್ನೇ ಹೇಳುತ್ತಿತ್ತು. ಆದರೆ ವರ್ಣ ವ್ಯವಸ್ಥೆ ಮತ್ತು ಅದರ ಸಿದ್ಧಾಂತಗಳೇ ಜಾತಿ ವ್ಯವಸ್ಥೆಯ ಮೂಲಾಧಾರ. ಆದ್ದರಿಂದ ಅವರು ಈ ಅಮಾನವೀಯ ವ್ಯವಸ್ಥೆಯನ್ನು ನಿರ್ಮೂಲ ಮಾಡಬಯಸಿದವರಲ್ಲ. ಭಾರತದ ಸಮಾಜದ ಅತ್ಯಂತ ಕುರೂಪವಾದ ಅಸ್ಪೃಶ್ಯತೆಯನ್ನು ಹೋಗಲಾಡಿಸಲು ಅವರು ಮಾಡಿದ ಪ್ರಯತ್ನಗಳು ಅಷ್ಟಕ್ಕೆ ಮಾತ್ರ ಸೀಮಿತವಾಗಿದ್ದವು. ಇಡೀ ಜಾತಿ ವ್ಯವಸ್ಥೆಯ ನಿರ್ಮೂಲವನ್ನು ಕೂಡ ಗುರಿಯಾಗಿಸಿಕೊಳ್ಳಲಿಲ್ಲ. ಆದ್ದರಿಂದ ಅವರು ವರ್ಣ-ಜಾತಿ ವ್ಯವಸ್ಥೆಯ ವಿರೋಧಿಗಳಾಗಿದ್ದರು ಎಂಬ ಮಾತನ್ನು ಒಪ್ಪಲಾಗುವುದಿಲ್ಲ. ಈ ವಿಚಾರಗಳೂ ಕೂಡ ಗಾಂಧೀಜಿಯವರ ವೈಯುಕ್ತಿಕ ವಿಚಾರಗಳೇ ಹೊರತು ಅವರು ನಾಯಕತ್ವ ನೀಡಿದ ಕಾಂಗ್ರೆಸ್ ಪಕ್ಷ ಎಂದೂ ಇಡಿಯಾಗಿ ಜಾತಿ ವ್ಯವಸ್ಥೆಯ ವಿರೋಧಿಯಾಗಿರಲಿಲ್ಲ ಮಾತ್ರವಲ್ಲ ಅದನ್ನು ಪೋಷಿಸಿ ಬೆಳೆಸಿತು. ಗಾಂಧೀಜಿಯವರ ಹಿಂಬಾಲಕರಾದ ಗಾಂಧೀವಾದಿಗಳಲ್ಲಿ ಕೂಡ ಕೆಲವೇ ಕೆಲವರು ಮಾತ್ರ ಅಸ್ಪೃಶ್ಯತಾ ನಿರ್ಮೂಲಕ್ಕಾಗಿ ಶ್ರಮಿಸಿದರು.

ಜಾತಿ ವ್ಯವಸ್ಥೆ ಮೂಲದ ಬಗ್ಗೆ ಸಮಾನ ಚಿಂತನೆ

ಭಾರತದ ಎಡ ಪಂಥೀಯರಲ್ಲಿ ಕೂಡ ವರ್ಣ-ಜಾತಿ ವ್ಯವಸ್ಥೆಯ ಮೂಲಚೂಲಗಳನ್ನು, ಅದರ ವಿವಿಧ ಆಯಾಮಗಳನ್ನು ಅಧ್ಯಯನ ಮಾಡಿದ ಸಾಮಾಜಿಕ ಚಳುವಳಿಗಾರರಲ್ಲಿ ಅಂಬೇಡ್ಕರ್ ರವರು, ಇ.ಎಂ. ಎಸ್ ನಂಬೂದರಿಪಾದ್, ಬಿ. ಟಿ. ರಣದಿವೆ, ಎಸ್.ಜಿ.ಸರ್ದೇಸಾಯಿ, ಪ್ರಕಾಶ್ ಕಾರತ್ ಮತ್ತು ಸೀತಾರಾಮ್ ಯೆಚೂರಿ ಮೊದಲಾದ ಕಮ್ಯೂನಿಸ್ಟರು ಮತ್ತು ಸಮಾಜವಾದಿಗಳಲ್ಲಿ ರಾಮ ಮನೋಹರ ಲೋಹಿಯ ಪ್ರಮುಖರು. ಹಾಗೆಯೇ ಮಾರ್ಕ್ಸ್‌ವಾದೀ ಇತಿಹಾಸಕಾರರಾದ ಡಿ.ಡಿ.ಕೊಸಾಂಬಿ, ಆರ್ ಎಸ್.ಶರ್ಮಾ,ರೊಮಿಲಾ ಥಾಪರ್, ಇರ್ಫಾನ್ ಹಬೀಬ್, ಸುವಿರಾ ಜೈಸ್ವಾಲ್ ತತ್ವಶಸ್ತ್ರಜ್ಞರಾದ ದೇಬೀಪ್ರಸಾದ್ ಚಟ್ಟೋಪಧ್ಯಾಯ ಜಾತಿ ವ್ಯವಸ್ಥೆಯ ಅಧ್ಯಯನಕ್ಕೆ ಉತ್ತಮ ಕೊಡುಗೆಗಳನ್ನು ನೀಡಿದ್ದಾರೆ ಎಂದು ಜಾತಿ ವ್ಯವಸ್ಥೆಯ ಅಧ್ಯಯನಕಾರರೆಲ್ಲರಿಂದ ಪ್ರಶಂಸೆಗೆ ಒಳಗಾಗಿದ್ದಾರೆ. ಅಂಬೇಡ್ಕರ್ ವಾದಿಗಳಲ್ಲಿ ಜಾತಿ ವ್ಯವಸ್ಥೆಯ ಆರ್ಥಿಕ ಆಯಾಮಗಳ ಬಗ್ಗೆ ಆಳವಾದ ಅಧ್ಯಯನಗಳನ್ನು ಮಾಡುತ್ತಿರುವ ಸುಖದೇವ್ ಥೋರಾತ್ ಬಹಳ ಪ್ರಮುಖರು.

ಅಂಬೇಡ್ಕರ್ ರವರ ಅಧ್ಯಯನ ಅವರಿನ್ನೂ ಸ್ನಾತಕೋತ್ತರ ವಿದ್ಯಾರ್ಥಿಯಾಗಿದ್ದಾಗಲೇ ಅರಂಭವಾಗಿ ಜೀವನದುದ್ದಕ್ಕೂ ಮುಂದುವರೆಯಿತು. ಜಾತಿ ಎಂದರೆ ಶ್ರಮದ ವಿಭಜನೆಯಲ್ಲ, ಶ್ರಮಜೀವಿಗಳ ವಿಭಜನೆ, ಮೇಲು ಕೀಳಿನ ಶ್ರೇಣೀಕೃತ ವಿಭಜನೆ, ಸ್ಥಗಿತಗೊಂಡ ವೃತ್ತಿಗಳ ಮತ್ತು ವ್ಯಕ್ತಿಗೆ ಆಯ್ಕೆಯ ಸ್ವಾತಂತ್ರ್ಯವೇ ಇಲ್ಲದ ವ್ಯವಸ್ಥೆ, ಕರ್ಮ ಸಿದ್ಧಾಂತದ ಆಧರಿಸಿ, ಧರ್ಮ, ಶಾಸ್ತ್ರಗಳ ಕಟ್ಟಲೆಗಳು ಮತ್ತು ಆಚರಣೆಗಳ ಮೂಲಕ ಇದು ಜನಮಾನಸದಲ್ಲಿ ಅಲುಗಾಡಿಸಲಾಗದಂತಹ ಸ್ಥಾನ ಪಡೆದಿದೆ, ಜಾತಿಯೊಳಗಡೆಯೇ ವಿವಾಹ ಎಂಬುದು ಜಾತಿ ವ್ಯವಸ್ಥೆಯ ಮೂಲ ಬೀಜವಾಗಿದೆ ಎಂದು ಅಂಬೇಡ್ಕರ್ ರವರು ಮಾಡಿದ ಜಾತಿ ವ್ಯವಸ್ಥೆಯ ಸ್ವರೂಪದ ವಿಶ್ಲೇಷಣೆಯನ್ನು ಕಮ್ಯೂನಿಸ್ಟರು ಪೂರ್ಣ ಒಪ್ಪುತ್ತಾರೆ. ಇ.ಎಮ್.ಎಸ್ ನಂಬೂದರಿಪಾದ್ ರಂತಹ ರಾಜಕೀಯ ನಾಯಕರ ಬರಹಗಳಲ್ಲಿ ಮತ್ತು ಮೇಲೆ ಹೇಳಿದ ಇತಿಹಾಸಕಾರರಲ್ಲಿ ಈ ಬಗ್ಗೆ ಸಮಾನ ಚಿಂತನೆಯನ್ನು ಕಾಣಬಹುದು.

ಸಾಮ್ಯತೆ ಮತ್ತು ಕೆಲವು ಭಿನ್ನಾಭಿಪ್ರಾಯಗಳು

ಒಂದು ಮುಖ್ಯ ವಿಷಯದಲ್ಲಿ ಕಮ್ಯೂನಿಸ್ಟರ ವಿಶ್ಲೇಷಣೆಯ ಬಗ್ಗೆ ತಮ್ಮ 'ಜಾತಿ ವಿನಾಶ' ಎಂಬ ಕೃತಿಯಲ್ಲಿ ಅಂಬೇಡ್ಕರ್ ರವರು ಆಕ್ಷೇಪಣೆ ಎತ್ತಿದ್ದಾ-ರೆ. ಅದೆಂದರೆ ಕಮ್ಯೂನಿಸ್ಟರು ಕೇವಲ ಆಸ್ತಿಯೇ ಸಾಮಾಜಿಕ ಅಧಿಕಾರದ ಮೂಲವೆನ್ನುತ್ತಾರೆ ಎಂದು. ಹಾಗೆಂದು ಅವರು ಆಸ್ತಿಯ ಪಾತ್ರವನ್ನೇನೂ ಅಲ್ಲಗಳೆಯುವುದಿಲ್ಲ. ಧರ್ಮ, ಸಾಮಾಜಿಕ ಸ್ಥಾನಮಾನ, ಆಸ್ತಿ ಈ ಮೂರೂ ಸಾಮಾಜಿಕ ಅಧಿಕಾರದ ಮೂಲ ಎನ್ನುತ್ತಾರೆ. ಚರಿತ್ರೆಯನ್ನು ಆರ್ಥಿಕ ದೃಷ್ಟಿಯಿಂದ ವಿವರಿಸುವ ಕಮ್ಯೂನಿಸ್ಟರ ಕ್ರಮವನ್ನು ಅವರು ಅಕ್ಷೇಪಿಸಿದರೂ ಕೂಡ ಜಾತಿ ಕೇವಲ ಸಾಮಾಜಿಕ ವ್ಯವಸ್ಥೆ ಮಾತ್ರ ಎಂದೇನೂ ಹಠ ಹಿಡಿಯುವುದಿಲ್ಲ. ಅದಕ್ಕೆ ಇರುವ ಆರ್ಥಿಕ ಆಯಾಮವನ್ನು ಗುರುತಿಸುತ್ತಾರೆ. ಅದಕ್ಕೆ ಹಲವು ಉದಾಹರಣೆಗಳನ್ನು ನೀಡಬಹುದು.

"ಅಸ್ಪೃಶ್ಯತೆಯೆಂಬುದು ಕೇವಲ ಒಂದು ಧಾರ್ಮಿಕ ವ್ಯವಸ್ಥೆ ಮಾತ್ರ ಎಂದು ಭಾವಿಸುವುದೊಂದು ತಪ್ಪು ತಿಳುವಳಿಕೆ. ಅದು ಗುಲಾಮಗಿರಿಗಿಂತ ಕೆಟ್ಟದಾದ ಆರ್ಥಿಕ ವ್ಯವಸ್ಥೆ. ಒಂದು ಆರ್ಥಿಕ ವ್ಯವಸ್ಥೆಯಾಗಿ ಅಸ್ಪೃಶ್ಯತೆ ಯಾವುದೇ ಹೊಣೆಗಾರಿಕೆಯಿಲ್ಲದ ಶೋಷಣೆ. ಅದೊಂದು ಮಿತಿಯಿಲ್ಲದ ಶೊಷಣೆ ಮಾತ್ರವಲ್ಲ ಅದು ಒಂದು ಅನಿಯಂತ್ರಿತ ಶೋಷಣೆಯೂ ಹೌದು."

"ಹಿಂದೂಗಳು ಎಲ್ಲದರ ಮಾಲೀಕತ್ವ ಹೊಂದಿದ್ದಾರೆ. ಅವರು ಈ ದೇಶದ ಭೂಮಿಯ ಮಾಲೀಕರು. ಅವರು ವಾಣಿಜ್ಯವನ್ನೆಲ್ಲ ನಿಯಂತ್ರಣ ಮಾಡುತ್ತಾರೆ ಮತ್ತು ಅವರು ಪ್ರಭುತ್ವದ ಮಾಲೀಕರೂ ಆಗಿದ್ದಾರೆ. ಆದಾಯದ ಮತ್ತು ಲಾಭದ ಪ್ರತಿ ಮೂಲದ ಮೇಲೆಯೂ ನಿಯಂತ್ರಣ ಹೊಂದಿದ್ದಾರೆ."

ಈ ವಾಖ್ಯೆ ಸಾಮಾನ್ಯವಾಗಿ ಕಮ್ಯೂನಿಸ್ಟರು ವರ್ಗ ವಿಶ್ಲೇಷಣೆಯ ಆಧಾರದ ಮೇಲೆ ಭಾರತದ ಜಾತಿ ವ್ಯವಸ್ಥೆಗೆ ನೀಡುವ ವಿವರಣೆಯಂತೆಯೆ ಇದೆ. ಎರಡೂ ವಿಚಾರಗಳ ನಡುವಿನ ಸಾಮ್ಯತೆಯನ್ನು ಎತ್ತಿ ತೋರಿಸುತ್ತದೆ. ಈ ರೀತಿಯ ವಿವರಣೆಯನ್ನು ಈ ಎರಡೂ ವಿಚಾರವಾಹಿನಿಗಳ ಹೊರತಾಗಿ ಬೇರಾರೂ ನೀಡಿಲ್ಲವೆಂಬುದು ಗಮನಾರ್ಹ.

ಇನ್ನೂ ಒಂದು ಉದಾಹರಣೆ ನೀಡುವುದಾದರೆ ಅಂಬೇಡ್ಕರ್ ರವರು

"ಬ್ರಾಹ್ಮಣನು ಕ್ಷತ್ರಿಯನನ್ನು ಸ್ತುತಿಸಿ ಖುಷಿಪಡಿಸಿದನು. ಇಬ್ಬರೂ ಕೂಡಿ ವಿಶಿಷ್ಟ ಹುನ್ನಾರದ ಮೂಲಕ ವೈಶ್ಯನನ್ನು ತಮ್ಮ ಅಧೀನತೆಯ ತೆಕ್ಕೆಗೆ ತೆಗೆದುಕೊಂಡರು. ನಂತರ ಎಲ್ಲರೂ ಕೂಡಿ ಶೂದ್ರನ ತಲೆಯ ಮೇಲೆ ಕಾಲಿಡಲು ತೀರ್ಮಾನಿಸಿದರು. ಶೂದ್ರನಿಗೆ ಧನ ಕನಕ ಸಂಪಾದಿಸುವ ಅವಕಾಶದಿಂದ ದೂರವಿಟ್ಟರು.

ಅವನ್ನು ಜ್ಞಾನಾರ್ಜನೆಯ ಅವಕಾಶಗಳಿಂದಲೂ ವಂಚಿತನನ್ನಾಗಿ ಮಾಡಿದರು . ಅವನ ಕೈಗೆ ಶಸ್ತ್ರಾಸ್ತ್ರಗಳು ಸಿಕ್ಕದಂತೆ ಮಾಡಿದರು"

ಜಾತಿ ವ್ಯವಸ್ಥೆಯ ಬಗ್ಗೆ ಕಮ್ಯೂನಿಸ್ಟ್ ಪಕ್ಷದ ಮುಖ್ಯ ನಾಯಕರಲ್ಲೊಬ್ಬರಾದ ಇ.ಎಂ.ಎಸ್ ಸ್ವಾತಂತ್ರ್ಯ ಪೂರ್ವದಿಂದಲೂ ಜಾತಿ ವ್ಯವಸ್ಥೆಯ ಬಗ್ಗೆ ವಿಪುಲವಾಗಿ ವಿಶ್ಲೇಷಣೆ ಮಾಡಿದ್ದಾರೆ. ಮೂರು ದ್ವಿಜ ವರ್ಣಗಳು ಆಳುವ ವರ್ಗವಾಗಿ ಶೂದ್ರರನ್ನು ಶೋಷಿಸುವುದೇ ಭಾರತದ ವರ್ಣ-ಜಾತಿ ವ್ಯವಸ್ಥೆ ಎಂದು ಇ.ಎಂ.ಎಸ್ ವಿವರಿಸುತ್ತಾರೆ. ಋಗ್ವೇದ ಕಾಲದಿಂದ ಅರಂಭವಾಗಿ ಬ್ರಾಹ್ಮಣಗಳ ಕಾಲದ ವೇಳೆಗೆ ಸ್ಥಾಪನೆಗೊಂಡ ವರ್ಣ ವ್ಯವಸ್ಥೆಯ ಪ್ರಕ್ರಿಯೆಯನ್ನೂ ನಾನೂ ಕೂಡ 'ಅಗ್ನಿ' ಪತ್ರಿಕೆ-ಯ "ಚೋಮನ ದುಡಿ" ಅಂಕಣದಲ್ಲಿ ವಿವರವಾಗಿ ವಿಶ್ಲೇಷಿಸಿದ್ದೇನೆ. ಇನ್ನು ಇ.ಎಂ.ಎಸ್ ಅವರ ಒಂದು ಬರಹವನ್ನು ನೋಡೋಣ:

"ಗ್ರೀಕ್, ರೋಮ್, ಮತ್ತು ಕೆಲವು ಪಶ್ಚಿಮ ಘಷ್ಯಾ ದೇಶಗಳಲ್ಲಿ ಬೆಳೆದು ಬಂದ ಗುಲಾಮಿ ಪದ್ಧತಿಗೂ ಭಾರತದಲ್ಲಿ ಉಗಮವಾದ ವರ್ಣ-ಜಾತಿ ವ್ಯವಸ್ಥೆಗೂ ಮೂಲಭೂತ ವತ್ಯಾಸವಿಲ್ಲ. ಒಂದು ವ್ಯತ್ಯಾಸವೆಂದರೆ ಗುಲಾಮೀ ಪದ್ದತಿಯಲ್ಲಿ ಬಹು ಸಂಖ್ಯೆಯ ಜನರನ್ನು ಗುಲಾಮರೆಂದು ಘೋಷಿಸಿ ಬಹಿರಂಗವಾದ ನೇರವಾದ ದಮನದ ಮೂಲಕ ಶೊಷಣೆ ಮಡಲಾಗುತ್ತಿತ್ತು. ಆದರೆ ಭಾರತದಲ್ಲಿ ಇದನ್ನೇ ಜಾತಿಯ ಹೆಸರಿನಲ್ಲಿ ಮಾಡಲಾಗುತ್ತಿತ್ತು.

ವರ್ಣ-ಜಾತಿ ವ್ಯವಸ್ಥೆ ಅಸ್ತಿತ್ವಕ್ಕೆ ಬಂದಾಗ ಅದನ್ನು ನಿರಂತರವಾಗಿ ಮುಂದುವರೆಸಲಿಕ್ಕೆ ಹಾಗೂ ಸಮರ್ಥಿಸಿಕೊಳ್ಳಲಿಕ್ಕೆ ಒಂದು ವಿಶಿಷ್ಟ ಧಾರ್ಮಿಕ ಮತ್ತು ಸೈದ್ಧಾಂತಿಕ-ತತ್ವಶಾಸ್ತ್ರೀಯ ಚೌಕಟ್ಟನ್ನು ಈ ಶೋಷಣಾ ವ್ಯವಸ್ಥೆಯ ಸುತ್ತ ರೂಪಿಸಲಾಯಿತು. ಹಿಂದೂ ಧರ್ಮ, ಹಿಂದೂ ತತ್ವಶಾಸ್ತ್ರ ಮತ್ತು ಹಿಂದೂ ಸಂಸ್ಕೃತಿ ಎಂದರೆ ಇದೇ."

"ಎಲ್ಲಾ ಜಾತಿ-ಉಪಜಾತಿಗಳ ಜನರೂ ಜಾತಿ ವ್ಯವಸ್ಥೆಯು ಸ್ವತಃ ದೇವರೇ ಸೃಷ್ಟಿಸಿದ್ದೆಂದು ಮತ್ತು ಈ ಜನ್ಮದಲ್ಲಿ ಜಾತಿ ವ್ಯವಸ್ಥೆಗೆ ತಲೆಬಗ್ಗಿ ನಡೆದ-ರೆ ಮುಂದಿನ ಜನ್ಮದಲ್ಲಿ ಸುಖ ಸಂತೋಷಗಳು ಲಭಿಸುತ್ತವೆಂದು ನಂಬಿಸಲಾಯಿತು. "

ಜಾತಿ ವ್ಯವಸ್ಥೆಯ ಈ ವಿಶ್ಲೆಷಣೆಯ ಜೊತೆಗೆ ಮೇಲೆ ಉಲ್ಲೇಖಿಸಲಾಗಿರುವ ಅಂಬೇಡ್ಕರ್ ರವರ ಶೋಧವನ್ನೂ ತುಲನೆ ಮಾಡಿ ನೋಡಿ. ಎಷ್ಟೊಂದು ಸಾಮ್ಯತೆ ಇದೆ ಎಂಬುದು ತಂತಾನೆ ಕಾಣಬಹುದು.

1928ರಲ್ಲೇ ಜಾತಿ ವ್ಯವಸ್ಥೆ ವಿರುದ್ಧ ಹೋರಾಟಕ್ಕೆ ಕರೆ

ಇ.ಎಂ.ಎಸ್ ರವರಂತಹ ಕೆಲ ನಾಯಕರ ಬರಹಗಳಲ್ಲಿ ಮಾತ್ರವಲ್ಲ ಒಂದು ಪಕ್ಷವಾಗಿ ತನ್ನ ಸಮಿತಿಗಳಲ್ಲಿ ಚರ್ಚಿಸಿ ಇಡೀ ಪಕ್ಷ ಜಾರಿ ಮಾಡಬೇಕಾದ ತೀರ್ಮಾನವನ್ನಾಗಿ ಕೂಡ ಕಮ್ಯೂನಿಸ್ಟ್ ಪಕ್ಷ ಅಂಗೀಕರಿಸಿತು. ಇದು ಕಮ್ಯೂನಿಸ್ಟ್ ಚಳುವಳಿಯ ಒಂದು ವಿಶಿಷ್ಟ ಲಕ್ಷಣ ಎಂಬುದು ಬಹಳ ಜನರಿಗೆ ಗೊತ್ತಿರುವ ಸಂಗತಿ. ಕಮ್ಯೂನಿಸ್ಟ ಪಕ್ಷ ತನ್ನ ಹುಟ್ಟಿನ ಜೊತೆ ಜೊತೆಗೇ ಭಾರತದಲ್ಲಿ ಜಾತಿ ವ್ಯವಸ್ಥೆಯ ಅಸ್ತಿತ್ವವನ್ನೂ ಗಣನೆಗೆ ತೆಗೆದು-ಕೊಂಡಿತು. 1921 ರಲ್ಲಿಯೇ ಇದನ್ನು ಗುರುತಿಸಿತು. ಮುಂದೆ 1928 ರಲ್ಲಿ ಭಾರತದಲ್ಲಿ ಕಮ್ಯೂನಿಸ್ಟ್ ಪಕ್ಷ ತನ್ನ ಗುರಿ ಮತ್ತು ಕರ್ತವ್ಯಗಳನ್ನು ರೂಪಿಸಿದ ವೇದಿಕೆಯಲ್ಲಿ ಜನರೆಲ್ಲರ ಸಮಾನತೆಯನ್ನು ಸಾಧಿಸುವಲ್ಲಿ ಕಮ್ಯೂನಿಸ್ಟ್ ಪಕ್ಷ ಜಾತಿ ವ್ಯವಸ್ಥೆಯ ವಿರುದ್ಧದ ಹೋರಾಡಬೇಕು ಎಂದು ನಿರ್ಣಯಿಸಿದೆ:

"ಬ್ರಿಟಿಷರ ಆಡಳಿತ, ಭೂಮಾಲಕ ಪದ್ಧತಿ, ಪ್ರತಿಗಾಮೀ ಜಾತಿ ವ್ಯವಸ್ಥೆ, ಮತೀಯ ಮೋಸಗಳು ಮತ್ತು ಭೂತಕಾಲದ ಎಲ್ಲ ಗುಲಾಮಿ ಹಾಗೂ ರೈತ ಸುಲಿಗೆಯ ಪರಂಪರೆಗಳು ಭಾರತದ ಜನತೆಯ ಉಸಿರು ಕಟ್ಟಿಸುತ್ತಿವೆ ಮತ್ತು ಅವರ ವಿಮೋಚನೆಗೆ ಅಡ್ಡಗಲ್ಲುಗಳಾಗಿವೆ

ಇವುಗಳು 20 ನೆಯ ಶತಮಾನದಲ್ಲಿಯೂ ಭಾರತದಲ್ಲಿ ಬೇರೆಯವರನ್ನು ಭೇಟಿ ಮಾಡಲಾಗದ, ಎಲ್ಲರೂ ಉಪಯೋಗಿಸುವ ಭಾವಿಗಳಲ್ಲಿ ನೀರು ಕುಡಿಯಲಾಗದ, ಎಲ್ಲರೂ ಕಲಿಯುವ ಶಾಲೆಗಳಲ್ಲಿ ಕಲಿಯಲಾಗದ ಪರಿಸ್ಥಿತಿಯನ್ನು ತಂದೊಡ್ಡಿದೆ.

ಭಾರತ ಕಮ್ಯೂನಿಸ್ಟ್ ಪಕ್ಷವು ಗುಲಾಮಗಿರಿ, ಜಾತಿ ವ್ಯವಸ್ಥೆ ಮತ್ತು ಜಾತಿ ದ್ಧ ಅಸಮಾನತೆಯ ಎಲ್ಲ ರೂಪಗಳ (ಸಾಮಾಜಿಕ, ಸಾಂಸ್ಕೃತಿಕ ಇತ್ಯಾದಿ) ವಿರುದ್ಧ ಹೋರಾಡುತ್ತದೆ. ಭಾರತ ಕಮ್ಯೂನಿಸ್ಟ ಪಕ್ಷವು ದೇಶದ ಎಲ್ಲ ಪರಯ್ಯಾ ದುಡಿಯುವ ಜನರ ಎಲ್ಲ ಶ್ರಮಿಕರ ಸಂಪೂರ್ಣ ಮತ್ತು ಶಾಶ್ವತ ಸಮಾನತೆಗಾಗಿ ಹೋರಾಡುತ್ತದೆ."

1990ರ ನಂತರ ಮಾರುಕಟ್ಟೆ ನಿರ್ದೇಶಿತ ಅಭಿವೃದ್ಧಿ ಜಾರಿಗೆ ಬಂದಿದೆ. ಮಾರುಕಟ್ಟೆ ಅಭಿವೃದ್ಧಿಯಿಂದ ಸಮೃದ್ಧಿ ಮತ್ತು ಕೊರತೆಯ ಎರಡು ಲೋಕಗಳು ಏಕಕಾಲದಲ್ಲಿ ಸೃಷ್ಟಿಯಾಗಿವೆ. ಇಂತಹ ಎರಡು ವಿಭಿನ್ನ ಲೋಕಗಳು ಏಕೆ ಸೃಷ್ಟಿಯಾಗಿವೆ? ಮಾರುಕಟ್ಟೆಯಲ್ಲಿ ಸ್ವಾತಂತ್ರ್ಯವಿದೆ, ಸಮಾನತೆಯಿದೆ ಎನ್ನುವ ಕಲ್ಪನೆಗಳು ವಾಸ್ತವವಲ್ಲ. ಆದುದರಿಂದ ಮಾರುಕಟ್ಟೆ ನಿರ್ದೇಶಿತ ಅಭಿವೃದ್ಧಿ ಜಾರಿಗೆ ಬಂದ ಕೂಡಲೇ ಬಡತನ, ಅಸಮಾನತೆಗಳು ನಿವಾರಣೆಯಾಗುವುದಿಲ್ಲ.

ಮಾರುಕಟ್ಟೆ ತತ್ತ್ವಗಳು ಎಲ್ಲಿ ಅನ್ವಯವಾಗಬೇಕು ಮತ್ತು ಎಲ್ಲಿ ಅನ್ವಯವಾಗಬಾರದೆಂದು ತೀರ್ಮಾನಿಸುವುದು ನಮ್ಮ ಸರಕಾರಗಳು. ಸರಕಾರ ಮಾರುಕಟ್ಟೆಯನ್ನು ಬಡವರಿಗೆ ಅನುಕೂಲಕರವಾಗಿ ಕಟ್ಟಿಕೊಳ್ಳಬಹುದು ಎನ್ನುವ ಮುಗ್ಧ ತಿಳುವಳಿಕೆ ಬಹುತೇಕರ ಪ್ರಜ್ಞೆಯ ಭಾಗವಾಗಿದೆ. ಮಾರುಕಟ್ಟೆ ತತ್ತ್ವವನ್ನು ಅನುಕೂಲಸ್ಥರಿಗೆ ಅನ್ವಯಿಸಿ ತಳಸ್ತರದ ಜನರ ನೆರವಿಗೆ ಸರಕಾರ ನಿಲ್ಲುತ್ತಿದ್ದರೆ ಮಾರುಕಟ್ಟೆ ಸೃಷ್ಟಿಸುವ ಅವಾಂತರಗಳನ್ನು ಸಹಿಸುವ ಶಕ್ತಿ ತಳಸ್ತರದ ಜನರಿಗೆ ಬರುತ್ತಿತ್ತು. ಆದರೆ ಆ ರೀತಿ ಮಾಡುವ ಬದಲು ಮಾರುಕಟ್ಟೆಯನ್ನು ಮೇಲ್ವರ್ಗ ಜನರಿಗೆ ಅನುಕೂಲವಾಗುವ ಹಾಗೆ ಮತ್ತು ಬಡಜನರಿಗೆ ಅನಾನುಕೂಲ ಆಗುವ ಹಾಗೆ ಕಟ್ಟಿಕೊಳ್ಳಲಾಗಿದೆ. ಇದರಿಂದ ಬಡವರ ಬದುಕು ಅಸಹನೀಯವಾಗಿದೆ. ಈ ಸಮಸ್ಯೆಗೆ ಪರಿಹಾರ ಮಾರುಕಟ್ಟೆಯಲ್ಲ; ಮಾರುಕಟ್ಟೆಯನ್ನು ರೂಪಿಸುವ ಪ್ರಜಾಪ್ರಭುತ್ವದಲ್ಲಿದೆ. ಮುಕ್ತ ಪ್ರಜಾಪ್ರಭುತ್ವ ಆಚರಣೆಗೆ ಬಂದರೆ ಮುಕ್ತ ಮಾರುಕಟ್ಟೆ ಕಾರ್ಯರೂಪಕ್ಕೆ ಬರಬಹುದು.

ಮಾರುಕಟ್ಟೆ ಮತ್ತು ಅಭಿವೃದ್ಧಿ

– ಪ್ರೊ. ಎಂ.ಚಂದ್ರ ಪೂಜಾರಿ

ಸ್ವಾತಂತ್ರ್ಯ ನಂತರ ಅನುಸರಿಸಿದ ಅಭಿವೃದ್ಧಿ ಮಾದರಿಯಿಂದ ಬಡತನ, ಅಸಮಾನತೆಗಳು ನಿವಾರಣೆಯಾಗಿಲ್ಲವೆಂದು ತೊಂಬತ್ತರ ನಂತರ ಮಾರುಕಟ್ಟೆ ನಿರ್ದೇಶಿತ ಅಭಿವೃದ್ಧಿ ಜಾರಿಗೆ ಬಂದಿದೆ. ಮಾರುಕಟ್ಟೆ ನಿರ್ದೇಶಿತ ಅಭಿವೃದ್ಧಿ ಜಾರಿಗೆ ಬಂದ ನಂತರ ಸರಕುಸೇವೆಗಳ ಉತ್ಪಾದನೆ ಹೆಚ್ಚಿದೆ. ಸಾರಿಗೆ ಸಂಪರ್ಕಗಳು ವೃದ್ಧಿಯಾಗಿವೆ. ಮೆಡಿಕಲ್ ಎಂಜೀನಿಯರ್ ಕಾಲೇಜುಗಳ ಸಂಖ್ಯೆ ಹೆಚ್ಚಾಗಿದೆ. ಟಿವಿ ಚ್ಯಾನಲ್‌ಗಳ ಸಂಖ್ಯೆ ಹೆಚ್ಚಾಗಿದೆ. ಎಲ್ಲರ ಕೈಗೂ ಮೊಬೈಲ್‌ಗಳು ಬಂದಿವೆ. ಮಾಲ್‌ಗಳು ಮಲ್ಟಿಪ್ಲೆಕ್ಸ್‌ಗಳು ಜಿಲ್ಲಾ ಕೇಂದ್ರಗಳಲ್ಲೂ ತಲೆ ಎತ್ತಿವೆ. ಸುಮಾರು 30–40 ಕೋಟಿಯಷ್ಟು ಜನರು ಮಧ್ಯಮ ವರ್ಗದ ಜೀವನ ಅನುಭವಿಸುತ್ತಿದ್ದಾರೆ. ಐವತ್ತು ಕುಟುಂಬಗಳ ಸ್ವಾಧೀನ ದೇಶದ ಒಟ್ಟು ಉತ್ಪನ್ನದ ಮೂರನೇ ಒಂದರಷ್ಟು ಸಂಪತ್ತು ಸಂಗ್ರಹವಾಗಿದೆ. ಅಂತರಾಷ್ಟ್ರೀಯ ಮಟ್ಟದಲ್ಲಿ ಭಾರತ ಎಂದರೆ ಬಡವರೇ ತುಂಬಿರುವ ದೇಶ ಎನ್ನುವ ಚಿತ್ರಣವನ್ನು ಮಸುಕುಗೊಳಿಸುವ ಪ್ರಯತ್ನಗಳು ನಡೆದಿವೆ. ಹೀಗೆ ತೊಂಬತ್ತರ ನಂತರ ನಮ್ಮಲ್ಲೊಂದು ಸಮೃದ್ಧಿಯ ಲೋಕ ಸೃಷ್ಟಿಯಾಗಿದೆ.

ಇದೇ ಸಂದರ್ಭದಲ್ಲಿ ಇದಕ್ಕೆ ಸಂಪೂರ್ಣವಾಗಿ ವಿರುದ್ಧವಾದ ಮತ್ತೊಂದು ಲೋಕ ಕೂಡ ಸೃಷ್ಟಿಯಾಗಿದೆ. ಈ ಲೋಕದಲ್ಲಿ ಸರಿ ಸುಮಾರು 230 ಕೋಟಿ ಜನರು ಮೂರು ಹೊತ್ತಿನ ಊಟಕ್ಕೆ ಪರದಾಡುತ್ತಿದ್ದಾರೆ. ದೇಶ, ರಾಜ್ಯದ ಸಂಪತ್ತು ಹೆಚ್ಚಾದಂತೆ ಬಡವರ ಸಂಖ್ಯೆಯೂ ಹೆಚ್ಚಾಗುತ್ತಿದೆ. 1990ರ ನಂತರ ರಾಜ್ಯ ಮತ್ತು ಕೇಂದ್ರ ಸರಕಾರಗಳು ತಮ್ಮ ಶಿಕ್ಷಣ ನೀತಿಯನ್ನು ಸಂಪೂರ್ಣವಾಗಿ ಬದಲಾಯಿಸಿಕೊಂಡಿವೆ. ತಳಹಂತದ ಶಿಕ್ಷಣ ನೀಡುವುದು ಸರಕಾರದ ಜವಾಬ್ದಾರಿಯಾದರೆ ಉನ್ನತ ಶಿಕ್ಷಣದ ಜವಾಬ್ದಾರಿಯನ್ನು ಖಾಸಗಿಯವರಿಗೆ ಒಪ್ಪಿಸಲಾಗಿದೆ. ಇದರಿಂದಾಗಿ ಉನ್ನತ ಶಿಕ್ಷಣ ಪಡೆದವರ ಸಂಖ್ಯೆ ಇನ್ನೂ ಕೂಡ ಶೇಕಡ 25 ದಾಟಿಲ್ಲ. ಇನ್ನು ಆರೋಗ್ಯ ಕ್ಷೇತ್ರದ ಸ್ಥಿತಿಗತಿಯನ್ನು ಹೇಳುವುದೇ ಬೇಡ. ವಿಶ್ವಬ್ಯಾಂಕ್ ವರದಿ ಪ್ರಕಾರ ಸಬ್ ಸಹರಾ ಆಫ್ರಿಕಾ ದೇಶಗಳಲ್ಲಿ ಕಡಿಮೆ ತೂಕದ ಮಕ್ಕಳ ಪ್ರಮಾಣ ಶೇಕಡಾ 24ರಷ್ಟಿದ್ದರೆ ಭಾರತದಲ್ಲಿ ಕಡಿಮೆ ತೂಕದ ಮಕ್ಕಳ ಪ್ರಮಾಣ ಶೇಕಡಾ 47ರಷ್ಟಿದೆ. ಭಾರತದ ಶೇಕಡಾ 72ರಷ್ಟು ಮಕ್ಕಳು ರಕ್ತಹೀನತೆಯಿಂದ ಬಳಲುತ್ತಿದ್ದಾರೆ. ನಮ್ಮ ದೇಶದ ಸರಿ ಅರ್ಧದಷ್ಟು ಮಕ್ಕಳು ಮತ್ತು ಹೆಚ್ಚು ಕಡಿಮೆ ಅಷ್ಟೇ ಪ್ರಮಾಣದ ವಯಸ್ಕರು ಅಪೌಷ್ಟಿಕತೆಯಿಂದ ಬಳಲುತ್ತಿದ್ದಾರೆ. ಹೀಗೆ ಮಾರುಕಟ್ಟೆ ಅಭಿವೃದ್ಧಿಯಿಂದ ಸಮೃದ್ಧಿ ಮತ್ತು ಕೊರತೆಯ ಎರಡು ಲೋಕಗಳು ಏಕಕಾಲದಲ್ಲಿ ಸೃಷ್ಟಿಯಾಗಿವೆ. ಇಂತಹ ಎರಡು ವಿಭಿನ್ನ ಲೋಕಗಳು ಏಕೆ ಸೃಷ್ಟಿಯಾಗಿವೆಯೆಂದು ಅರ್ಥವಾಗಬೇಕಾದರೆ ಮಾರುಕಟ್ಟೆಯ ಮೂಲತತ್ತ್ವಗಳು ಅರ್ಥವಾಗಬೇಕು.

ಮಾರುಕಟ್ಟೆಯಲ್ಲಿ ಸ್ವಾತಂತ್ರ್ಯ, ಸಮಾನತೆಯಿದೆಯೇ?

ಮಾರುಕಟ್ಟೆಯನ್ನು ಸ್ಥಳದಲ್ಲಿ ರೂಪದಲ್ಲಿ ಕಲ್ಪಿಸಿ ಕೊಂಡರೆ ಮನೆಯಿಂದ ದೂರದಲ್ಲಿ ಮಾರುಕಟ್ಟೆ ಇದೆಯೆನ್ನುವ ಚಿತ್ರಣ ಇದೆ. ಇದು ಕೇವಲ ದೂರದ ಪ್ರಶ್ನೆ ಮಾತ್ರವಲ್ಲ. ಮನೆ ಅಥವಾ ಸಮುದಾಯದಲ್ಲಿ ಪರಿಗಣಿಸುವ ಹಲವು ಸಂಗತಿಗಳು – ಲಿಂಗ, ವಯಸ್ಸು, ಜಾತಿ, ಧರ್ಮ ಇತ್ಯಾದಿಗಳು ಮಾರುಕಟ್ಟೆಯಲ್ಲಿ ಪರಿಗಣನೆಗೆ ಬರುವುದಿಲ್ಲ. ಇವುಗಳು ಮಾರುಕಟ್ಟೆಯಲ್ಲಿ ಮಹತ್ವ ಪಡೆಯದಿರುವುದರಿಂದ ಮಾರುಕಟ್ಟೆಯಲ್ಲಿ ಸಮಾನತೆ ಇದೆ ಎನ್ನುವ ಚಿತ್ರಣ ಇದೆ. ಇದೇ ರೀತಿಯಲ್ಲಿ ಮಾರುಕಟ್ಟೆಯಲ್ಲಿ ಇಷ್ಟ ಇದ್ದರೆ ಮಾರುವ, ಕಷ್ಟವಾದರೆ ಮಾರದಿರುವ ಸ್ವಾತಂತ್ರ್ಯ ಕೂಡ ಇದೆ ಎನ್ನುವ ಕಲ್ಪನೆ ಇದೆ. ಹೀಗೆ ಮಾರುಕಟ್ಟೆ ಚರಿತ್ರೆಯಿಂದ ಬಂದ ಹಲವು ಬಂಧನಗಳಿಂದ ನಿಮ್ಮನ್ನು ಮುಕ್ತಗೊಳಿಸಿ ಪರಿಪೂರ್ಣ ವ್ಯಕ್ತಿಯಾಗಿನ್ನಾಗಿಸುತ್ತದೆ. ಮಾರುಕಟ್ಟೆ ವ್ಯಕ್ತಿಗಳನ್ನು ಸಮುದಾಯದ ಪ್ರಭಾವದಿಂದ ಬೇರ್ಪಡಿಸಿದಂತೆ ಸರಕುಸೇವೆಗಳನ್ನು ಕೂಡ ಅವುಗಳ ಸ್ಥಾನಮಾನಗಳಿಂದ ಕಿತ್ತು ಕೇವಲ ಸರಕನ್ನಾಗಿಸುತ್ತದೆ. ದೇವರು, ಮನುಷ್ಯರು ಮತ್ತು ಪ್ರಾಣಿಗಳಿಗೆ ಬಳಸುವ ಪಾತ್ರಗಳ ನಡುವೆ ಮನೆಯಲ್ಲಿ ತುಂಬಾ ಅಂತರವಿದೆ. ಮನೆಯಲ್ಲಿ ವ್ಯಕ್ತಿಗಳಂತೆ ವಸ್ತುಗಳು ಕೂಡ ವಿವಿಧ ಸ್ಥಾನಮಾನಗಳನ್ನು ಹೊಂದಿವೆ. ಆದರೆ ಮಾರುಕಟ್ಟೆಯಲ್ಲಿ ಎಲ್ಲ ಪಾತ್ರಗಳು ಕೇವಲ ಸರಕುಗಳು ಮಾತ್ರ. ಸರಕುಸೇವೆಗಳ ಬೇಡಿಕೆ ಪೂರೈಕೆಗಳು ಅವುಗಳ ಮೌಲ್ಯ ತೀರ್ಮಾನಿಸುತ್ತವೆ. ಪಾತ್ರೆಗೆ ಅನ್ವಯವಾಗುವ ನಿಯಮ ಎಲ್ಲ ಸರಕುಸೇವೆಗಳಿಗೂ ಅನ್ವಯವಾಗುತ್ತದೆ. ಅಂದರೆ ಸಂಸ್ಕೃತಿಯಿಂದ ವಸ್ತುಗಳಿಗೆ ಬಂದ ಸ್ಥಾನಮಾನಗಳಿಂದ ಬೇರ್ಪಡಿಸಿ ವಸ್ತುಗಳನ್ನು ಪರಿಪೂರ್ಣ ಸರಕುಗಳನ್ನಾಗಿಸಿ ಅವುಗಳ ಮೌಲ್ಯ ತೀರ್ಮಾನವಾಗುತ್ತದೆ.

ಇಂತಹ ಮಾರುಕಟ್ಟೆ ತತ್ತ್ವಗಳು ಆರ್ಥಿಕ ಕ್ಷೇತ್ರದ ವ್ಯವಹಾರಗಳಿಗೆ ಸೀಮಿತವಾದರೆ ಸಮಸ್ಯೆ ಇಲ್ಲ. ಆದರೆ ಇದೇ ಮಾರುಕಟ್ಟೆ ತತ್ತ್ವಗಳು ಮನೆಗೆ, ಸಮುದಾಯಕ್ಕೆ ಬಂದರೆ ಸಮಸ್ಯೆ ಶುರುವಾಗುತ್ತದೆ. ಮಾರುಕಟ್ಟೆ ತತ್ತ್ವಗಳು ಮನೆಗೆ ಬಂದರೆ ತಂದೆ ತಾಯಿ, ಅಣ್ಣತಮ್ಮ, ಅಕ್ಕತಂಗಿ ಸಂಬಂಧಗಳು ಲಾಭ ನಷ್ಟದ ಸಂಬಂಧಗಳಾಗುತ್ತವೆ. ತಂದೆ ಮಕ್ಕಳಿಗೆ ಶಿಕ್ಷಣ ನೀಡುವಾಗ ಯಾರು ಮುಂದೆ ತನ್ನನ್ನು ಚೆನ್ನಾಗಿ ನೋಡಿಕೊಳ್ಳಬಹುದೆನ್ನುವ ಲೆಕ್ಕಚಾರ ಆದ್ಯತೆ ಪಡೆಯಬಹುದು. ಕೊಟ್ಟ ಹೆಣ್ಣು ಕುಲಕ್ಕೆ ಹೊರಗೆ ಎನ್ನುವ ನಂಬಿಕೆ ಬಲವಾಗಿರುವ ಸಮಾಜದಲ್ಲಿ ಹೆಣ್ಣು ಮಕ್ಕಳ ಶಿಕ್ಷಣದ ಮೇಲೆ ಪಾಲಕರು ಖರ್ಚು ಮಾಡಲು ಹಿಂದೆಮುಂದೆ ನೋಡಬಹುದು. ಮಾರುಕಟ್ಟೆಯಲ್ಲಿ ಅಪರಿಚಿತರು ಪರಿಚಿತರಾದಂತೆ ಮಾರುಕಟ್ಟೆ ತತ್ತ್ವ ಮನೆಗೆ, ಸಮುದಾಯಕ್ಕೆ ಬಂದರೆ ಪರಿಚಿತರು ಅಪರಿಚಿತರಾಗುತ್ತಾರೆ. ಮಾರುಕಟ್ಟೆ ತತ್ತ್ವ ಅನುಸಾರ ಶಿಕ್ಷಣ, ಆರೋಗ್ಯ ಕ್ಷೇತ್ರಗಳು ನಡೆದಾಗ ಶಿಕ್ಷಣ ಸಂಸ್ಥೆಗಳು ಸ್ಕಿಲ್ ಉತ್ಪಾದಿಸಿ ಪೂರೈಸುವ ಫ್ಯಾಕ್ಟರಿಗಳಾಗುತ್ತವೆ, ಆಸ್ಪತ್ರೆಗಳು ಹೆಲ್ತ್ ಫ್ಯಾಕ್ಟರಿಗಳಾಗುತ್ತವೆ. ರೋಗಿಯ ಅಗತ್ಯಗಳು ಇಲ್ಲಿ ಲೆಕ್ಕಕ್ಕಿಲ್ಲ. ತಕ್ಷಣ ಆಪರೇಶನ್ ಮಾಡದಿದ್ದರೆ ಸತ್ತೇ ಹೋಗಬಹುದಾದ ರೋಗಿಗಳು ಕಟ್ಟಬೇಕಾದ ಫೀಸು ಕಟ್ಟದಿದ್ದರೆ ಆಪರೇಶನ್ ನಡೆಯುವುದಿಲ್ಲ.

ಇದಕ್ಕೆ ವ್ಯತಿರಿಕ್ತವಾಗಿ ಕೇಳಿದಷ್ಟು ಫೀಸು ಕೊಡಲು ರೆಡಿ ಇರುವವರನ್ನು ಯಾವುದೇ ರೋಗವಿಲ್ಲದಿದ್ದರೂ ಒಳರೋಗಿಗಳಾಗಿ ಸೇರಿಸಿಕೊಂಡು ಪಂಚತಾರಾ ಸೌಲಭ್ಯ ನೀಡಲು ಆಸ್ಪತ್ರೆಗಳು ರೆಡಿ ಇರುತ್ತವೆ. ಮಾರುಕಟ್ಟೆ ನಿಯಮ ಪ್ರಕಾರ ಆರೋಗ್ಯ ಕ್ಷೇತ್ರ ನಡೆದರೆ ಮೇಲಿನ ಅವಾಂತರಗಳನ್ನು ದಿನಾ ನೋಡಬೇಕು ಮತ್ತು 1990ರ ನಂತರ ನೋಡುತ್ತಿದ್ದೇವೆ ಕೂಡ. ಇಲ್ಲಿ ಮನುಷ್ಯತ್ವ, ಸೇವೆ, ಅನುಕಂಪ ಇತ್ಯಾದಿ ಮೌಲ್ಯಗಳಿಗೆ ಮೂರು ಕಾಸಿನ ಬೆಲೆ ಇರುವುದಿಲ್ಲ. ತೊಂಬತ್ತರ ನಂತರ ಮಾರುಕಟ್ಟೆ ತತ್ತ್ವಗಳು ವಸತಿ, ಕುಡಿಯುವ ನೀರು, ನೈರ್ಮಲ್ಯ ಇತ್ಯಾದಿ ಸಾಮಾಜಿಕ ಮೂಲಸೌಕರ್ಯಗಳ ಪೂರೈಕೆಯನ್ನು ನಿರ್ಧರಿಸುತ್ತಿವೆ. ಇವುಗಳಿಗೆ ನಿಗದಿಯಾದ ಮಾರುಕಟ್ಟೆ ಬೆಲೆ ನೀಡಲು ಶಕ್ತಿ ಇಲ್ಲದವರು ಈ ಎಲ್ಲ ಸಾಮಾಜಿಕ ಮೂಲಸೌಕರ್ಯಗಳಿಂದ ವಂಚಿತರಾಗುತ್ತಾರೆ. ಆರೋಗ್ಯ, ಶಿಕ್ಷಣ, ವಸತಿ, ಕುಡಿಯುವ ನೀರು, ನೈರ್ಮಲ್ಯ ಇತ್ಯಾದಿ ಮೂಲಸೌಕರ್ಯಗಳಿಂದ ವಂಚಿತರಾದವರು ದುಡಿದು ಗಳಿಸುವ ಶಕ್ತಿಯಿಂದಲೇ ವಂಚಿತರಾಗುತ್ತಾರೆ.

ಮಾರುಕಟ್ಟೆ ಶಕ್ತಿ ಸಮಾನವಾಗಿಲ್ಲ

ಮೇಲೆ ಚರ್ಚಿಸಿದ ವಿಚಾರಗಳು ಮಾರುಕಟ್ಟೆಯನ್ನು ನಕರಾತ್ಮಕವಾಗಿ ಬಿಂಬಿಸುತ್ತಿವೆ. ಇದು ಮಾರುಕಟ್ಟೆಯ ಸಮಸ್ಯೆಯಲ್ಲ. ಮಾರುಕಟ್ಟೆ ಆಚರಣೆಗೆ ಬರುವ ಪರಿಸರ ಮತ್ತು ಮಾರುಕಟ್ಟೆಯನ್ನು ನಾವು ಕಟ್ಟಿಕೊಳ್ಳುವ ವಿಧಾನದ ಸಮಸ್ಯೆ ಇವು. ಭೂಮಿ, ಬಂಡವಾಳ, ಉತ್ತಮ ಶಿಕ್ಷಣವುಳ್ಳವರ ಮಾರುವ ಮತ್ತು ಖರೀದಿಸುವ ಶಕ್ತಿಗೂ ಈ ಮೂರರಲ್ಲಿ ಒಂದೂ ಇಲ್ಲದವರ ಮಾರುವ ಮತ್ತು ಖರೀದಿಸುವ ಶಕ್ತಿಗೂ ಭೂಮಿ ಆಕಾಶದ ಅಂತರವಿದೆ. ನಮ್ಮ ಸಮಾಜದಲ್ಲಿ ಭೂಮಿ, ಬಂಡವಾಳ, ಉತ್ತಮ ಶಿಕ್ಷಣಗಳು ಕೆಲವರಲ್ಲೇ ಕ್ರೋಢೀಕರಣಗೊಂಡಿವೆ. ಸಮಾಜದ ಬಹುತೇಕರು ಮೇಲಿನ ಸಂಪನ್ಮೂಲಗಳಿಂದ ವಂಚಿತರಾಗಿದ್ದಾರೆ. ಇಂತವರು ತಮ್ಮ ಮೂರು ಹೊತ್ತಿನ ಊಟಕ್ಕೆ ತಮ್ಮ ಶ್ರಮ ಮಾರಿ ಬದುಕುವುದು ಬಿಟ್ಟರೆ ಬೇರೆ ದಾರಿಯೇ ಇಲ್ಲ. ಈ ಬಗೆಯ ಶ್ರೇಣೀಕೃತ ಸಮಾಜದಲ್ಲಿ ಮಾರುಕಟ್ಟೆ ಮಾರುವ ಖರೀದಿಸುವ ಸ್ವಾತಂತ್ರ್ಯ ನೀಡುತ್ತಿದೆ ಎನ್ನುವ ಹೇಳಿಕೆಯನ್ನು ಮುಖಬೆಲೆಯಲ್ಲಿ ಸ್ವೀಕರಿಸಲು ಸಾಧ್ಯವಿಲ್ಲ. ತಮ್ಮ ದುಡಿಮೆಯನ್ನು ಮಾರಿ ಬದುಕುವುದು ಬಿಟ್ಟರೆ ಬೇರೆ ದಾರಿಯೇ ಇಲ್ಲದವರಿಗೆ ಇಷ್ಟ ಇದ್ದರೆ ಮಾರುವ, ಕಷ್ಟವಾದರೆ ಮಾರದಿರುವ ಸ್ವಾತಂತ್ರ್ಯ ಇದೆಯೆನ್ನಲಾಗುವುದಿಲ್ಲ. ಅವರ ದುಡಿತದಿಂದ ಬರುವ ಆದಾಯ ಅವರ ಅಸ್ತಿತ್ವವನ್ನೇ ನಿರ್ಧರಿಸುತ್ತದೆ. ಆದುದರಿಂದ ಕಡಿಮೆ ಸಂಬಳ ನಿಗದಿಯಾಗಿದೆಯೆಂದು ಮೇಸ್ತ್ರಿಗಳು, ದಾದಿಗಳು, ಮಾಲ್‌ಗಳಲ್ಲಿ, ಫ್ಯಾಕ್ಟರಿಗಳಲ್ಲಿ ದುಡಿಯುವವರು, ಡ್ರೈವರ್‌ಗಳು ತಮ್ಮ ಶ್ರಮ ಮಾರದಿರಲು ಸಾಧ್ಯವಾಗುವುದಿಲ್ಲ.

ಇದೇ ಸ್ಥಿತಿ ಸಣ್ಣಪುಟ್ಟ ವ್ಯಾಪಾರಿಗಳು, ಕೃಷಿಕರು, ಉತ್ಪಾದಕರದ್ದು ಕೂಡ. ಸಣ್ಣ ಕೃಷಿಕರು ಅಥವಾ ಉತ್ಪಾದಕರು ತಾವು ಬೆಳೆದ ಅಡಿಕೆಯನ್ನೋ ಅಥವಾ ತರಕಾರಿಯನ್ನೋ ಅಥವಾ ಕೃಷಿಯೇತರ ಉತ್ಪನ್ನವನ್ನೋ ಮಾರಲೆಂದು ಮಾರ್ಕೆಟ್ ಒಯ್ದರೆ ಅಲ್ಲಿ ಸರಕಿಗೆ ಅವರು ಆಪೇಕ್ಷಿಸಿದ ಬೆಲೆ ಇಲ್ಲವೆಂದು ಮಾರದೆ ವಾಪಾಸ್ಸು ಬರುವ ಸ್ಥಿತಿಯಲ್ಲಿ ಅವರಿಲ್ಲ. ಏಕೆಂದರೆ ಮರುದಿನ ಅವರ ತಾಯಿಯನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಬೇಕು, ಮಗಳ ಸ್ಕೂಲ್ ಫೀ ತುಂಬಬೇಕು, ಇವಲ್ಲಕ್ಕಿಂತಲೂ ಮುಖ್ಯವಾಗಿ ಊಟಕ್ಕೆ ಅಕ್ಕಿ ಖರೀದಿಸಬೇಕು. ಈ ಎಲ್ಲ ಖರ್ಚುಗಳನ್ನು ಭರಿಸಲು ಮಾರ್ಕೆಟ್‌ಗೆ ತಂದ ಸರಕನ್ನು ಸಿಕ್ಕಿದ ಬೆಲೆಗೆ ಮಾರುವುದು ಬಿಟ್ಟರೆ ಬೇರೆ ದಾರಿಯೇ ಅವರಿಗಿರುವುದಿಲ್ಲ. ಹೀಗೆ ಸಣ್ಣಪುಟ್ಟ ಕೃಷಿಕರು, ಉತ್ಪಾದಕರು, ವ್ಯಾಪಾರಿಗಳು ಇಷ್ಟವಾದರೆ ಮಾರುವ, ಕಷ್ಟವಾದರೆ ಮಾರದಿರುವ ಸ್ವಾತಂತ್ರ್ಯ ಹೊಂದಿಲ್ಲ. ಮಾರುಕಟ್ಟೆ ನಿಗದಿ ಪಡಿಸಿದ ಬೆಲೆ ಅವರಿಗೆ ಒಪ್ಪಿಗೆಯಾಗಲಿ ಆಗದಿರಲಿ ಅವರು ತಮ್ಮ ಸರಕುಸೇವೆಗಳನ್ನು ಮಾರುವ ಅಥವಾ ಖರೀದಿಸುವ ಅನಿವಾರ್ಯತೆ ಇದೆ. ಹೀಗೆ ಮಾರುಕಟ್ಟೆಯಲ್ಲಿ ಸ್ವಾತಂತ್ರ್ಯವಿದೆ, ಸಮಾನತೆಯಿದೆ ಎನ್ನುವ ಕಲ್ಪನೆಗಳು ವಾಸ್ತವಲ್ಲ. ಆದುದರಿಂದ ಮಾರುಕಟ್ಟೆ ನಿರ್ದೇಶಿತ ಅಭಿವೃದ್ಧಿ ಜಾರಿಗೆ ಬಂದ ಕೂಡಲೇ ಬಡತನ, ಅಸಮಾನತೆಗಳು ನಿವಾರಣೆಯಾಗುವುದಿಲ್ಲ.

ಮೇಲಿನ ಪರಿಸರದ ಸಮಸ್ಯೆಯೊಂದಿಗೆ ಮಾರುಕಟ್ಟೆ ತತ್ತ್ವಗಳು ಎಲ್ಲಿ ಅನ್ವಯವಾಗಬೇಕು ಮತ್ತು ಎಲ್ಲಿ ಅನ್ವಯವಾಗಬಾರದೆಂದು ತೀರ್ಮಾನಿಸುವುದು ನಮ್ಮ ಸರಕಾರಗಳು. ಐದು ವರ್ಷಕ್ಕೊಮ್ಮೆ ನಡೆಯುವ ಚುನಾವಣೆಯಲ್ಲಿ ಜನರು ಮತ ಚಲಾಯಿಸಿ ಸರಕಾರಗಳನ್ನು ಚುನಾಯಿಸುವುದರಿಂದ ಮತ್ತು ಚುನಾವಣೆಯಲ್ಲಿ ತಳಸ್ತರದೇ ಜನರೇ ಹೆಚ್ಚು ಪಾಲುಗೊಳ್ಳುವುದರಿಂದ ಸರಕಾರ ಮಾರುಕಟ್ಟೆಯನ್ನು ಬಡವರಿಗೆ ಅನುಕೂಲಕರವಾಗಿ ಕಟ್ಟಿಕೊಳ್ಳಬಹುದು ಎನ್ನುವ ಮುಗ್ಧ ತಿಳುವಳಿಕೆ ಬಹುತೇಕರ ಪ್ರಜ್ಞೆಯ ಭಾಗವಾಗಿದೆ. ಈ ಬಗೆಯ ಅಪಕಲ್ಪನೆ ಜನರಲ್ಲಿ ಮನೆ ಮಾಡಿರುವುದರ ಹಿಂದೆ ಸರಕಾರ ಮತ್ತು ಮಾಧ್ಯಮಗಳ ಪಾತ್ರವೂ ಇದೆ. ನಮ್ಮ ಸಂಪನ್ಮೂಲದ ಅತ್ಯಲ್ಪ ಪ್ರಮಾಣವನ್ನು ತಳಸ್ತರದ ಜನರಿಗೆ ವಿವಿಧ ಬಡತನ ನಿವಾರಣ ಕಾರ್ಯಕ್ರಮಗಳ ರೂಪದಲ್ಲಿ ಸರಕಾರ ನೀಡುತ್ತಿದೆ. ಇಂತಹ ಬಡತನ ನಿವಾರಣ ಕಾರ್ಯಕ್ರಮಗಳು ಚುನಾವಣೆಯಲ್ಲಿ ಮತ್ತು ಮಾಧ್ಯಮಗಳಲ್ಲಿ ಅತೀ ಹೆಚ್ಚಿನ ಮಹತ್ವ ಪಡೆಯುತ್ತಿವೆ. ಇದೇ ಸಂದರ್ಭದಲ್ಲಿ ನಮ್ಮ ಸಂಪನ್ಮೂಲದ ಬಹುದೊಡ್ಡ ಪಾಲು ಶ್ರೀಮಂತರು ಮತ್ತು ಮಧ್ಯಮ ವರ್ಗದ ಪಾಲಾಗುತ್ತಿದೆ. ಆದರೆ ಇವುಗಳ ಮೇಲೆ ಮಾಧ್ಯಮಗಳಲ್ಲಿ ವಿಶೇಷ ಚರ್ಚೆಯೇ ನಡೆಯುವುದಿಲ್ಲ. ಈ ಎಲ್ಲ ಕಾರಣಗಳಿಂದ ಬಡವರು ಸರಕಾರದ ಕೃಪೆಯಲ್ಲಿ ಬದುಕುತ್ತಿದ್ದಾರೆ ಮತ್ತು ಅನುಕೂಲಸ್ಥರು ಮಾರುಕಟ್ಟೆಯಲ್ಲಿ ವ್ಯವಹರಿಸಿ ತಮ್ಮ ಅಗತ್ಯಗಳನ್ನು ಪೂರೈಸಿಕೊಳ್ಳುತ್ತಾರೆನ್ನುವ ಅಪಕಲ್ಪನೆಯನ್ನು ನಮ್ಮಲ್ಲಿ ಮನೆ ಮಾಡಿದೆ. ಆದರೆ ವಾಸ್ತವ ಬೇರೆಯೇ ಇದೆ.

ಎರಡು ವಿಧದ ಮಾರುಕಟ್ಟೆಗಳು

ಬಡವರು ಮತ ಹಾಕಿ ಚುನಾಯಿಸಿದ ಸರಕಾರಗಳು ಬಡವರ ಹಿಡಿತಕ್ಕಿಂತ ಹೆಚ್ಚು ಅನುಕೂಲಸ್ಥರ ಹಿಡಿತದಲ್ಲಿವೆ. ಇದರಿಂದಾಗಿ ಮಾರುಕಟ್ಟೆ ಕೂಡ ಅನುಕೂಲಸ್ಥರಿಗೆ ಅನುಕೂಲವಾಗುವ ಹಾಗೆ ಮತ್ತು ತಳಸ್ತರದ ಜನರಿಗೆ ಅನಾನುಕೂಲವಾಗುವ ಹಾಗೆ ಕಟ್ಟಿಕೊಳ್ಳಲಾಗಿದೆ. ಇವರು ಕಟ್ಟಿಕೊಂಡ ಮಾರುಕಟ್ಟೆಯಲ್ಲಿ ಬೇಡಿಕೆಗಿಂತ ಕಡಿಮೆ ಪೂರೈಕೆ ಇರುವ ಭೂಮಿ, ಹಣಕಾಸು, ಪ್ರಾಕೃತಿಕ ಸಂಪನ್ಮೂಲಗಳ ವ್ಯವಹಾರಗಳು ಮಾರುಕಟ್ಟೆ ನಿಯಮದಿಂದ ಹೊರಗಿದ್ದರೆ ಬೇಡಿಕೆಗಿಂತ ಹೆಚ್ಚು ಪೂರೈಕೆ ಇರುವ ಶ್ರಮ ವ್ಯವಹಾರ ಮಾರುಕಟ್ಟೆ ನಿಯಮದೊಳಗಿದೆ. ಕೆಲವೊಂದು ಉದಾಹರಣೆಗಳನ್ನು ನೋಡಿದರೆ ಮೇಲಿನ ಅಂಶ ಹೆಚ್ಚು ಸ್ಪಷ್ಟವಾಗಬಹುದು.

ಮೊದಲಿಗೆ ಹಣಕಾಸು ಮಾರುಕಟ್ಟೆಯನ್ನು ಪರಿಶೀಲಿಸುವ. ಸಾಲದ ಬೇಡಿಕೆ ಪೂರೈಕೆಗಳು ಬಡ್ಡಿದರವನ್ನು ತೀರ್ಮಾನಿಸಬೇಕು. ಸಾಲದ ಬೇಡಿಕೆ ಹೆಚ್ಚಾದಾಗ ಬಡ್ಡಿದರ ಹೆಚ್ಚಾಗಬೇಕು ಮತ್ತು ಕಡಿಮೆಯಾದಾಗ ಕಡಿಮೆಯಾಗಬೇಕು. ಆದರೆ ನಮ್ಮಲ್ಲಿ ಆ ರೀತಿ ಆಗುತ್ತಿಲ್ಲ. ಸಾಲದ ಮಾರುಕಟ್ಟೆಯಲ್ಲಿ ಸರಕಾರ ಮಧ್ಯಪ್ರವೇಶಿಸಿ ಸಾಲದ ಎರಡು ಮಾರುಕಟ್ಟೆಗಳನ್ನು ಸೃಷ್ಟಿಸಿದೆ. ಒಂದು ಮಾರುಕಟ್ಟೆ ನಿಯಮನುಸಾರ ಕೆಲಸ ಮಾಡಿದರೆ ಮತ್ತೊಂದು ಮಾರುಕಟ್ಟೆಯಲ್ಲಿ ಸರಕಾರ ಮಧ್ಯಪ್ರವೇಶ ಮಾಡಿ ಬಡ್ಡಿದರವನ್ನು ಹಿಡಿತದಲ್ಲಿಟ್ಟುಕೊಂಡಿದೆ. ವಿಚಿತ್ರವೆಂದರೆ ಸರಕಾರದ ಹಿಡಿತದಲ್ಲಿರುವ ಸಾಲದ ಮಾರುಕಟ್ಟೆಯ ಹೆಚ್ಚಿನ ಭಾಗ ದೊಡ್ಡ ಉದ್ದಿಮೆ ಹಾಗು ದೊಡ್ಡ ಕೃಷಿಕರಿಗೆ ಹೋದರೆ ಸಣ್ಣ ಭಾಗ ಪ್ರಜಾಪ್ರಭುತ್ವದಲ್ಲಿ ಕಡಿಮೆ ಪ್ರತಿನಿಧಿತ್ವವುಳ್ಳವರಿಗೆ ಹೋಗುತ್ತಿದೆ. ಅಷ್ಟುಮಾತ್ರವಲ್ಲ ಪ್ರಜಾಪ್ರಭುತ್ವದಲ್ಲಿ ಪ್ರತಿನಿಧಿತ್ವ ಇಲ್ಲದ ತಳಸ್ತರದ ಜನರನ್ನು ಮಾರುಕಟ್ಟೆ ನಿಯಮನುಸಾರ ವ್ಯವಹರಿಸಲು ಒತ್ತಾಯಿಸಲಾಗುತ್ತಿದೆ. ಇವರ ಸಾಲದ ಬೇಡಿಕೆ ಹೆಚ್ಚಿರುವುದರಿಂದ ಸರಕಾರೇತರ ಮೂಲಗಳ ಸಾಲದ ಬಡ್ಡಿದರಗಳು ಕೂಡ ಹೆಚ್ಚಾಗಿವೆ. ಪ್ರಜಾಪ್ರಭುತ್ವದ ಮೇಲೆ ಹಿಡಿತಹೊಂದಿರುವ ಮೇಲ್ವರ್ಗ ಹೆಚ್ಚು ಸರಕಾರಿ ಸಾಲ ಪಡೆಯುವುದು ಮಾತ್ರವಲ್ಲ, ಪಡೆದ ಸಾಲವನ್ನು ಸಂದಾಯ ಮಾಡುವುದರಲ್ಲೂ ಹಿಂದಿದೆ. ಹಾಗೆಂದು ಕಠಿಣ ಕಾನೂನು ಕ್ರಮ ಕೈಗೊಂಡು ಇವರ

ಪುಟ 10 ಕ್ಕೆ

ಮಾರುಕಟ್ಟೆ ಮತ್ತು ಅಭಿವೃದ್ಧಿ........ ಪುಟ 9 ರಿಂದ

ಸಾಲ ವಸೂಲಿ ಮಾಡುವ ಬದಲು ಕೋಟಿಗಟ್ಟಲೆ ರೂಗಳ ಸಾಲವನ್ನು ಮನ್ನಾ ಮಾಡಲಾಗುತ್ತಿದೆ. ಕೃಷಿಕರ ಸಣ್ಣಪುಟ್ಟ ಸಾಲವನ್ನು ಸರಕಾರ ಮನ್ನಾ ಮಾಡುವಾಗ ನಮ್ಮ ಬ್ಯಾಂಕಿಂಗ್ ವ್ಯವಸ್ಥೆ ಕೆಡುತ್ತಿದೆಯೆಂದು ಕಿರುಚಾಡುವ ಮಾಧ್ಯಮಗಳು ಉದ್ದಿಮೆಗಳು ಮಾಡಿರುವ ಲಕ್ಷಕೋಟಿಗಿಂತಲೂ ಹೆಚ್ಚಿನ ಸಾಲವನ್ನು ಮನ್ನಾ ಮಾಡುವಾಗ ಮಾತೇ ಆಡುವುದಿಲ್ಲ.

ಎರಡು ವಿಧದ ಸಾಲದ ಮಾರುಕಟ್ಟೆ ಇದ್ದಂತೆ ಎರಡು ವಿಧದ ಭೂಮಾರುಕಟ್ಟೆಗಳಿವೆ. ಬಡವರು ಮತ್ತು ತಳಮಧ್ಯಮ ವರ್ಗದವರು ಮನೆ ಕಟ್ಟಿಸಲು ಒಂದು ಸಣ್ಣ ತುಂಡು ಜಾಗ ಖರೀದಿಸುವಾಗ ಮಾರುಕಟ್ಟೆ ದರ ನೀಡಬೇಕು. ವರ್ಷದಿಂದ ವರ್ಷ ವಸತಿ ಬೇಡಿಕೆ ಹೆಚ್ಚಾದಂತೆ ಭೂಮಿ ಬೆಲೆ ಕೂಡ ಏರುತ್ತಿದೆ. ಆದರೆ ಇದೇ ಸಂದರ್ಭದಲ್ಲಿ ಉದ್ದಿಮೆಗಳಿಗೆ ಅತ್ಯಂತ ಅಗ್ಗದ ಬೆಲೆಯಲ್ಲಿ ಭೂಮಿ ಲಭ್ಯವಾಗುತ್ತಿದೆ. ಉದ್ದಿಮೆಗಳಿಗೆ ಭೂಮಿ ನೀಡಲು ಸರಕಾರವೇ ಭೂಬ್ಯಾಂಕ್ ಸ್ಥಾಪಿಸುತ್ತಿದೆ. ಉದ್ದಿಮೆಗಳಿಗೆ ಕಡಿಮೆ ಬೆಲೆಯಲ್ಲಿ ಭೂಮಿ ಒದಗಿಸುವ ಉದ್ದೇಶದಿಂದ ಭೂಸ್ವಾಧೀನ ಮಸೂದೆಯನ್ನು ತಿದ್ದುಪಡಿ ಮಾಡಲು ಸರಕಾರ ಹಿಂದೇಟು ಹಾಕುವುದಿಲ್ಲ. ಇಷ್ಟ ಇದ್ದರೆ ಮಾರುವ ಇಲ್ಲವಾದರೆ ದೂರ ನಿಲ್ಲುವ ಭೂಮಾಲೀಕರ ಮಾರುಕಟ್ಟೆ ಸ್ವಾತಂತ್ರ್ಯ ಉದ್ದಿಮೆಗಳಿಗೆ ಭೂಮಿ ನೀಡುವ ಸಂದರ್ಭದಲ್ಲಿ ಅನ್ವಯವಾಗುವುದಿಲ್ಲ. ಹೆಚ್ಚುಕಡಿಮೆ ಇದೇ ನೀತಿ ಕಲ್ಲಿದ್ದಲು, ತೈಲ, ಕಬ್ಬಿಣ ಅದಿರು ಇತ್ಯಾದಿ ಪ್ರಾಕೃತಿಕ ಸಂಪನ್ಮೂಲಗಳ ಮಾರುಕಟ್ಟೆಯಲ್ಲೂ ಕೆಲಸ ಮಾಡುತ್ತಿದೆ.

ಪರಿಹಾರ ಮಾರುಕಟ್ಟೆಯಲ್ಲಿಲ್ಲ

ಅತ್ಯಂತ ಕಡಿಮೆ ಬೆಲೆಗೆ ಭೂಮಿ, ಹಣಕಾಸುಗಳು ಮೇಲ್ವರ್ಗಕ್ಕೆ ಪೂರೈಕೆಯಾಗುವಂತೆ ಇವುಗಳ ಮಾರುಕಟ್ಟೆಯನ್ನು ಕಟ್ಟಿಕೊಳ್ಳಲಾಗಿದೆ. ಆದರೆ ಶ್ರಮ ಮಾರುಕಟ್ಟೆಯಲ್ಲಿ ದುಡಿಯುವ ವರ್ಗದ ಸಂಬಳ ಸಂಪೂರ್ಣವಾಗಿ ಬೇಡಿಕೆ ಪೂರೈಕೆಗಳ ಮೇಲೆ ನಿಂತಿದೆ. ನಮ್ಮಲ್ಲಿ ಭೂಮಿ, ಹಣಕಾಸು ಇಲ್ಲದ ಜನರಸಂಖ್ಯೆ ಹೆಚ್ಚಿರುವುದರಿಂದ ದುಡಿಯುವ ಜನರ ಪೂರೈಕೆ ಕೂಡ ಹೆಚ್ಚಿದೆ. ಪೂರೈಕೆ ಹೆಚ್ಚಿರುವುದರಿಂದ ಅತ್ಯಂತ ಕಡಿಮೆ ಸಂಬಳಕ್ಕೆ ದುಡಿಯುವವರನ್ನು ಪಡೆಯಲು ಅನುಕೂಲವಾಗುವ ರೀತಿಯಲ್ಲಿ (ಒಪ್ಪಂದ, ಹೊರಗುತ್ತಿಗೆ, ತಾತ್ಕಾಲಿಕ ನೇಮಕಾತಿ ಇತ್ಯಾದಿ ಕ್ರಮಗಳ ಮೂಲಕ) ಶ್ರಮ ಮಾರುಕಟ್ಟೆಯನ್ನು ರೂಪಿಸಲಾಗಿದೆ. ಹೀಗೆ ನಮ್ಮಲ್ಲಿ ಚಾರಿತ್ರಿಕವಾಗಿ ನಮ್ಮಲ್ಲಿದ್ದ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಹಾಗು ರಾಜಕೀಯ ಅಸಮಾನತೆಗಳನ್ನು ಯಥಾರೀತಿಯಲ್ಲಿರಿಸಿಕೊಂಡು ಮಾರುಕಟ್ಟೆ ನಿದೇಶಿತ ಅಭಿವೃದ್ಧಿಯನ್ನು ಜಾರಿಗೊಳಿಸಿದಲಾಗಿದೆ. ಇಂತಹ ಪರಿಸರಲ್ಲಿ ಮಾರುಕಟ್ಟೆ ತತ್ತ್ವವನ್ನು ಅನುಕೂಲಸ್ಥರಿಗೆ ಅನ್ವಯಿಸಿ ತಳಸ್ತರದ ಜನರ ನೆರವಿಗೆ ಸರಕಾರ ನಿಲ್ಲುತ್ತಿದ್ದರೆ ಮಾರುಕಟ್ಟೆ ಸೃಷ್ಟಿಸುವ ಅವಾಂತರಗಳನ್ನು ಸಹಿಸುವ ಶಕ್ತಿ ತಳಸ್ತರದ ಜನರಿಗೆ ಬರುತ್ತಿತ್ತು. ಆದರೆ ಆ ರೀತಿ ಮಾಡುವ ಬದಲು ಮಾರುಕಟ್ಟೆಯನ್ನು ಮೇಲ್ವರ್ಗ ಜನರಿಗೆ ಅನುಕೂಲವಾಗುವ ಹಾಗೆ ಮತ್ತು ಬಡಜನರಿಗೆ ಅನಾನುಕೂಲ ಆಗುವ ಹಾಗೆ ಕಟ್ಟಿಕೊಳ್ಳಲಾಗಿದೆ. ಇದರಿಂದ ಬಡವರ ಬದುಕು ಅಸಹನೀಯವಾಗಿದೆ.

ಈ ಸಮಸ್ಯೆಗೆ ಪರಿಹಾರ ಮಾರುಕಟ್ಟೆಯಲಿಲ್ಲ; ಮಾರುಕಟ್ಟೆಯನ್ನು ರೂಪಿಸುವ ಪ್ರಜಾಪ್ರಭುತ್ವದಲ್ಲಿದೆ. ಇಂದು ಆಚರಣೆಯಲ್ಲಿ ಪ್ರಜಾಪ್ರಭುತ್ವ ತುಂಬಾ ಸೀಮಿತರೂಪದ್ದಾಗಿದೆ. ನಮ್ಮ ಸಮಾಜದ ಬಹುತೇಕರು ಈ ಪ್ರಜಾಪ್ರಭುತ್ವದಲ್ಲಿ ಪ್ರತಿನಿಧಿತ್ವ ಹೊಂದಿಲ್ಲ. ಮಹಿಳೆಯರು, ಅಲ್ಪಸಂಖ್ಯಾತರು, ಸಣ್ಣಪುಟ್ಟ ಹಿಂದುಳಿದ ಜಾತಿಗಳು ಅವರ ಜನಸಂಖ್ಯೆಯ ಕಾಲುಭಾಗದಷ್ಟು ಪ್ರತಿನಿಧಿತ್ವ ಹೊಂದಿಲ್ಲ. ದಲಿತಬುಡಕಟ್ಟುಗಳು ಅವರ ಜನಸಂಖ್ಯೆಗೆ ಅನುಗುಣವಾದ ಪ್ರತಿನಿಧಿತ್ವ ಹೊಂದಿದ್ದಾರೆ. ಆದರೆ ದಲಿತಬುಡಕಟ್ಟುಗಳ ಪ್ರತಿನಿಧಿಗಳನ್ನು ಚುನಾಯಿಸುವಲ್ಲಿ ದಲಿತಬುಡಕಟ್ಟೇತರ ಜನರು ನಿರ್ಣಾಯಕ ಪಾತ್ರ ವಹಿಸುತ್ತಿದ್ದಾರೆ. ಆದುದರಿಂದ ದಲಿತಬುಡಕಟ್ಟು ಪ್ರತಿನಿಧಿಗಳ ತಮ್ಮ ಜನರ ಆಸಕ್ತಿಗಳನ್ನು ಪ್ರತಿನಿಧಿಸುವುದಕ್ಕಿಂತ ಹೆಚ್ಚು ದಲಿತಬುಡಕಟ್ಟೇತರ ಜನರ ಆಸಕ್ತಿಗಳನ್ನು ಪ್ರತಿನಿಧಿಸುವ ಅನಿವಾರ್ಯತೆ ಇದೆ. ಹೀಗೆ ನಮ್ಮ ಪ್ರಜಾಪ್ರಭುತ್ವ ತುಂಬಾ ಸಂಕುಚಿತವಾಗಿದೆ. ಅಲ್ಪಸಂಖ್ಯೆಯಲ್ಲಿರುವ ಮೇಲ್ವರ್ಗದ ಆಸಕ್ತಿಗಳನ್ನು ಪ್ರತಿನಿಧಿಸುವ ಪ್ರಜಾಪ್ರಭುತ್ವ ತನ್ನ ಆಸಕ್ತಿಯನ್ನು ಪ್ರತಿನಿಧಿಸುವ ಮಾರುಕಟ್ಟೆಯನ್ನು ಕಟ್ಟಿಕೊಂಡಿದೆ. ಈ ವ್ಯವಸ್ಥೆಯಲ್ಲಿ ಅನಾನುಕೂಲಸ್ಥರು ಮಾರುಕಟ್ಟೆ ದರದಲ್ಲಿ ಖರೀದಿಸಿ ಅನುಭವಿಸಿದರೆ ಅನುಕೂಲಸ್ಥರು ಸರಕಾರದ ಕೃಪೆಯಲ್ಲಿ ಬದುಕುತ್ತಿದ್ದಾರೆ. ಪ್ರಜಾಪ್ರಭುತ್ವದ ಗುಣಮಟ್ಟವನ್ನು ಸುಧಾರಿಸುವುದು ಮಾತ್ರ ಈ ಸಮಸ್ಯೆಗೆ ದೂರಗಾಮಿ ಪರಿಹಾರ. ಸಮಾಜದ ಎಲ್ಲರೂ ಮುಕ್ತವಾಗಿ ಪ್ರಜಾಪ್ರಭುತ್ವದಲ್ಲಿ ಭಾಗವಹಿಸಲು ಸಾಧ್ಯವಾದರೆ ಮುಕ್ತ ಪ್ರಜಾಪ್ರಭುತ್ವ ಆಚರಣೆಗೆ ಬರಬಹುದು. ಮುಕ್ತ ಪ್ರಜಾಪ್ರಭುತ್ವ ಆಚರಣೆಗೆ ಬಂದರೆ ಮುಕ್ತ ಮಾರುಕಟ್ಟೆ ಕಾರ್ಯರೂಪಕ್ಕೆ ಬರಬಹುದು.

ತೆರಿಗೆಗಳ್ಳತನ, ಭ್ರಷ್ಟಾಚಾರಗಳು ಏಕೆ ಹೆಚ್ಚುತ್ತಿವೆ?.......

ಪುಟ 6 ರಿಂದ

ಕೊಳ್ಳುವ ಹಣಕ್ಕೂ ಮಧ್ಯೆ ಇರುವ ಹೆಚ್ಚುವರಿ ಮೌಲ್ಯವೇ ಬಡ್ಡಿ. ಇದರ ವಿವಿಧ ರೂಪಗಳೇ ಕಮೀಷನ್. ಬ್ಯಾಂಕುಗಳು ಸರಕುಗಳ ವ್ಯಾಪಾರಿಗಳಿಗೆ ಹಣವನ್ನು ಮಾರಿ ಲಾಭವನ್ನು ಪಡೆಯುತ್ತವೆ. ಅಂದರೆ ಸಾಲ ಕೊಟ್ಟು ಬಡ್ಡಿ ಅಥವಾ ಕಮೀಷನ್ ಅನ್ನು ಪಡೆಯುತ್ತವೆ. ಹಾಗೆಯೇ ಗ್ರಾಹಕರಿಗೆ ಹಣವನ್ನು ಮಾರಿ ಲಾಭವನ್ನು ಬಡ್ಡಿ/ಕಮೀಷನ್ ರೂಪದಲ್ಲಿ ಗಳಿಸುತ್ತವೆ. ಹೀಗೆ ವ್ಯಾಪಾರಿಗಳಿಂದ ಮತ್ತು ಗ್ರಾಹಕರಿಂದ ಪಡೆಯುವ ಲಾಭದಿಂದಾಗಿ ಬ್ಯಾಂಕುಗಳು ಸರಕು ವ್ಯಾಪಾರದ ಬಲಿಷ್ಠ ಅಂಗಗಳಾಗಿವೆ. ಆದರೂ ಸರಕು ವ್ಯಾಪಾರದಲ್ಲಿ ಲಾಭದ ಜೊತೆಗೆ ನಷ್ಟವೂ ಇರುವಂತೆ ಹಣವನ್ನು ಸರಕನ್ನಾಗಿಸಿ ವ್ಯಾಪಾರ ಮಾಡುವ ಬ್ಯಾಂಕುಗಳಿಗೂ ಲಾಭದ ಜೊತೆಗೆ ನಷ್ಟವೂ ಇಲ್ಲದಿಲ್ಲ. ಬ್ಯಾಂಕಿನಿಂದ ಸಾಲ ಪಡೆವ ವ್ಯಾಪಾರಿಗಳ ಲಾಭ ತೀವ್ರವಾಗಿ ಕುಸಿದಾಗ ಅಥವಾ ಪಡೆದ ಸಾಲವನ್ನು ಹಿಂದಿರುಗಿಸಲು ವಿಫಲರಾದಾಗ, ಅಧಿಕ ಸಂಖ್ಯೆಯ ಗ್ರಾಹಕರು ಪಡೆದ ಸಾಲವನ್ನು ಹಿಂದಿರುಗಿಸಲು ನಾನಾ ಕಾರಣಗಳಿಂದಾಗಿ ವಿಫಲರಾದಾಗ ಬ್ಯಾಂಕುಗಳು ದಿವಾಳಿಯಾಗುತ್ತವೆ. ಅವನ್ನು ಉಳಿಸಲು ಜನರು ಕೊಟ್ಟ ತೆರಿಗೆ ಹಣವನ್ನು ಬಂಡವಾಳಶಾಹಿಯ ಫಲಾನುಭವಿಗಳಾದ ಸರ್ಕಾರಗಳು ವ್ಯಯಮಾಡುತ್ತವೆ.

ಸೇವೆಗಳ ವ್ಯಾಪಾರ

ಆಹಾರ ಮತ್ತು ಜೀವನಾಗತ್ಯ ವಸ್ತುಗಳನ್ನು ಸರಕನ್ನಾಗಿಸಿ ಜನರಿಗೆ ಮಾರುವಂತೆ ಆರೋಗ್ಯ, ಶಿಕ್ಷಣ, ನೈರ್ಮಲ್ಯ ಮುಂತಾದ ಜೀವನಾಗತ್ಯ ಸೌಲಭ್ಯಗಳನ್ನೂ ಸರಕನ್ನಾಗಿಸಿ ಮಾರುವ ವ್ಯವಹಾರವನ್ನು 'ಸೇವೆಗಳ ವ್ಯಾಪಾರ' ಎನ್ನುತ್ತಾರೆ. ಹಣಕಾಸು ಆರ್ಥಿಕತೆಯ ಈ ಕಾಲಘಟ್ಟದಲ್ಲಿ ಜನರಲ್ಲಿ ಸಹಜವಾಗಿ ಹುದುಗಿರುವ, ಅಭದ್ರತೆ, ಸಾವಿನ ಭಯ, ನಷ್ಟದ ಭಯ, ಕಡುಬಡತನದಲ್ಲಿ ದಿಕ್ಕೇ ತೋಚದ ಸ್ಥಿತಿಯಲ್ಲರುವವರ 'ಹತಾಶೆ', ಮತ್ತು ಅನಾಯಾಸವಾಗಿ ಹಣ ಗಳಿಸಬೇಕೆನ್ನುವವರ 'ದುರಾಸೆ' ಗಳನ್ನೂ ಬಂಡವಾಳ ಮಾಡಿಕೊಂಡು ಹಣ ಗಳಿಸುವ ವ್ಯಾಪಾರಕ್ಕೆ ಲಾಟರಿ–ಜೂಜು, ಮತ್ತು ವಿಮೆ ಎಂಬ ಹೆಸರಿವೆ. ಅದೃಷ್ಟವಿದ್ದರೆ ಕೊಟ್ಟ ಹಣಕ್ಕೆ ನೂರು ಪಟ್ಟು ಹಣ ಸಿಗುವುದೆಂದು ಆಸೆ ಹುಟ್ಟಿಸಿ ಹಣ ಪಡೆದರೆ ಲಾಟರಿ. ಅವಘಡ, ನಷ್ಟ, ಕಳ್ಳತನ. ಅನಾರೋಗ್ಯ, ಜೀವಹಾನಿಗಳಿಂದ ತೊಂದರೆಯಾಗಬಹುದೆಂದು ಹೆದರಿಸಿ ವ್ಯಕ್ತಿಗೆ ಅಥವಾ ಅವಲಂಬಿತರಿಗೆ ಕೊಟ್ಟ ಹಣದ ಅನೇಕ ಪಟ್ಟು ಪ್ರತಿಫಲ ಸಿಗುತ್ತದೆ ಎಂದು ನಂಬಿಸುವ ವ್ಯಾಪಾರ ವಿಮೆ. ಹಾಗೆ ಲಾಟರಿ ಅಥವಾ ವಿಮೆ ಕೊಂಡುಕೊಂಡ ನೂರು ಜನರಲ್ಲಿ ಇಬ್ಬರು ಮೂವರಿಗೆ ಅಕಸ್ಮಾತ್ 'ಅದೃಷ್ಟ ಖುಲಾಯಿಸ'ಬಹುದು. ಅಥವಾ ಅನಿರೀಕ್ಷಿತ ರೀತಿಯಲ್ಲಿ ತೊಂದರೆಯಾಗಬಹುದು. ಅಂಥವರಿಗೆ ಲಾಟರಿ ಬಹುಮಾನ ಅಥವಾ ವಿಮೆಯ ಹಣ ಸಿಗಬಹುದು. ಉಳಿದ ತೊಂಭತ್ತೇಳು ಜನರು ತೆರುವ ಹಣದಲ್ಲಿ ಮೂವರಿಗೆ ಕೊಟ್ಟು ಮಿಗುವ ಹಣ ಲಾಟರಿ ಅಥವಾ ವಿಮೆಯ ವ್ಯಾಪಾರಿಯ ವಶವಾಗುತ್ತದೆ. ಅಂಥವರನ್ನು ನೋಡಿದಾಗ ಪ್ರತಿಯೊಬ್ಬರಿಗೂ ತಮಗೇ ಹಾಗೆ ಲಾಭವಾಗಬಹುದೆಂದು ನಂಬಿ ಲಾಟರಿ, ವಿಮೆ ಕೊಂಡುಕೊಳ್ಳುತ್ತಾರೆ. ಲಾಟರಿ ಅಥವಾ ವಿಮೆಯ ಲಾಭ ಪಡೆದ ಫಲಾನುಭವಿಗಳಿಗೆ ತಮ್ಮ ಹಾಗೆ ಹಣಕೊಟ್ಟ ಉಳಿದ ತೊಂಭತ್ತೇಳು ಜನರ ಹಣದಿಂದಲೇ ಪಾವತಿಸಲಾಗಿದೆಯೆಂದು ಯಾರೂ ಯೋಚಿಸುವುದಿಲ್ಲ. ಲಾಟರಿ ಕೊಂಡುಕೊಂಡ ಎಲ್ಲರಿಗೂ ಬಹುಮಾನ ಬರುವುದಿಲ್ಲ. ವಿಮೆ ಮಾಡಿಸಿದ ಎಲ್ಲರಿಗೂ ಒಮ್ಮಗೇ ಕಷ್ಟ ಬರುವುದಿಲ್ಲ, ಬಂದರೂ ವಿಮೆಯ ಹಣ ಸಿಗುವುದಿಲ್ಲ. ಒಂದು ವೇಳೆ ಅರ್ಧಕ್ಕಿಂತ ಹೆಚ್ಚು ಜನರು ಒಮ್ಮೆಗೇ ಕಷ್ಟಕ್ಕೆ ಸಿಕ್ಕಿ ವಿಮೆಯ ಫಲಾನುಭವಿಗಳಾಗುವ ಸಂದರ್ಭ ಬಂದರೆ ವಿಮಾ ವ್ಯಾಪಾರಿಗಳು ಆಫೀಸು ಮುಚ್ಚಿ ಮಾಯವಾಗುತ್ತಾರೆ.

ಒಂದು ಸೌಲಭ್ಯವನ್ನು ಸೃಷ್ಟಿಸಿ ಅದರ ಸ್ವಾಮ್ಯವನ್ನು ಮಾರುವವರು ಉಳಿಸಿಕೊಂಡು ಇನ್ನೊಬ್ಬರು ಅನುಭವಿಸಲು ಅವಕಾಶ ಕಲ್ಪಿಸುವ ವ್ಯಾಪಾರದಲ್ಲಿ ಸಿಗುವ ಹಣವನ್ನು ಬಾಡಿಗೆ ಎನ್ನುತ್ತಾರೆ. ಒಂದೇ ಸೌಲಭ್ಯವನ್ನು ಒಬ್ಬರಿಗಿಂತ ಹೆಚ್ಚಿನ ಜನರಿಗೆ ಒಂದೇ ಅವಧಿಯಲ್ಲಿ ಮಾರಬಹುದೆ? ಮೇಲು ನೋಟಕ್ಕೆ ಇದು ಸಾಧ್ಯವಿಲ್ಲದ ವ್ಯಾಪಾರ ಎನಿಸುತ್ತದೆ. ಆದರೆ ಬಾಡಿಗೆಯ ಮೂಲಕ ಮಾಡುವ ವ್ಯಾಪಾರದಲ್ಲಿ ಇದು ಸಾಧ್ಯ. ಒಂದೇ ಮನೆಯನ್ನು ಒಂದೇ ಅವಧಿಯಲ್ಲಿ ಇಬ್ಬರಿಗೆ ಬಾಡಿಗೆಗೆ ಕೊಡುವುದು ಸಾಧ್ಯವಿಲ್ಲ. ನಿಜ. ಆದರೆ ಹೋಟೆಲ್ ರೂಮುಗಳನ್ನು ಇಪ್ಪತ್ನಾಲ್ಕು ಗಂಟೆಗಳಲ್ಲಿ ಇಬ್ಬರಿಗೆ ಅಥವಾ ಮೂವರಿಗೆ ಬಾಡಿಗೆಗೆ ಕೊಟ್ಟು ಅವರಲ್ಲಿ ಪ್ರತಿಯೊಬ್ಬರಿಂದಲೂ ಒಂದೇ ಮೊತ್ತದ ಬಾಡಿಗೆಯನ್ನು ಮೂರು ಸಲ ಪಡೆಯಬಹುದು. ಒಬ್ಬ ಡಿಜಿಟಲ್ ವ್ಯಾಪಾರಿ ಗಣಕ ಯಂತ್ರಗಳ ಒಂದು ಸಾಫ್ಟ್‌ವೇರ್ ಅನ್ನು ರೂಪಿಸಿದ ಮೇಲೆ ಅದರ ಎಷ್ಟು ಪ್ರತಿಗಳನ್ನು ಮಾಡಿದರೂ ಮೂಲ ವೆಚ್ಚ ಹೆಚ್ಚಾಗುವುದಿಲ್ಲ. ಅದನ್ನು ಲಕ್ಷಾಂತರ ಜನರಿಗೆ ಮಾರುವುದೆಂದರೆ ಅದರ ಸ್ವಾಮ್ಯವನ್ನು ವ್ಯಾಪಾರಿಯೇ ಉಳಿಸಿಕೊಂಡು ಬಳಕೆದಾರರಿಗೆ ಬಾಡಿಗೆಗೆ ಕೊಡುವುದು. ಇಂಥ ಬಾಡಿಗೆ ರೂಪದ ಲಾಭ ಡಿಜಿಟಲ್ ಯುಗದಲ್ಲಿ ಸಾವಿರಾರು ಸಾಫ್ಟ್‌ವೇರ್ ವ್ಯಾಪಾರಿಗಳನ್ನು ಬೆಳಗಾಗುವುದರೊಳಗೆ ಕೋಟ್ಯಾಧಿಪತಿಗಳನ್ನಾಗಿಸಿದೆ. ಇದರ ನೇರ ಪರಿಣಾಮ ಸರಕುಗಳ ತಯಾರಿಕೆ ಮತ್ತು ಮಾರಾಟದಿಂದ ಬರುವ ಲಾಭಕ್ಕಿಂತ ಸೇವೆಗಳನ್ನು ಸರಕೆಂದು ಮಾರುವ ವ್ಯಾಪಾರದಲ್ಲಿ ಸಿಗುವ ಲಾಭ, ಬಡ್ಡಿ, ಕಮೀಷನ್ ಮತ್ತು ಬಾಡಿಗೆಗಳೇ ಹೆಚ್ಚು ಹೆಚ್ಚು ಹಣವನ್ನು ತಂದು ಕೊಡುವುದರಿಂದ ಜಾಗತೀಕರಣದ ವ್ಯಾಪಾರ ಮಾರುಕಟ್ಟೆ ಆರ್ಥಿಕತೆಯಿಂದ, ಹಣಕಾಸು ಆರ್ಥಿಕತೆಯತ್ತ ಸಾಗಿದೆ. ಇದರ ಫಲವಾಗಿ ದೇಶೀಯ ಚುನಾಯಿತ ಸರಕಾರಗಳು ಜನರ ಹಿತಕ್ಕಾಗಿ ರೂಪಿಸಿ ಅನುಷ್ಠಾನಗೊಳಿಸಬೇಕಾದ ಆರ್ಥಿಕ ನೀತಿಗಳನ್ನು ಜಾಗತಿಕ ಬ್ಯಾಂಕುಗಳು ರೂಪಿಸುಷ್ಟು ಬ್ಯಾಂಕಿಂಗ್ ವ್ಯವಸ್ಥೆ ಬಲವಾಗಿದೆ. ಸಹಜವಾಗಿಯೇ ದೇಶೀಯವಾಗಿ ಸಹ ಬ್ಯಾಂಕಿಂಗ್ ವ್ಯವಹಾರ ಎಲ್ಲಕ್ಕಿಂತ ದೊಡ್ಡದಾದ ವ್ಯಾಪಾರವಾಗಿದೆ. ಒಂದು ಕಡೆ ವರ್ಷ ವರ್ಷವೂ ಕೋಟ್ಯಾಧಿಪತಿಗಳ ಸಂಖ್ಯೆ ಹೆಚ್ಚುತಿದ್ದರೆ ಮತ್ತೊಂದು ಕಡೆ ಬಡತನದ ರೇಖೆಯ ಕೆಳಗಿನ ಜನರ ಬಡತನ, ಕಷ್ಟಗಳು ನಾನಾ ರೂಪಗಳಲ್ಲಿ ವ್ಯಕ್ತವಾಗುತ್ತಿವೆ. ಆಹಾರ ಮತ್ತು ಜೀವನಾವಶ್ಯಕ ವಸ್ತುಗಳನ್ನು ಆಧರಿಸಿ ಸರಕುಗಳ ವಿನಿಮಯ ಮೌಲ್ಯವನ್ನು ನಿರ್ಧರಿಸುವ ಬದಲು ವಿನಿಮಯ ಮಾಧ್ಯಮವಾಗಿ ಬಳಕೆಗೊಳ್ಳಬೇಕಾದ ಹಣ ತಾನೇ ಅತ್ಯಂತ ಮಹತ್ವವುಳ್ಳ ಸರಕಾಗಿರುವುದರಿಂದ ಎಲ್ಲರೂ 'ಮನಿ ಮೈಂಡೆಡ್' ಆಗಿ ಹಣಕೇಂದ್ರಿತ ಸಮಾಜದಲ್ಲಿ ಬದುಕುವ ಅನಿವಾರ್ಯತೆ ಒದಗಿದೆ. ದಿನೇದಿನೇ ಹೆಚ್ಚುತ್ತಿರುವ ಭ್ರಷ್ಟಾಚಾರ, ಕಪ್ಪುಹಣ, ತೆರಿಗೆಗಳ್ಳತನ, ಆರ್ಥಿಕ ಅಪರಾಧಗಳು, ಕಳ್ಳತನ, ವೇಶ್ಯಾವಾಟಿಕೆ, ಆತ್ಮಹತ್ಯೆ ಮುಂತಾದ ಸಾಮಾಜಿಕ ವಿಷಮತೆಗಳು ಹಣಕೇಂದ್ರಿತ ಸಮಾಜ ಹಬ್ಬಿಸುತ್ತಿರುವ ರೋಗಲಕ್ಷಣಗಳಷ್ಟೆ. ಇವನ್ನು ತತ್ಕಾಲಕ್ಕೆ ಮರೆಸಲು ಹೆಂಡದ ವ್ಯಾಪಾರ ಮತ್ತು ಮನೋರಂಜನೆಯ ಉದ್ಯಮಗಳು ನಿರಂತರವಾಗಿ ವಿಸ್ತರಿಸುತ್ತಲೇ ಇವೆ.


ಹಣಕಾಸು ಆರ್ಥಿಕತೆ

ಇಷ್ಟಾದರೂ, ಯಾರೇ ಆದರೂ, ಯಾವುದೇ ವೃತಿಯಲ್ಲಿದ್ದರೂ, ಆಹಾರ ಮತ್ತು ಜೀವನಾವಶ್ಯಕ ವಸ್ತುಗಳ ಉತ್ಪಾದನೆ, ವಿತರಣೆಯಿಲ್ಲದೆ ಬದುಕಲಾರರು. ಆದರೆ, ಸೇವೆಯ ವ್ಯಾಪಾರ ಸರಕಿನ ವ್ಯಾಪಾರಕ್ಕಿಂತ ಮುಖ್ಯವಾಗಿ, ದೈಹಿಕ ಮತ್ತು ಕೌಶಲಗಳನ್ನೊಳಗೊಂಡ ಶ್ರಮಶಕ್ತಿಯಿಂದ ಸಾಧ್ಯವಾಗುವ ಸರಕಿನ ಉತ್ಪಾದನೆಗಿಂತ ಪ್ರಧಾನವಾಗಿ ಕೌಶಲವೇ ಮುಖ್ಯವಾಗುವ ಸೇವೆಯ ಉತ್ಪಾದನೆಗೆ ಹೆಚ್ಚಿನ ಸಂಬಳ ದೊರೆಯುವಂತಾಗಿರುವುದರಿಂದ ಯುವಜನರು ಸಹಜವಾಗೇ ಕೌಶಲ ಮತ್ತು ಮೇಲ್ವಿಚಾರಣಾ ಉದ್ಯಮಗಳತ್ತ ಆಕರ್ಷಿತರಾಗಿದ್ದಾರೆ. ಆಹಾರದ ಉತ್ಪಾದನೆ ಹಿಂದೆ ಸರಿದು ಜೀವನಾಗತ್ಯವಸ್ತುಗಳಲ್ಲದ ಸರಕುಗಳ ಉತ್ಪಾದನೆ ಮೇಲುಗೈ ಪಡೆದಿದೆ. ಹಳ್ಳಿಯ ಹೊಲಗದ್ದೆಗಲ್ಲಿ ದುಡಿಯುವುದಕ್ಕಿಂತ ಅವನ್ನು ಮಾರಿ ಬಂದ ಹಣದಲ್ಲಿ ನಗರಗಳಲ್ಲಿ ಸುಖವಾಗಿ ಬದುಕಬೇಕೆನ್ನುವ ದೃಷ್ಟಿಕೋನ ಸಹಜವಾಗೇ ರೈತರನ್ನು ಆವರಿಸುತ್ತಿದೆ. ನಗರೀಕರಣದ ವಿಸ್ತರಣೆಯಾಗಿ ಸ್ಮಾರ್ಟ್ ಸಿಟಿಗಳು, ಮಾಲ್, ಹೈಟೆಕ್ ಆಸ್ಪತ್ರೆ, ಬ್ಯಾಂಕು, ವಿಮಾನ ನಿಲ್ದಾಣ, ಬುಲೆಟ್ ಟ್ರೈನು, ಮೆಟ್ರೋ, ಫ್ಲೈಓವರ್ ಚತುಷ್ಪಥ ರಸ್ತೆಗಳು, ಮುಂತಾದ ಬೃಹತ್ ಯೋಜನೆಗಳಿಗೆ ಜಾಗತಿಕ ಬ್ಯಾಂಕುಗಳು ಸಾಲಕೊಡಲು ತುದಿಗಾಲ ಮೇಲೆ ನಿಂತಿವೆ. ಇವುಗಳಿಂದ ಬರುವ ಲಾಭವನ್ನು ಪಡೆಯಲು ಜಾಗತಿಕ ಮತ್ತು ದೇಶೀಯ ಗುತ್ತಿಗೆದಾರರು, ಸಿಮೆಂಟ್ ಕಂಪೆನಿಗಳು, ಉದ್ದಿಮೆದಾರರು ಸರ್ಕಾರಗಳನ್ನೇ ತಮ್ಮ ನಿಯಂತ್ರಣದಲ್ಲಿ ಇಟ್ಟುಕೊಂಡಿವೆ. ಜಾಹಿರಾತುಗಳ ಮೂಲಕ ಬೃಹತ್ ಉದ್ದಿಮೆದಾರರ ನಿಯಂತ್ರಣದಲ್ಲಿ ಇರುವ ಸಮೂಹ ಮಾಧ್ಯಮಗಳು ಇದನ್ನೇ ಅಭಿವೃದ್ಧಿ ಎಂದು ಹಗಲಿರುಳೂ ಬಿಂಬಿಸುತ್ತಿವೆ. ಪರಿಸರ ನಾಶ, ಅಸಮತೋಲಿತ ಹವಾಮಾನ ವೈಪರೀತ್ಯಗಳು ಜನಸಾಮಾನ್ಯರ ಕಷ್ಟಗಳನ್ನು ಹೆಚ್ಚಿಸುತ್ತಲೇ ಇವೆ.

ಆಹಾರ ಧಾನ್ಯಗಳನ್ನು ಬೆಳೆಯಲು ಹೊಲ ಗದ್ದೆಗಳಿಗೇ ಹೋಗಿ ದೈಹಿಕ ಶ್ರಮವನ್ನು ಬಳಸದೆ ಬೇರೆ ದಾರಿಯಿಲ್ಲ. ಜೀವನಾಗತ್ಯ ವಸ್ತುಗಳನ್ನು ತಯಾರಿಸಲು ಕಾರ್ಖಾನೆ, ಉದ್ಯಮಗಳ ಕಾರ್ಯಾಗಾರದಲ್ಲಿ ಗಂಟೆಗಟ್ಟಲೆ ಬೆವರು ಸುರಿಸಿ ದುಡಿಯಬೇಕು. ಆದರೆ ಇವುಗಳ ವಿನಿಮಯ ಮಾಧ್ಯಮವಾದ ಹಣವನ್ನು ಮಾತ್ರ ಹೇಗಾದರೂ ಪಡೆಯಬಹುದು ಎಂಬ ಮನಸ್ಥಿತಿ ಯಾವುದೇ ಬಗೆಯ ಬಂಡವಾಳವಾದೀ ಸಮಾಜದಲ್ಲಿ ಸಾಧ್ಯ. ನೇರವಾಗಿ ಹಣವನ್ನೇ ಮುಖ್ಯ ಸರಕೆಂದು ಪರಿಗಣಿಸುವ ವ್ಯಾಪಾರ, ಲಾಭಕೋರತನ, ತೆರಿಗೆಗಳ್ಳತನ, ಸಾಲ, ಜೂಜು, ಮೋಸ, ಭ್ರಷ್ಟಾಚಾರ, ಆರ್ಥಿಕ ಅಪರಾಧಗಳು, ಲೇವಾದೇವಿ, ಲಾಟರಿ, ವಿಮೆ ಮುಂತಾದುವು ಹಣಕಾಸು ಬಂಡವಾಳದ ಆರ್ಥಿಕತೆಯಲ್ಲಿ ಸಹಜವೆನ್ನಿಸುವಷ್ಟು ಅನಿವಾರ್ಯವಾಗಿ ಇರುವಂಥವು. ಇಂಥ ಪರಿಸರದಲ್ಲಿ ಬದುಕುವ ಜನರಿಗೆ ಅದರಲ್ಲೂ ಎಳೆಯರಿಗೆ ಇವೆಲ್ಲಾ ಒಂದಲ್ಲ ಒಂದು ರೀತಿಯಲ್ಲಿ ಬದುಕಿನ ಅನಿವಾರ್ಯ ಅಗತ್ಯಗಳೆಂದೇ ತೋರುತ್ತವೆ.

ಈ ಘೋರ ಪರಿಣಾಮಗಳನ್ನು ಹತ್ತಿಕ್ಕಲು, ಹಿಮ್ಮೆಟ್ಟಿಸಲು ಹಣ ಕೇಂದ್ರಿತವಾದ ಹಣಕಾಸು ಆರ್ಥಿಕತೆಯನ್ನು ತಿರಸ್ಕರಿಸಿ ಜೀವನ ಕೇಂದ್ರಿತವಾದ ಸಮಾಜವಾದೀ ಆರ್ಥಿಕತೆಯನ್ನು ಜಾರಿಗೆ ತರುವುದೊಂದೇ ದಾರಿ. ಶ್ರಮಿಕರ ಕೈಗೆ ರಾಜ್ಯಾಧಿಕಾರ ಸಿಗದ ಹೊರತು ಹಣಕಾಸು ಆರ್ಥಿಕತೆಯನ್ನು ಬದಲಿಸಲಾಗುವುದಿಲ್ಲ. ಹಣ ತಾನೇ ಸರಕಾಗದೆ, ಆಹಾರ ಮತ್ತು ಜೀವನಾಗತ್ಯ ವಸ್ತುಗಳ ವಿನಿಮಯ ಮಾಧ್ಯಮವಾಗಿ ಉಳಿಯುವುದು ಶ್ರಮಿಕರ ಆಳ್ವಿಕೆಯ ಸಮಾಜವಾದೀ ಸಮಾಜದಲ್ಲಿ ಮಾತ್ರ ಸಾಧ್ಯ.

ಮೊಂಕಾಡಾ ಬ್ಯಾರಕ್ ಮೇಲೆ ದಾಳಿಗೆ ಸಿದ್ಧತೆ




ಕ್ಯಾಸ್ಟ್ರೋ ಕಥೆ–8

ಬಟಿಸ್ಟಾನ ಕ್ಷಿಪ್ರದಂಗೆಯ ನಂತರ ಆತನ ಸರ್ವಾಧಿಕಾರಿ ದಾಳಿಗಳು, ಕೊಲೆಗಳು ತೀವ್ರಗೊಂಡವು. ಕ್ರಾಂತಿಕಾರಿ ಸದಸ್ಯರು, ಕಮ್ಯುನಿಸ್ಟ್ ಪಕ್ಷದ ಕಾರ್ಯಕರ್ತರು ಮತ್ತು ಸಾಮ್ರಾಜ್ಯಶಾಹಿ ವಿರೋಧಿ ಚಟುವಟಿಕೆಗಳನ್ನು ನಿರ್ದಯವಾಗಿ ಹತ್ತಿಕ್ಕಲಾಯಿತು. ಬಟಿಸ್ಟಾನನ್ನು ಎದುರಿಸುವವರು ಯಾರೂ ಇಲ್ಲವೇನೋ ಎಂಬ ಪರಿಸ್ಥಿತಿ ನಿರ್ಮಾಣಗೊಂಡಿತು. ಕೊಲಂಬಿಯಾ ಮಿಲಿಟರಿ ನೆಲೆಯನ್ನು ವಶಪಡಿಸಿಕೊಳ್ಳುವ ವಿಚಾರ ಈ ರೀತಿಯಾದಾಗ ಹವಾನಾದಿಂದ ದೂರದ ಸ್ಯಾಂ–ಟಿಯಾಗೊ ಡಿ ಕ್ಯೂಬಾ ಪ್ರದೇಶದಲ್ಲಿ ಇಂತಹ ಕಾರ್ಯಾಚರಣೆ ನಡೆಸುವ ಕುರಿತು ಫಿಡೆಲ್ ತೀರ್ಮಾನಕ್ಕೆ ಬಂದರು. ಇದಕ್ಕಾಗಿ ಸ್ವಯಂಸೇವಕ ಯೋಧರನ್ನು ಸಿದ್ಧಪಡಿಸುವ ಬೃಹತ್ ಕಾರ್ಯವನ್ನು ಫಿಡೆಲ್ ಕೈಗೊಂಡರು. ಒಟ್ಟು 1200 ಯುವಕರನ್ನು ಕಲೆಹಾಕಿದರು. ಹವಾನಾದಿಂದ 1000 ಕಿ.ಮೀ. ದೂರದ ಸ್ಯಾಂಟಿಯಾಗೊ ಪ್ರದೇಶದ ಮೊಂಕಾಡಾ ಮಿಲಿಟರಿ ಬ್ಯಾರಕ್‌ಗಳ ಮೇಲೆ ದಾಳಿ ನಡೆಸಿ ಅಪಾರ ಪ್ರಮಾಣದ ಶಸ್ತ್ರಾಸ್ತ್ರಗಳನ್ನು ವಶಪಡಿಸಿಕೊಳ್ಳುವ ಯೋಜನೆಯನ್ನು ರೂಪಿಸಿದರು. ಇಂತಹ ದಾಳಿಯನ್ನು ನಡೆಸಲು 1953 ಜುಲೈ 26ರ ದಿನಾಂಕವನ್ನು ನಿಗದಿಪಡಿಸಿದರು. ಇದು ಮುಂದೆ ಜುಲೈ 26 ರ ಚಳುವಳಿಯೆಂದೇ ಪ್ರಖ್ಯಾತವಾಯಿತು.

ಬಟಿಸ್ಟಾ ಕ್ಷಿಪ್ರ ದಂಗೆ ನಡೆಸಬಹುದೆಂಬ ಅನುಮಾನ ಫಿಡೆಲ್‌ಗೆ ಬಂದಿತ್ತು. ತಮ್ಮ ಅನುಮಾನಗಳನ್ನು ಆರ್ಥೋಡಕ್ಸ್ ಪಕ್ಷದ ನಾಯಕರ ಗಮನಕ್ಕೆ ತಂದರು. ಆದರೆ ಅದನ್ನು ಗಂಭೀರವಾಗಿ ಮತ್ತು ವಸ್ತುನಿಷ್ಠವಾಗಿ ಪರಿಶೀಲಿಸಲು ಅವರಿಗೆ ಆಗಲಿಲ್ಲ. ಬಟಿಸ್ಟಾನ ಕ್ಷಿಪ್ರದಂಗೆಯ ನಂತರ ಆತನ ಸರ್ವಾಧಿಕಾರಿ ದಾಳಿಗಳು, ಕೊಲೆಗಳು ತೀವ್ರಗೊಂಡವು. ಕ್ರಾಂತಿಕಾರಿ ಸದಸ್ಯರು, ಕಮ್ಯುನಿಸ್ಟ್ ಪಕ್ಷದ ಕಾರ್ಯಕರ್ತರು ಮತ್ತು ಸಾಮ್ರಾಜ್ಯಶಾಹಿ ವಿರೋಧಿ ಚಟುವಟಿಕೆಗಳನ್ನು ನಿರ್ದಯವಾಗಿ ಹತ್ತಿಕ್ಕಲಾಯಿತು. ಬಟಿಸ್ಟಾನನ್ನು ಎದುರಿಸುವವರು ಯಾರೂ ಇಲ್ಲವೇನೋ ಎಂಬ ಪರಿಸ್ಥಿತಿ ನಿರ್ಮಾಣಗೊಂಡಿತು.

ಇಂತಹ ಸಂದರ್ಭದಲ್ಲಿ ವಿಶ್ವವಿದ್ಯಾಲಯದ ಪ್ರಾಧ್ಯಾಪಕರಾದ ರಫಾಯಲ್ ಗಾರ್ಸಿಯಾ ಬಾರ್ಸೆನಾ ಎಂಬುವರು ಫಿಡೆಲ್‌ರೊಂದಿಗೆ ಮಾತನಾಡಲು ಬಂದರು. ಹವಾನಾದಲ್ಲಿರುವ ಕೊಲಂಬಿಯಾ ಮಿಲಿಟರಿ ನೆಲೆಯನ್ನು ಕಬ್ಜ ಮಾಡುವ ಬಗ್ಗೆ ಕ್ಯಾಸ್ಟ್ರೋ ಬಳಿ ಗುಪ್ತವಾಗಿ ಮಾತನಾಡಿದರು. ಈ ವಿಷಯದ ಮಹತ್ವವನ್ನು ಗ್ರಹಿಸಿದ ಫಿಡೆಲ್ ಅದ–ರಿಂದ ಆಗಬಹುದಾದ ಅಪಾಯಗಳನ್ನು ಮನಗಂಡು ಈ ವಿಷಯವನ್ನು ಬೇರೆ ಯಾರೊಂದಿಗೂ ಮಾತನಾಡದಿರಲು ಅವರಿಗೆ ಸೂಚಿಸಿದರು. ಏಕೆಂದ–ರೆ ಅಂತಹ ಕೆಲಸವನ್ನು ಸಾಧಿಸಬಹುದಾದ ಪರಿಸ್ಥಿತಿ ಯಾವುದೇ ಗುಂಪಿಗೂ ಸದ್ಯ ಸಾಧ್ಯವಿರಲಿಲ್ಲ. ಅದನ್ನು ಗುಪ್ತವಾದ ಕಾರ್ಯಾಚರಣೆಯಿಂದ ಸಾಧಿಸಬಹುದು ಎಂದು ವಿವರಿಸಿದರು. ಆದರೆ ಆ ಮನುಷ್ಯ ಅದಕ್ಕೆ ವಿರುದ್ಧವಾದುದನ್ನೇ ಮಾಡಿದರು. ಕೆಲವೇ ದಿನಗಳಲ್ಲಿ ಇಪ್ಪತ್ತಕ್ಕೂ ಹೆಚ್ಚು ಸಂಘಟನೆಗಳೊಂದಿಗೆ ಈ ವಿಚಾರ ಹಂಚಿಕೊಂಡರು. ಸೈನ್ಯವನ್ನೂ ಒಳಗೊಂಡು ಹವಾನಾ ತುಂಬೆಲ್ಲಾ ಈ ಸಂಗತಿ ಬಹಿರಂಗವಾಯ್ತು.



ಈ ಪ್ರೊಫೆಸರ್‌ನನ್ನೂ ಒಳಗೊಂಡು ಉಳಿದೆಲ್ಲರನ್ನೂ ಸರ್ಕಾರ ಜೈಲಿಗೆ ಅಟ್ಟಿತು.

50 ಸಾವಿರ ಕಿ,ಮಿ. ಸುತ್ತಿ
1200 ಗೆರಿಲ್ಲಾ ಸೈನಿಕರ ಆಯ್ಕೆ

ಕೊಲಂಬಿಯಾ ಮಿಲಿಟರಿ ನೆಲೆಯನ್ನು ವಶಪಡಿಸಿಕೊಳ್ಳುವ ವಿಚಾರ ಈ ರೀತಿಯಾದಾಗ ಹವಾನಾದಿಂದ ದೂರದ ಸ್ಯಾಂಟಿಯಾಗೊ ಡಿ ಕ್ಯೂಬಾ ಪ್ರದೇಶದಲ್ಲಿ ಇಂತಹ ಕಾರ್ಯಾಚರಣೆ ನಡೆಸುವ ಕುರಿತು ಫಿಡೆಲ್ ತೀರ್ಮಾನಕ್ಕೆ ಬಂದರು. ಇದಕ್ಕಾಗಿ ಸ್ವಯಂಸೇವಕ ಯೋಧರನ್ನು ಸಿದ್ಧಪಡಿಸುವ ಬೃಹತ್ ಕಾರ್ಯವನ್ನು ಫಿಡೆಲ್ ಕೈಗೊಂಡರು. ಯುವಕರನ್ನು ಪರಿವರ್ತಿಸುವ ಮತ್ತು ಆ ರೀತಿ ಮಾಡಲು ಬೇಕಾದ ಭಾಷಣ ಕಲೆಯನ್ನು ಸಿದ್ಧಿಸಿಕೊಂಡಿದ್ದರು. ಪ್ರತಿಯೊಬ್ಬ ಯೋಧನ ಉದ್ದೇಶ, ತಿಳಿವಳಿಕೆ, ಸಂಘಟನಾ ತತ್ವಗಳ ಒಪ್ಪಿಗೆ, ಮಾಡಬೇಕಾದ ಕೆಲಸ, ರೀತಿ–ನೀತಿಗಳು ಪ್ರತಿಯೊಂದನ್ನೂ ಖುದ್ದಾಗಿ ಫಿಡೆಲ್ ಪರಿಶೀಲಿಸಿದರು. ದೂರ ಪೂರ್ವದ ಮೊಂಕಾಡಾ ಬ್ಯಾರಕ್‌ಗಳ ಮೇಲೆ ಮಾಡಬೇಕಾದ ದಾಳಿಯ ನೀಲನಕ್ಷೆಯ ಆಧಾರದಲ್ಲಿ ಫಿಡೆಲ್ ತಯಾರಿ ಆರಂಭಿಸಿದರು.

ಇಂತಹ ಕೆಲಸಕ್ಕೆ ಆಧಾರವೇನು? ಈ ಕೆಲಸವನ್ನು ಮಾಡುವ ಶಕ್ತಿಗಳು ಯಾವುವು? ಯೋಧರು ಯಾರು? ಎಷ್ಟು ಜನ? ಕಾರ್ಮಿಕ ವರ್ಗದವರು, ಕೂಲಿಕಾರರು, ಕೆಳವರ್ಗಗಳು, ಬಡವರು ಮತ್ತು ದುರ್ಬಲರು, ಗ್ರಾಮಾಂತರದ ಶೋಷಿತರು ಇಂತಹವರ ನಡುವಿನಿಂದ ಪಡೆಗಳನ್ನು ರೂಪಿಸಲು ತೀರ್ಮಾನಿಸಿದರು. ಆ ಸಂದರ್ಭಕ್ಕೆ ಕ್ಯೂಬಾದಲ್ಲಿ ಹೇಳಿಕೊಳ್ಳುವಂತಹ ವರ್ಗ ಪ್ರಜ್ಞೆಯೇನೂ ಹೆಚ್ಚಾಗಿರಲಿಲ್ಲ. ಆದರೆ ವರ್ಗ ಸಹಜ ಗುಣವಿತ್ತಲ್ಲ, ಅದನ್ನು ಬಳಸಲು ಯೋಜಿಸಿದರು. ಮೊದಲಿಗೆ ಕೆಲವೇ ಗುಂಪುಗಳನ್ನು ರಚಿಸಿದರು. ಕ್ರಮೇಣ ಕಳ್ಳತನ, ಹಣದ ದುರುಪಯೋಗ, ನಿರುದ್ಯೋಗ, ಅನ್ಯಾಯ ಮುಂತಾದವುಗಳ ವಿರುದ್ಧವಾಗಿದ್ದ ಯುವಜನರನ್ನು ಗುರುತಿಸಿದರು. ಇವರಿಗೆಲ್ಲಾ ಇದ್ದ ಸಾಮಾನ್ಯ ಕೋಪವೇನೆಂದರೆ ಇಂತಹ ಸಮಸ್ಯೆಗಳಿಗೆಲ್ಲಾ ಕೆಟ್ಟ ರಾಜಕಾರಣಿಗಳೇ ಕಾರಣಕರ್ತರು ಎಂಬುದು. ಬಂಡವಾಳಶಾಹಿ ವ್ಯವಸ್ಥೆಯೇ ಈ ಸಮಸ್ಯೆಗಳಿಗೆ ಮೂಲವೆಂದು ಗುರುತಿಸುವ ಪರಿಸ್ಥಿತಿಯಲ್ಲಿರಲಿಲ್ಲ. ಹೀಗಾಗಿ ಫಿಡೆಲ್ ನೇಮಿಸಿಕೊಂಡವರಲ್ಲಿ ಆರ್ಥೋಡಕ್ಸ್ ಪಕ್ಷದಲ್ಲಿದ್ದವರು, ಬಟಿಸ್ಟಾ ವಿರೋಧಿಗಳು, ಅತ್ಯಂತ ಪ್ರಾಮಾಣಿಕರಿದ್ದರು. ಆದರೆ ಅವರಿಗೆ ರಾಜಕೀಯ ಶಿಕ್ಷಣವಿರಲಿಲ್ಲ. ವರ್ಗ ಗುಣವಿತ್ತು, ಆದರೆ ವರ್ಗ ಪ್ರಜ್ಞೆಯಿರಲಿಲ್ಲ.

ಫಿಡೆಲ್ ತಮ್ಮ ಯೋಜನೆಯನ್ನು ಜಾರಿಗೊಳಿಸಲು ಕ್ಷಿಪ್ರವಾಗಿ ಕಾರ್ಯಾಚರಣೆಗೆ ಇಳಿದರು. ಪ್ರಾರಂಭದಲ್ಲಿ ತಮ್ಮ ಹೋರಾಟದ ಪಡೆಗಳಿಗೆ ಯುವಕರನ್ನು ಸೇರಿಸಿಕೊಳ್ಳುವಾಗ ಮತ್ತು ತರಬೇತಿ ನೀಡುವಾಗ ಕ್ರಾಂತಿ ಮಾಡುವ ಉದ್ದೇಶವಿರಲಿಲ್ಲ. ಮಾರ್ಚ್ 10, 1952ಕ್ಕೂ ಮೊದಲು ಇದ್ದ ಸಂವಿಧಾನಿಕ ಪರಿಸ್ಥಿತಿಯನ್ನು ಪುನಃ ಸ್ಥಾಪಿಸುವುದು ಉದ್ದೇಶವಾಗಿತ್ತು. ಬಟಿಸ್ಟಾ ವಿರೋಧಿ ಶಕ್ತಿಗಳ ಜೊತೆ ಸೇರಿ ಹೋರಾಡುವ ಉದ್ದೇಶವಿತ್ತು. ಫಿಡೆಲ್ ಆರ್ಥೋಡಕ್ಸ್ ಪಕ್ಷದಲ್ಲಿದ್ದ ಸಂಪರ್ಕಗಳನ್ನು ಬಳಸಿಕೊಂಡು ಬಟಿಸ್ಟಾ ವಿರೋಧಿಯಾಗಿದ್ದ ಅಸಂಖ್ಯಾತ ಯುವಕರನ್ನು ಆಕರ್ಷಿಸಿದರು. ಒಟ್ಟು 1200 ಯುವಕರನ್ನು ಕಲೆಹಾಕಿದರು. ಉತ್ಸಾಹಿ, ಧೈರ್ಯಶಾಲಿ ಯುವಕರಾಗಿದ್ದ ಇವರು ಇಪ್ಪತ್ನಾಲ್ಕು ವರ್ಷಕ್ಕಿಂತ ಹೆಚ್ಚಿನ ವಯಸ್ಸಿನವರಾಗಿರಲಿಲ್ಲ. ಮೂವತ್ತು ವರ್ಷಕ್ಕೆ ಮೇಲ್ಪಟ್ಟವರು ಕೇವಲ ಇಬ್ಬರು ಮಾತ್ರವಿದ್ದರು. ದೇಶದ ಎಲ್ಲಾ ಭಾಗಗಳಿಂದಲೂ ಅಣಿನೆರೆಸಿದ ಯುವಕರೊಂದಿಗೆ ವೈಯುಕ್ತಿಕವಾಗಿ ಪ್ರತಿಯೊಬ್ಬರ ಜೊತೆಯೂ ಫಿಡೆಲ್ ಮಾತನಾಡಿದರು. ಈ ಚರ್ಚೆ ಮೂಲಭೂತವಾಗಿ ರಾಜಕೀಯ ಸ್ವರೂಪದ್ದಾಗಿತ್ತು. ಆದರೆ ಮೊಂಕಾಡಾ ದಾಳಿಯ ಯಾವುದೇ ನಿರ್ದಿಷ್ಟ ಯೋಜನೆಗಳನ್ನು ಬಹಿರಂಗಗೊಳಿಸಲಿಲ್ಲ. ತಮ್ಮ ಪಡೆಗೆ ಎಲ್ಲ ರೀತಿಯ ಶಿಸ್ತಿನ ತರಬೇತಿಯನ್ನು ನೀಡುತ್ತಲೇ ದಾಳಿಗೆ ಬೇಕಾದ ತಯಾರಿ ಕೆಲಸಗಳಿಗಾಗಿ ಫಿಡೆಲ್ ತಮ್ಮ ಷವರ್ಲೆ ಕಾರಿನಲ್ಲಿ 50 ಸಾವಿರ ಕಿ.ಮೀ. ಪ್ರಯಾಣ ಮಾಡಿದ್ದರು. ಈ ಕಾರನ್ನು ಕಂತುಗಳಲ್ಲಿ ಹಣಕಟ್ಟುವ ಆಧಾರದಲ್ಲಿ ಕೊಂಡಿದ್ದರು. ಹಲವು ಬಾರಿ ಕಂತುಗಳನ್ನು ಕಟ್ಟಲಾಗದೆ ಅಬೆಲ್ ಮತ್ತು ಮಾಂಟೇನ್ ತಮ್ಮ ಹಣದಿಂದ ಪಾವತಿಸಿ ರಕ್ಷಿಸುವಂತಾಗಿತ್ತು. ಫಿಡೆಲ್ ಬಳಿಯಿದ್ದ ಹಣ ಪೆಟ್ರೋಲ್, ಮನೆ ಬಾಡಿಗೆ ಮತ್ತು ಇತರೆ ಖರ್ಚುಗಳಿಗೆ ಸಾಕಾಗುತ್ತಿರಲಿಲ್ಲ.

ಶ್ರೀಮಂತರ ಕ್ಲಬ್ ಗಳಲ್ಲಿ
ಗೆರಿಲ್ಲಾಗಳಿಗೆ ಬಂದೂಕು ತರಬೇತಿ !

ಮಾರ್ಕ್ಸ್‌ನ ಜೀವನ ಚರಿತ್ರೆಯ ಪುಸ್ತಕವನ್ನು ಓದುವುದು ಮತ್ತು ಚರ್ಚಿಸುವ ಹಿನ್ನೆಲೆಯಲ್ಲಿ ಗ್ವಾನಬೊ ಎಂಬ ಜಾಗದಲ್ಲಿ ಒಂದು ಸಣ್ಣ ಬಾಡಿಗೆ ಮನೆ ಹಿಡಿದು ಮಾರ್ಕ್ಸಿಸ್ಟ್ ಸ್ಟಡಿ ಸರ್ಕಲ್ ನಡೆಸಲು ಪ್ರಾರಂಭಿಸಿದರು. ಇದರ ಪರಿಣಾಮದ ಬಗ್ಗೆ ಫಿಡೆಲ್ ಹೀಗೇಳಿದ್ದಾರೆ : 'ನಾನು ಒಂದು ಸಂಗತಿ ಕಂಡು–ಕೊಂಡೆ. ಅಂದಿನ ಸಂದರ್ಭಕ್ಕೆ ಜಗತ್ತಿನಲ್ಲೇ ಸುಲಭದ ಸಂಗತಿಯೆಂದರೆ, ಯಾರನ್ನಾದರು ಮಾರ್ಕ್ಸ್‌ವಾದಕ್ಕೆ ಪರಿವರ್ತಿಸುವುದು'. ಈ ರೀತಿಯಾಗಿ ಫ್ರಾಂಕ್ ಪಾಯ್ಸ್, ಮಾರ್ಟಿನೆಜ್ ಅರರಾಸ್, ಕ್ಯಾಮಿಲೊ ಸಿಯೆನ್‌ಫ್ಯೂಗೋಸ್ ಮತ್ತು ರಾಲ್ ಇವರೆಲ್ಲರೂ ಸೇರ್ಪಡೆಯಾದರು. ಇವರ್‍ಯಾರೂ ಕ್ರಮಬದ್ಧ ಸೈನಿಕ ತರಬೇತಿಯನ್ನು ಮಿಲಿಟರಿ ಅಕಾಡೆಮಿಗಳಲ್ಲಿ ವಿದ್ಯಾಭ್ಯಾಸವನ್ನು ಮಾಡಿರಲಿಲ್ಲ. ಇವರೆಲ್ಲಾ ಮಾರ್ಕ್ಸ್, ಲೆನಿನ್, ಮಾರ್ತಿ ಇವರನ್ನು ಅರ್ಥಮಾಡಿಕೊಳ್ಳದೇ ಇದ್ದಿದ್ದರೆ ತಮ್ಮ ಕೆಲಸ ಅಸಾಧ್ಯವಾಗುತ್ತಿತ್ತು ಎಂದು ಫಿಡೆಲ್ ಹೇಳಿದ್ದಾರೆ. ಹೀಗಿದ್ದಾಗಲೂ ಫಿಡೆಲ್ ಕಮ್ಯುನಿಸ್ಟ್ ಪಕ್ಷದ ಸದಸ್ಯರಾಗಿರಲಿಲ್ಲ. ಇದನ್ನು ಪ್ರಜ್ಞಾಪೂರ್ವಕವಾಗಿ ಲೆಕ್ಕಾಚಾರ ಮಾಡಿ ತೀರ್ಮಾನಿಸಿದ್ದರು.

ಫಿಡೆಲ್ ತಾವು ಸಂಘಟಿಸಿದ ಪಡೆಗೆ ತರಬೇತಿ ನೀಡಿದ ವಿಚಾರವು ವಿಶೇಷವಾದುದು. ಬಹಿರಂಗವಾಗಿ ಸೈನಿಕ ತರಬೇತಿ, ಬಂದೂಕು ಬಳಕೆ ಅಸಾಧ್ಯವಾಗಿತ್ತು. ಹವಾನಾ ವಿಶ್ವವಿದ್ಯಾಲಯವು ಸಾಕಷ್ಟು ಸ್ವಾಯತ್ತ ಲಕ್ಷಣಗಳನ್ನೂ ಹೊಂದಿದ್ದರಿಂದ ಪೆಡ್ರೋ ಮಿರೆಟ್‌ರವರ ಸಹಾಯ ಪಡೆದುಕೊಂಡು ಬಂದೂಕುಗಳ ಜೋಡಣೆ ಮತ್ತು ಮರುಜೋಡಣೆ ತರಬೇತಿ ಹೆಸರಿನಲ್ಲಿ ಕೆಲಸ ಪ್ರಾರಂಭಿಸಿದರು. ಹೊರಗಿನವರಿಗೆ ಇದು ಕ್ರೀಡಾ ತರಬೇತಿ ನೀಡುತ್ತಿರುವಂತೆ ಕಾಣುತ್ತಿತ್ತು. ಆರು, ಎಂಟು, ಹತ್ತು ಅಥವಾ ಹನ್ನೆರೆಡು ಜನರ ಗುಂಪುಗಳನ್ನು ರೂಪಿಸಿ ಅದಕ್ಕೊಬ್ಬ ನಾಯಕನನ್ನು ನೇಮಿಸಿದರು. ಫಿಡೆಲ್ ರಾಜಕೀಯ ಮತ್ತು ಸಂಘಟನಾ ಕೆಲಸಗಳನ್ನು ಮಾಡಿದರು. ವಿಶ್ವವಿದ್ಯಾಲಯದ ತರಬೇತಿ ಸ್ಥಳದಲ್ಲಿ ಫಿಡೆಲ್ ಒಮ್ಮೆಯೂ ಬಹಿರಂಗವಾಗಿ ಕಾಣಿಸಿಕೊಳ್ಳಲೇ ಇಲ್ಲ. ಒಂದು ರೀತಿ ಭೂಗತರಾಗಿದ್ದರು. ಬಟಿಸ್ಟಾ ಮತ್ತು ಪರವಾದ ಸಂಘಟನೆಗಳ ಗಮನಕ್ಕೆ ಬಾರದಂತೆ ನಿರ್ವಹಣೆ ಮಾಡಿದರು. ಪೆಡ್ರೊ ಮಿರೆಟ್ ಇಂಜಿನಿಯರಿಂಗ್ ವಿದ್ಯಾರ್ಥಿಯಾಗಿದ್ದ. ಆದರೆ ಆತನೂ ಮಿಲಿಟರಿ ತರಬೇತಿ ಹೊಂದಿರಲಿಲ್ಲ. ಹೀಗಾಗಿ ಬಂದೂಕುಗಳನ್ನು ಉಪಯೋಗಿಸುವ ಮತ್ತು ಗುಂಡು ಹಾರಿಸುವ ತರಬೇತಿಯನ್ನು ಮತ್ತೊಂದು ಸ್ಥಳದಲ್ಲಿ ಪಡೆಯಲು ಯೋಜನೆ ರೂಪಿಸಿದರು. ಅದಕ್ಕಾಗಿ ಹವಾನಾದ ಶ್ರೀಮಂತರ ಕ್ಲಬ್‌ಗಳನ್ನು ಆಯ್ಕೆ ಮಾಡಿಕೊಂಡರು. ಶ್ರೀಮಂತರ ವೇಷಭೂಷಣಗಳನ್ನು ಧರಿಸಿ, ಅವರ ಹಾವ–ಭಾವಗಳನ್ನು ಅನುಕರಿಸಿ ಇಂತಹ ಕ್ಲಬ್‌ಗಳಲ್ಲಿ ಸದಸ್ಯರಾಗುವುದು ಒಂದು ತಂತ್ರವಾಗಿ ಅನುಸರಿಸಲಾಯಿತು. ಅಂತಹ ಕ್ಲಬ್‌ಗಳು ತಮ್ಮ ಸದಸ್ಯರು ಮಣ್ಣಿನ ಪಾರಿವಾಳಗಳನ್ನು ಗುರಿಯಿಟ್ಟು ಕೊಲ್ಲುವ ತರಬೇತಿಗೆ ಆಹ್ವಾನಿಸುತ್ತಿದ್ದವು. ಈ ವಿಧಾನವನ್ನು ಬಳಸಿ 1200 ಜನರೂ ಸಹ ಕಾನೂನುಬದ್ಧವಾಗಿ ಬಂದೂಕು ಬಳಸುವ ತರಬೇತಿಯನ್ನು ಪಡೆದುಕೊಂಡರು. ಬಟಿಸ್ಟಾನ ಪಡೆಗಳು ಇಂತಹ ಪ್ರಯತ್ನಗಳನ್ನು ಗಮನಹರಿಸಲು ಆಗಲಿಲ್ಲ. ಏಕೆಂದರೆ ಇವರ ಬಳಿ ಬಿಡಿಗಾಸೂ ಇರಲಿಲ್ಲ. ಜೊತೆಗೆ ಫಿಡೆಲ್ ಅಂತಹ ಕ್ಲಬ್‌ಗಳ ಬಳಿ ಎಂದಿಗೂ ಕಾಣಿಸಿಕೊಳ್ಳಲಿಲ್ಲ.

160 ಗೆರಿಲ್ಲಾಗಳು ದಾಳಿಗೆ ಸಿದ್ಧ

ಹಿಂದೆ ಹೇಳಿದ ಹಾಗೆ ಫಿಡೆಲ್ ತಮ್ಮ ಮನೆಯಲ್ಲಿಯೇ ಬಂದೂಕು ಬಳಸುವುದನ್ನು ಕಲಿತಿದ್ದರು. ಜೊತೆಗೆ 'ಬೊಗೊಟಾಜ್ಹೊ'ದಲ್ಲಿ ಮತ್ತು ಕೇಯೋ ಕಾನ್ಫೈಟ್ಸ್‌ನಲ್ಲಿ ಒಂದು ರೀತಿಯ ಮಿಲಿಟರಿ ತರಬೇತಿಯನ್ನು ಹೊಂದಲು ಸಾಧ್ಯವಾಗಿತ್ತು. ಫಿಡೆಲ್ ಒಬ್ಬ ಅತ್ಯುತ್ತಮ ಗುರಿಕಾರರಾಗಿದ್ದರು.

ಹವಾನಾದಿಂದ 1000 ಕಿ.ಮೀ. ದೂರದ ಸ್ಯಾಂಟಿಯಾಗೊ ಪ್ರದೇಶದ ಮೊಂಕಾಡಾ ಮಿಲಿಟರಿ ಬ್ಯಾರಕ್‌ಗಳ ಮೇಲೆ ದಾಳಿ ನಡೆಸಿ ಅಪಾರ ಪ್ರಮಾಣದ ಶಸ್ತ್ರಾಸ್ತ್ರಗಳನ್ನು ವಶಪಡಿಸಿಕೊಳ್ಳುವ ಯೋಜನೆಯನ್ನು ರೂಪಿಸಿದರು. ಇಂತಹ ದಾಳಿಯನ್ನು ನಡೆಸಲು 1953 ಜುಲೈ 26ರ ದಿನಾಂಕವನ್ನು ನಿಗದಿಪಡಿಸಿದರು. ಇದು ಮುಂದೆ ಜುಲೈ 26 ರ ಚಳುವಳಿಯೆಂದೇ ಪ್ರಖ್ಯಾತವಾಯಿತು. ಜುಲೈ 26 ರಂದು ದಾಳಿ ಮಾಡಲು ಒಂದು ದಿನ ಮೊದಲೇ ಸ್ಯಾಂ–ಟಿಯಾಗೊ ಹೊರಗಿನ ಸಿಬೋನಿ ಫಾರ್ಮ್‌ನಲ್ಲಿ ಸಣ್ಣ ಗುಂಪುಗಳಾಗಿ, ಗುಪ್ತವಾಗಿ ಬಂದು ಸೇರುವುದೆಂದು ತೀರ್ಮಾನಿಸಲಾಗಿತ್ತು. ದಾಳಿಯ ಮೂರು ತಿಂಗಳ ಮೊದಲು ಈ ಫಾರ್ಮ್‌ನ್ನು ಬಾಡಿಗೆಗೆ ಪಡೆಯಲಾಗಿತ್ತು. ಈ ಫಾರ್ಮ್‌ನ ಜಾಗ ವ್ಯೂಹಾತ್ಮಕವಾಗಿತ್ತು. ಸ್ಪೈನ್ ಮತ್ತು ಅಮೇರಿಕಾದ ನಡುವಿನ ಯುದ್ಧದಲ್ಲಿ ಅಮೇರಿಕನ್ ಸೈನ್ಯ ಇಲ್ಲೇ ಬಿಡಾರ ಬಿಟ್ಟಿತ್ತು. ಜುಲೈ 25 ರ ರಾತ್ರಿ ಫಿಡೆಲ್ ಇಲ್ಲಿಗೆ ತಲುಪಿದರು. ಈ ದಾಳಿಯಲ್ಲಿ ಪಾಲ್ಗೊಳ್ಳಲು ಒಟ್ಟು 160 ಜನರನ್ನು ಆಯ್ಕೆ ಮಾಡಲಾಗಿತ್ತು. ಇದರಲ್ಲಿ 40 ಜನರನ್ನು ಬಯಾಮೋ ಬ್ಯಾರಕ್‌ಗಳ ಮೇಲಿನ ದಾಳಿಗೆಂದು ನಿಯೋಜಿಸಲಾಗಿತ್ತು. 160 ಜನರು 16 ಕಾರುಗಳಲ್ಲಿ ಬಂದಿದ್ದರು. ಸ್ಯಾಂಟಿಯಾಗೊದ ಯುವಕ ರೆನಾಟೊ ಗಿಟಾರ್ಟ್‌ನನ್ನು ಹೊರತುಪಡಿಸಿ ಬೇರಾರಿಗೂ ಯಾತಕ್ಕಾಗಿ ಇಲ್ಲಿ ಸೇರಿದ್ದೇವೆ ಎಂಬ ನಿರ್ದಿಷ್ಟ ಕಾರ್ಯಕ್ರಮ ತಿಳಿದಿರಲಿಲ್ಲ. ಈ ದಾಳಿಯಲ್ಲಿ ಉಪಯೋಗಿಸಬೇಕಾದ ಶಸ್ತ್ರಾಸ್ತ್ರಗಳನ್ನು ಜುಲೈ 24ರ ಮಧ್ಯಾಹ್ನವೇ ತರಲಾಗಿತ್ತು. ಜುಲೈ 25 ಸ್ಯಾಂಟಿಯಾಗೋದಲ್ಲಿ ಹಬ್ಬವಿತ್ತು. ಆ ಸಂದರ್ಭದಲ್ಲಿ ಸಂಗೀತ, ನೃತ್ಯ, ಅಬ್ಬರವಿರುವುದರಿಂದ ತಮ್ಮ ಕಾರ್ಯಾಚರಣೆಗೆ ಪ್ರಶಸ್ತವಾದ ದಿನವೆಂದು ಯೋಜಿಸಿದ್ದರು. ಇದೇ ಕಾರಣಕ್ಕಾಗಿ ಬಟಿಸ್ಟಾ ಸರ್ಕಾರ ಹೆಚ್ಚಿನ ಪಡೆಗಳನ್ನು ನಿಯೋಜಿಸಿತ್ತು. ಈ ಅಂಶವನ್ನು ಲೆಕ್ಕಾಚಾರ ಮಾಡುವಲ್ಲಿ ಫಿಡೆಲ್ ಎಡವಿದ್ದರು. ಮೊಂಕಾಡಾ ಬ್ಯಾರಕ್‌ಗಳ ಮೇಲಿನ ದಾಳಿಯ ಜೊತೆ ಬಯಾಮೊ ಬ್ಯಾರಕ್‌ಗಳ ಮೇಲೂ ದಾಳಿಯನ್ನು ಸಂಘಟಿಸಿದ್ದರು. ಇದನ್ನು ರಕ್ಷಣಾತ್ಮಕ ಲೆಕ್ಕಾಚಾರಗಳಿಂದ ಮಾಡಲಾಗಿತ್ತು. ತಮ್ಮ ಮೇಲಿನ ಪ್ರತಿದಾಳಿಗಳನ್ನು ಎದುರಿಸಲು ಇದನ್ನು ಯೋಜಿಸಿದ್ದರು. ಮೊಂಕಾಡಾ ದಾಳಿಯ ವಿರುದ್ಧ ಬಟಿಸ್ಟಾನ ಪಡೆಗಳು ಬರುವುದಾದರೆ ಬಯಾಮೊದ ಉತ್ತರಕ್ಕಿರುವ ಕಾಟೋ ನದಿಗೆ ಅಡ್ಡಲಾಗಿದ್ದ ಕೇಂದ್ರ ಹೆದ್ದಾರಿ ಸೇತುವೆಯ ಮೂಲಕ ಬರಬೇಕಾಗಿತ್ತು. ವಾಯುಪಡೆ ಹೇಳಿಕೊಳ್ಳುವಂತಹದ್ದೇನೂ ಇರಲಿಲ್ಲ. ಹೀಗಾಗಿ ಸ್ಯಾಂಟಿಯಾಗೊದಿಂದ 200 ಕಿ.ಮೀ. ದೂರಕ್ಕಿದ್ದ ಬಯಾಮೊ ಬ್ಯಾರಕ್‌ಗಳನ್ನು ವಶಪಡಿಸಿಕೊಂಡರೆ ತಮ್ಮ ಮೇಲಿನ ದಾಳಿಯನ್ನು ತಡೆಯಬಹುದಾಗಿತ್ತು. ಆದ್ದರಿಂದ 40 ಜನರನ್ನು ಈ ಕೆಲಸಕ್ಕೆ ನಿಯೋಜಿಸಲಾಗಿತ್ತು.

12 ಸಾವಿರ ಕೋಟಿ ರೂ. ಮನರೇಗ ಕೂಲಿ ಬಾಕಿ: 'ಅಚ್ಛೇ ದಿನ್' ಸರಕಾರದ ನಿಜ ಬಣ್ಣವನ್ನು ಬಯಲಿಗೆಳೆದ ಸುಪ್ರಿಂ ಕೋರ್ಟ್ ತರಾಟೆ

ಎಪ್ರಿಲ್ 6ರಂದು ದೇಶದ ಸರ್ವೋಚ್ಚ ನ್ಯಾಯಾಲಯದ ಪೀಠವೊಂದು ಮಹಾತ್ಮ ಗಾಂಧಿ ಗ್ರಾಮೀಣ ಉದ್ಯೋಗ ಖಾತರಿ ಕಾನೂನಿನ (ಮನರೇಗ)ಅಡಿಯಲ್ಲಿ ಮಾಡಿದ ಕೆಲಸಗಳಿಗೆ ಕೂಲಿ ಪಾವತಿ ಮಾಡದಿರುವ ಬಗ್ಗೆ ಕೇಂದ್ರ ಸರಕಾರವನ್ನು ತರಾಟೆಗೆ ತೆಗೆದುಕೊಂಡಿತು, 10ರಾಜ್ಯಗಳು ಬರವನ್ನು ಎದುರಿಸುತ್ತಿವೆ, ಇಂತಹ ಸಂದರ್ಭದಲ್ಲಿ ಸರಕಾರ ಕಣ್ಣು ಮುಚ್ಚಿ ಕುಳಿತಿರಲು ಸಾಧ್ಯವಿಲ್ಲ ಎಂದು ಅದು ತಾಕೀತು ಮಾಡಬೇಕಾಗಿ ಬಂತು.

ಬರಪರಿಹಾರದ ಬಗ್ಗೆ ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳ ವಿಚಾರಣೆ ಮಾಡುತ್ತಿರುವ ಪೀಠ ಒಂದು ಯೋಜನೆಗೆ ಇಂತಿಷ್ಟು ಕೋಟಿ ರೂ. ನೀಡಲಾಗುವುದು ಎಂದು ಪ್ರಕಟಿಸಿದರೆ ಸಾಲದು, ಮನರೇಗದ ಅಡಿಯಲ್ಲಿ ಕೆಲಸ ಮಾಡಿದವರು ಕೂಲಿಗಾಗಿ ಕಾಯುತ್ತಿದ್ದಾರೆ, ಕೂಲಿ ಪಡೆಯದೆ ಜನ ಏಕೆ ಕೆಲಸ ಮಾಡಬೇಕು ಎಂದು ಖಾರವಾಗಿ ಕೇಳಿತು. 2015–16ರ 8000 ಕೋಟಿ ರೂ.ಗಳ ಕೂಲಿ ಹಣ ಪಾವತಿ ಮಾಡದೆ ರಾಜ್ಯ ಸರಕಾರಗಳು ಬಾಕಿ ಇಟ್ಟುಕೊಂಡಿವೆ, ಇದಕ್ಕೆ ಕಾರಣ ಕೇಂದ್ರ ಸರಕಾರ ಘೋಷಿತ ಹಣವನ್ನು ಬಿಡುಗಡೆ ಮಾಡದಿರುವುದು ಎಂದು ಸರ್ವೋಚ್ಚ ನ್ಯಾಯಾಲಯ ಆಘಾತ ವ್ಯಕ್ತಪಡಿಸಿತು. ಈ ಕಾನೂನಿನ ಪ್ರಕಾರ 100ದಿನಗಳ ಕೆಲಸ ಕೊಡಬೇಕು, ನೀವು ಕೊಟ್ಟಿರುವುದು ಸರಾಸರಿ ವರ್ಷದಲ್ಲಿ 48 ದಿನಗಳು ಮಾತ್ರ, ಹೇಳಿದ ಹಣ ಕೊಡದ್ದರಿಂದಲೇ ಹೀಗಾಗಿದೆ ಎಂದು ಸರಕಾರವನ್ನು ತರಾಟೆಗೆ ತೆಗೆದುಕೊಂಡಿತು.

8261 ಕೋಟಿ ರೂ. ಕೂಲಿ ಬಾಕಿ ಮಾತ್ರವೇ ಅಲ್ಲ, 3686 ಕೋಟಿ ರೂ. ಸಾಮಗ್ರಿಗಳಿಗೆ ಹಣ ಕೊಟ್ಟಿಲ್ಲ, ಅಂದರೆ ಒಟ್ಟು ಸುಮಾರು 12,000 ಕೋಟಿ ರೂ.ಗಳನ್ನು ಈ 'ಅಚ್ಛೇ ದಿನ್'ವಾಲಾಗಳು ಕೊಟ್ಟಿಲ್ಲ, ಯಾರ 'ಒಳ್ಳೆಯ ದಿನ'ಗಳಿಗಾಗಿ ಈ ಸರಕಾರ ಇದೆ ಎಂಬುದು ಇಲ್ಲಿ ಸಹಜ ಪ್ರಶ್ನೆ.

ದೇಶದಲ್ಲಿ ಬಡಜನರು, ಮಾಡಿದ ಕೆಲಸಕ್ಕೆ ಕೂಲಿಯಿಲ್ಲದೆ ಬರಿ ಹೊಟ್ಟೆಯಲ್ಲಿರುವಾಗ ಸರಕಾರ ಅವರಿಗೆ ಕೊಡಬೇಕಾಗಿದ್ದ ಕೂಲಿಯನ್ನು ಬಾಕಿಯಿಟ್ಟುಕೊಂಡಿದೆ, 'ಹಣಕಾಸು ಕೊರತೆ'ಯನ್ನು ಕಡಿಮೆ ಮಾಡಿದ್ದೇನೆ ಎಂದು ತೋರಿಸಲು!– ಹೀಗೆಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚೂರಿ ಟಿಪ್ಪಣಿ ಮಾಡಿದ್ದಾರೆ. ಬಡವರಿಗೆ ಸಲ್ಲಬೇಕಾದ ಹಣವನ್ನು ಈ ರೀತಿ ಕಸಿದಿಟ್ಟುಕೊಳ್ಳುವುದು ಅಮಾನವೀಯ ಮಾತ್ರವಲ್ಲ, ಕಾನೂನುಬಾಹಿರ ಕೂಡ, ಏಕೆಂದರೆ 'ಮನರೇಗ' ಸಂಸತ್ತು ಪಾಸು ಮಾಡಿರುವ ಒಂದು ಕಾನೂನು ಎಂದು ನೆನಪಿಸಿದ್ದಾರೆ ಯೆಚೂರಿ.

ಸಪ್ಟಂಬರ್–ಡಿಸೆಂಬರ್ 2015ರ ಅವಧಿಯಲ್ಲಿ ಕೃಷಿ ವಲಯ 1ಶೇ. ದಷ್ಟು ಸಂಕುಚಿತಗೊಂಡಿದೆ. ಅದರ ಹಿಂದಿನ ಎರಡು ತ್ರೈಮಾಸಿಕಗಳಲ್ಲಿ 1.6ಶೇ.ದಿಂದ 2ಶೇ.ದಷ್ಟು ಮಾತ್ರ ಬೆಳವಣಿಗೆ ದಾಖಲಿಸಿತ್ತು. ಮಳೆ ಬರಲು ಇನ್ನೂ ಎರಡು ತಿಂಗಳಿವೆ, ಅಷ್ಟರಲ್ಲೇ ಮಹಾರಾಷ್ಟ್ರ, ಕರ್ನಾಟಕ ಮತ್ತಿತರ ಕಡೆಗಳಲ್ಲಿ ಕುಡಿಯುವ ನೀರಿಗೆ ಹಾಹಾಕಾರವೆದ್ದಿದೆ.

ಸಾಲದ್ದಕ್ಕೆ ಆರೆಸ್ಸೆಸ್–ನಿರ್ದೇಶಿತ ಗೋಮಾಂಸ ನಿಷೇಧ ಬಿಜೆಪಿ ಆಳ್ವಿಕೆಯ ರಾಜ್ಯಗಳಲ್ಲಿ ರೈತರನ್ನು ಬಹುವಾಗಿ ತಟ್ಟಿರುವ ವರದಿಗಳು ಬರುತ್ತಿವೆ. ಅವರು ತಮ್ಮ ಪಶುಗಳಿಗೆ ಹೊಟ್ಟೆಗೂ ಹಾಕಲಾರರು, ತೀವ್ರ ಬರಪರಿಸ್ಥಿತಿಯಲ್ಲಿ ಅವನ್ನು ಮಾರುವುದೂ ಕಷ್ಟವಾಗಿದೆ.

ಅತ್ತ ರೈತರಿಗೆ ಬೆಂಬಲ ಬೆಲೆ ಹೆಚ್ಚಿಸುವ ಭರವಸೆಯೂ ಹುಸಿಯಾಗಿದೆ. "ಇದನ್ನು ಆಹಾರ ಬೆಲೆ ಹಣದುಬ್ಬರದೊಂದಿಗೆ ಸಮತೋಲನಗೊಳಿಸಬೇಕಲ್ಲ– ಅದೂ ಚುನಾವಣೆಗಳ ಸಂದರ್ಭದಲ್ಲಿ" ಎಂದು ಹಣಕಾಸು ರಾಜ್ಯಮಂತ್ರಿಗಳು ತಮಗೆ ಅರಿವಿಲ್ಲದೇ ತಮ್ಮದು ಚುನಾವಣೆಗಳಿಗಾಗಿ ಇರುವ ಸರಕಾರ, ಜನರಿಗಾಗಿ ಅಲ್ಲ ಎಂದು ಒಪ್ಪಿಕೊಂಡಿದ್ದಾರೆ.

ಗ್ರಾಮೀಣ ಅಭಿವೃದ್ಧಿ ಮಂತ್ರಿಗಳು ದೇವರಿಗೆ ಮಳೆ ಕೊಡುವ ಇಷ್ಟವಿದ್ದರೆ ಬರ ಕೊನೆಗೊಳ್ಳುತ್ತದೆ" ಎಂದು ಉದ್ಗರಿಸಿರುವುದಾಗಿ ವರದಿಯಾಗಿದೆ. ಇದೇ ವ್ಯಕ್ತಿ ಕೆಲವು ದಿನಗಳ ಹಿಂದೆ ನಮ್ಮ ಪ್ರಧಾನಿಗಳು 'ದೇವರ ಕೊಡುಗೆ' ಎಂದಿದ್ದರು ಎಂಬುದನ್ನು ನೆನಪಿಸಿಕೊಳ್ಳಬಹುದು. ಬರಪೀಡಿತ ಜನರನ್ನು ಪ್ರಕೃತಿಯ ಮರ್ಜಿಗೆ ಬಿಡುವ ಸರಕಾರ ಯಾರಿಗೆ ಎಂತಹ 'ಒಳ್ಳೆಯ ದಿನ'ಗಳನ್ನು ತರುತ್ತಿದೆ?

ಬಿಜೆಪಿಗಂತೂ 'ಅಚ್ಛೇದಿನ್': ರಾಜಕೀಯ ಪಕ್ಷಗಳು ಈಗ ವಿದೇಶಿ ಕಂಪನಿಗಳಿಂದ ಎಷ್ಟಾದರೂ ಹಣ ಪಡೆಯಬಹುದು–2010ರಿಂದಲೇ ಅನ್ವಯವಾಗುವ ತಿದ್ದುಪಡಿ!

ಈ ಅಂಶವನ್ನು 2016–17ರ ಹಣಕಾಸು ಮಸೂದೆಯಲ್ಲಿ ಸದ್ದಿಲ್ಲದೆ ಸೇರಿಸಲಾಗಿದೆ ಎಂದು ಬಿಸಿನೆಸ್ ಸ್ಟಾಂಡರ್ಡ್ ಪತ್ರಿಕೆ ವರದಿ ಮಾಡಿದೆ. ಇದುವರೆಗೆ ವಿದೇಶಿ ವಂತಿಗೆ(ನಿಯಂತ್ರಣ) ಕಾಯ್ದೆ,(ಎಫ್‌ಸಿಆರ್‌ಎ), 2010ರ ಪ್ರಕಾರ ಯಾವುದೇ ವಿದೇಶಿ ಮೂಲದಿಂದ ರಾಜಕೀಯ ಪಕ್ಷಗಳು ಹಣ ಪಡೆಯುವುದನ್ನು ನಿಷೇಧಿಸಲಾಗಿತ್ತು. ವಿದೇಶಿ ಮೂಲ ಎಂದರೆ 50ಶೇ.ಕ್ಕಿಂತ ಹೆಚ್ಚು ವಿದೇಶಿ ಹೂಡಿಕೆಯಿರುವ ಯಾವ ಕಂಪನಿಯೂ ಆಗಬಹುದು.

ಇದಕ್ಕೆ ಈಗ ಹಣಕಾಸು ಮಂತ್ರಿಗಳು ತಿದ್ದುಪಡಿ ಸೂಚಿಸಿದ್ದಾರೆ. ಇದು 2010ರಲ್ಲಿ ಈ ಕಾಯ್ದೆಯಾದ ದಿನದಿಂದಲೇ ಜಾರಿಗೆ ಬರುತ್ತದೆ. ಇದಕ್ಕೂ ಒಂದು ಕಾರಣವಿದೆ ಎಂದಿದೆ ಈ ಪತ್ರಿಕೆ. 2014ರಲ್ಲಿ ದಿಲ್ಲಿ ಹೈಕೋರ್ಟ್ ಬಿಜೆಪಿ ಮತ್ತು ಕಾಂಗ್ರೆಸ್ ಎರಡೂ ಲಂಡನ್‌ನ ವೇದಾಂತ ಕಂಪನಿಯಿಂದ ವಿದೇಶಿ ವಂತಿಗೆ ಪಡೆದ ಅಪರಾಧ ಮಾಡಿವೆ, ಸರಕಾರ ಮತ್ತು ಚುನಾವಣಾ ಆಯೋಗ ಈ ಬಗ್ಗೆ ಕ್ರಮ ಕೈಗೊಳ್ಳಬೇಕು, ಗ್ರಹ ಮಂತ್ರಾಲಯ ಆರು ತಿಂಗಳೊಳಗೆ ಕ್ರಮ ಕೈಗೊಳ್ಳಬೇಕು ಎಂದು ಹೇಳಿತ್ತಂತೆ.

ಗ್ರೀನ್ ಪೀಸ್, ತೀಸ್ತಾ ಸೆಟಲ್‌ವಾಡ್‌ರವರ ಸಂಸ್ಥೆ ಮುಂತಾದ ಸರ್ಕಾರೇತರ ಸಂಸ್ಥೆಗಳು ವಿದೇಶಗಳಿಂದ ಹಣ ಪಡೆಯುವುದರ ಮೇಲೆ ಹರಿಹಾಯ್ದಿರುವ, ಅದನ್ನೇ ನೆವ ಮಾಡಿಕೊಂಡು ಈ ಸಂಸ್ಥೆಗಳ ಕಾನೂನುಬದ್ಧ ಚಟುವಟಿಕೆಗಳಿಗೆ ಅಡ್ಡಿಪಡಿಸುತ್ತಿರುವ ಸರಕಾರವೇ ಇಂತಹ ತಿದ್ದುಪಡಿ ತರುತ್ತಿರುವುದು ಹಲವರ ಹುಬ್ಬೇರಿಸಿದೆ, ಸಹಜವಾಗಿಯೇ.

ಇದರಲ್ಲಿ ಆಶ್ಚರ್ಯವೇನಿಲ್ಲ. ತನ್ನದು ಎರಡು ನಾಲಗೆ ಎಂದು ಈ ಸರಕಾರ ಮತ್ತು ಅದರ ಪೋಷಕರು ಈಗಾಗಲೇ ಹಲವು ಬಾರಿ ಪ್ರದರ್ಶಿಸಿದ್ದಾರೆ ತಾನೇ ಎಂದು ಕೆಲವು ವಿಶ್ಲೇಷಕರು ನೆನಪಿಸಿದ್ದಾರೆ.



It's a party that worships stolen idols


"ಇದು ಕದ್ದ ಮೂರ್ತಿಗಳನ್ನು ಪೂಜಿಸುವ ಒಂದು ಪಕ್ಷ"

ವ್ಯಂಗ್ಯ ಚಿತ್ರ ಕೃಪೆ: ಟೈಮ್ಸ್ ಆಫ್ ಇಂಡಿಯ

ಉರ್ದು ಲೇಖಕರೇ, ಹಣ ಸಹಾಯಬೇಕೇ? – ಸರಕಾರದ ಧೋರಣೆಗಳ ವಿರುದ್ಧ ಬರೆಯಬೇಡಿ!

ಹೌದು, ಇದು ಸ್ಮೃತಿ ಇರಾನಿಯವರ ಹೆಚ್‌ಆರ್‌ಡಿ ಮಂತ್ರಾಲಯದ ಅಡಿಯಲ್ಲಿರುವ 'ರಾಷ್ಟ್ರೀಯ ಉರ್ದು ಭಾಷೆ ಉತ್ತೇಜನಾ ಮಂಡಳಿ' ಎಂಬ ಸ್ವಾಯತ್ತ ಸಂಸ್ಥೆಯ ಕರೆ, ಅಲ್ಲ ತಾಕೀತು. ಇವರಿಂದ ಹಣ ಸಹಾಯ ಬೇಕೆನ್ನುವ ಲೇಖಕರು, ಕಲಾವಿದರು ತಮ್ಮ ಕೃತಿಗಳಲ್ಲಿ ಭಾರತೀಯ ಸರಕಾರದ ಧೋರಣೆಗಳಿಗೆ ವಿರುದ್ಧವಾದದ್ದು ಏನೂ ಇಲ್ಲ ಎಂದು ಇನ್ನು ಮುಂದೆ ಡಿಕ್ಲರೇಶನ್ ಪತ್ರಕ್ಕೆ ಸಹಿ ಹಾಕಬೇಕು.

ಯಾವುದೇ ಪ್ರಜಾಪ್ರಭುತ್ವ ಸರಕಾರ ಹಣಕಾಸು ಬೆಂಬಲ ಪಡೆಯಬೇಕಾದರೆ ತನಗೆ ಬೇಕಾದ್ದನ್ನೇ ಬರೆಯಬೇಕು ಎಂದು ಲೇಖಕರಿಗೆ, ಕಲಾವಿದರಿಗೆ ಶರತ್ತು ಹಾಕವುದಿಲ್ಲ. ಇಲ್ಲಿಯೂ ಇತರ ಭಾರತೀಯ ಭಾಷೆಗಳಿಗೆ ಇಂತಹ ಬಹಿರಂಗ ಶರತ್ತು ಇಲ್ಲ. ಇದು ಉರ್ದು ಭಾಷೆಗೇ ಸೀಮಿತವಾಗಿರುವುದು ಈ ಸರಕಾರ ಉರ್ದು ಒಂದು ನಿರ್ದಿಷ್ಟ ಕೋಮಿನ ಭಾಷೆ ಎಂದು ಪರಿಗಣಿಸುತ್ತದೆಯೇ, ಮತ್ತು ಆ ಕೋಮಿಗೆ/ಭಾಷೆಗೆ ಮಾತ್ರವೇ ಸರಕಾರದ ಧೋರಣೆಗಳನ್ನು ಪ್ರಶ್ನಿಸುವ ಹಕ್ಕು ನಿರಾಕರಿಸಲಾಗಿದೆಯೇ ಎಂಬ ಸಂದೇಹ ಮೂಡಿಸದಿರದು. ಇದು ಅತ್ಯಂತ ಅಪಾಯಕಾರಿ ಎಂದಿರುವ ಉರ್ದು ಲೇಖಕರು ಹಚ್‌ಆರ್‌ಡಿ ಮಂತ್ರಾಲಯ ಈ ರೀತಿ ಡಿಕ್ಲರೇಷನ್ ಕೇಳುವು ಆದೇಶವನ್ನು ಹಿಂತೆಗೆದುಕೊಳ್ಳಬೇಕು ಎಂದು ಆಗ್ರಹಿಸಿದ್ದಾರೆ.



ಅಂಬೇಡ್ಕರ್ ಜಯಂತಿಯ ಮುನ್ನಾದಿನವೇ 'ಗುರುಗ್ರಾಮ' ನಾಮಕರಣ ಏಕೆ?

ಪ್ರಧಾನ ಮಂತ್ರಿಗಳು ಅಂಬೇಡ್ಕರ್‌ರವರ 125ನೇ ಜಯಂತಿಯಂದು 'ಗ್ರಾಮೋದಯ ಸೇ ಭಾರತೋದಯ ಅಭಿಯಾನ್' ಎಂಬುದನ್ನು ಆರಂಭಿಸಿದ್ದಾರೆ. ನಗರಗಳಲ್ಲಿ ಅಭಿವೃದ್ಧಿ ಮತ್ತು ಕೆಲವು ಬಿಲಿಯಾಧಿಪತಿಗಳಿಗಿಂತ ಗ್ರಾಮೀಣ ಜನರ ಖರೀದಿ ಶಕ್ತಿ ಹೆಚ್ಚಿಸಿ ಅಂಬೇಡ್ಕರ್ ಅವರ ಕಣ್ಣೋಟವನ್ನು ಸಾಕಾರಗೊಳಿಸುವುದಕ್ಕಾಗಿ ಈ ಅಭಿಯಾನ ಎಂದವರು ಹೇಳಿದ್ದಾರೆ.

ಒಂದು ಕಡೆ ಗ್ರಾಮೀಣ ಬಡವರ ಶ್ರಮಕ್ಕೆ ಅದಾಗಲೇ ಸಲ್ಲಬೇಕಾಗಿದ್ದ 12,000 ಕೋಟಿ ರೂ. ಗಳನ್ನು ಬಾಕಿಯಿಟ್ಟುಕೊಂಡು ಸುಪ್ರಿಂ ಕೋರ್ಟಿನ ತರಾಟೆಗೆ ಒಳಗಾಗಿ, ಇತ್ತ ಕಾರ್ಪೊರೇಟ್ ಕುಳಗಳಿಗೆ ಬಜೆಟಿನಲ್ಲಿ 6.11ಲಕ್ಷ ಕೋಟಿ ರೂ.ಗಳನ್ನು ಬಿಟ್ಟುಕೊಟ್ಟ ಸರಕಾರದ ಮುಖ್ಯಸ್ಥರ ಈ ಮಾತನ್ನು ಅವರ ಎರಡು ವರ್ಷಗಳ ಆಳ್ವಿಕೆಯ ನಂತರ ಎಷ್ಟು ಜನ ನಂಬುತ್ತಾರೋ ಗೊತ್ತಿಲ್ಲ. ಆದ್ದರಿಂದ ಇದು ಈ 'ಇವೆಂಟ್ ಮಾಸ್ಟರ್'ರ ಇನ್ನೊಂದು ಇವೆಂಟ್(ಪ್ರಸಂಗ) ಎಂದು ಹಲವರಿಗೆ ಅನ್ನಿಸಿದರೆ ಆಶ್ಚರ್ಯವಿಲ್ಲ.


ಇದು ಒಂದು ಇವೆಂಟ್‌ನಿಂದ ಇನ್ನೊಂದು ಇವೆಂಟ್‌ಗೆ ಸಾಗುತ್ತಿರುವವರ ಮಗದೊಂದು ಇವೆಂಟ್ ಮಾತ್ರ, ಅಂಬೇಡ್ಕರ್ ಬಗ್ಗೆ ಗೌರವವಂತೂ ಅಲ್ಲ ಎಂಬುದನ್ನು ಇದರ ಮುನ್ನಾದಿನ ಬಿಜೆಪಿ ಆಳ್ವಿಕೆಯ ಹರಿಯಾಣ ಸರಕಾರ ಇದುವರೆಗೆ ಗುಡ್‌ಗಾಂವ್ ಎಂದು ಕರೆಯುತ್ತಿದ್ದ ನಗರದ ಹೆಸರನ್ನು 'ಗುರುಗ್ರಾಮ' ಎಂದು ಬದಲಿಸುವ ನಿರ್ಧಾರವನ್ನು ಪ್ರಕಟಿಸಿರುವುದು ಖಚಿತ ಪಡಿಸಿದೆ.

ಇದು ಈ ಸ್ಥಳದ ಪ್ರಾಚೀನ ಹೆಸರಂತೆ. ಗುರು ದ್ರೋಣಾಚಾರ್ಯರ ನೆನಪಿನಲ್ಲಿ ಈ ಹೆಸರು ಬದಲಾವಣೆ. ದ್ರೋಣಾಚಾರ್ಯರು ಮಹಾಭಾರತದ ಪಾಂಡವರಿಗೆ ಶಸ್ತ್ರವಿದ್ಯೆ ಕಲಿಸಿದ ಗುರು, ಅದೇ ರೀತಿ ಏಕಲವ್ಯ ತನ್ನ ಮೂರ್ತಿಯಿಟ್ಟುಕೊಂಡೇ ಕಲಿತ ಬಿಲ್ಲು ವಿದ್ಯೆಯನ್ನು ಆತನ ಬೆರಳನ್ನು ದಕ್ಷಿಣೆಯಾಗಿ ಕೇಳಿ ಅವನಿಂದ ವಂಚಿಸಿದ ಗುರು ಕೂಡ. ದಲಿತರ ವಿಮೋಚನೆಯ ಕನಸು ಕಂಡ ಅಂಬೇಡ್ಕರ್‌ರವರ ಜಯಂತಿಯ ಮುನ್ನಾದಿನವೇ ಈ ಹೆಸರು ಬದಲಾವಣೆ ಕೇವಲ ಆಕಸ್ಮಿಕವಲ್ಲ ಎನುತ್ತಾರೆ ಹಲವರು. 'ದಲಿತ ಶೋಷಣ ಮುಕ್ತಿ ಮಂಚ್'(ಡಿಎಸ್‌ಎಂಎಂ) ಈ ಹೆಸರು ಬದಲಾವಣೆಗೆ ತೀವ್ರ ಆಕ್ಷೇಪ ವ್ಯಕ್ತಪಡಿಸಿದೆ. ಇದು ಈ ಸರಕಾರದ ಮೇಲ್ಜಾತಿ ಪಕ್ಷಪಾತವನ್ನು ತೋರಿಸುತ್ತದೆ ಎಂದು ಅದು ಟೀಕಿಸಿದೆ.

ವಿದೇಶಿ ವಸಾಹತುಶಾಹಿಗಳು ಇಟ್ಟ ಅಥವ ಅಪಭ್ರಂಶಗೊಳಿಸಿದ ಹೆಸರುಗಳ ಬದಲಾವಣೆಯನ್ನು ಅರ್ಥ ಮಾಡಿಕೊಳ್ಳಬಹದು, ಆದರೆ ದೇಶೀ ಹೆಸರುಗಳನ್ನೇ ಬದಲಿಸುವ ಇಂತಹ ಚಾಳಿ ಏಕೆ? ಈ ಬದಲಾವಣೆ ಸರ್ವತಾ ಒಪ್ಪತಕ್ಕಂತದ್ದಲ್ಲ ಎಂದು ಡಿಎಸ್‌ಎಂಎಂ ಎಲಲ್ ಪ್ರಜಾಪ್ರಭುತ್ವವಾದಿಗಳು ಮತ್ತು ಸಆಮಾಜಿಕ ನ್ಯಾಯ ಬಯಸುವವರು ಇದನ್ನು ವಿರೋಧಿಸಬೇಕು ಎಂದು ಮನವಿ ಮಾಡಿದೆ.

ದಲಿತರಿಗೆ ಶಿಕ್ಷಣ ವಂಚನೆಯ ಪ್ರತೀಕರಾದವರ ಹೆಸರನ್ನು ಅಂಬೇಡ್ಕರ್ ಜಯಂತಿಯ ಮುನ್ನಾದಿನ ಇಟ್ಟಿರುವುದನ್ನು ಒಪ್ಪುವುದು ಸಾಧ್ಯವಿಲ್ಲ ಎಂದು ಸಿಪಿಐ(ಎಂ)ನ ಹರಿಯಾಣ ರಾಜ್ಯ ಸಮಿತಿಯೂ ಹೇಳಿದೆ. ಅದೇ ರೀತಿ ಮೇವತ್ ಜಿಲ್ಲೆಯ ಹೆಸರನ್ನು ನುಹ್ ಎಂದು ಬದಲಿಸುವುದರ ಹಿಂದೆಯೂ ಕೋಮು ಪರಿಗಣನೆಯೇ ಇರುವುದು, ವಾಸ್ತವವಾಗಿ ಮೇವತ್ ಎಂಬುದೇ ಈ ಪ್ರದೇಶದ ಚಾರಿತ್ರಿಕ ಮತ್ತು ಸಾಂಸ್ಕೃತಿಕ ವಿಶಿಷ್ಟತೆಯನ್ನು ಬಿಂಬಿಸುವಂತದ್ದು ಎಂಬುದು ಹಲವರ ಅಭಿಪ್ರಾಯ.

ಗುರ್ಗಾಂವ್ ಪ್ರಾಚೀನ ಹೆಸರಿಗೆ ವಾಪಾಸ್..



ವ್ಯಂಗ್ಯ ಚಿತ್ರ ಕೃಪೆ: ಅಧ್ವರ್ಯು, ಟೈಂಸ್ ಆಫ್ ಇಂಡಿಯ

...ಆದರೆ ಕಾರಿನ ಹಿನ್ನೋಟದ ಕನ್ನಡಿಯಲ್ಲಿರುವುದು ಮೊನ್ನೆ–ಮೊನ್ನೆ ಜಾಟ್ ಚಳುವಳಿ ವೇಳೆ ಕಂಡಿದ್ದು

ಬಂಡವಾಳಶಾಹಿ ಕಾರ್ಯವೈಖರಿಯ ಮೇಲೆ ಬೆಳಕು ಚೆಲ್ಲಿರುವ ಪನಾಮ ದಾಖಲೆಗಳು



ಕೆ.ಎಂ.ನಾಗರಾಜ್

"ಮಾಹಿತಿ ಪತ್ರಿಕೋದ್ಯಮದ ಇತಿಹಾಸದಲ್ಲೇ ಇದು ಅತಿ ದೊಡ್ಡ ಸೋರಿಕೆ" ಎಂಬುದಾಗಿ ಪನಾಮ ದಾಖಲೆಗಳ ಬಹಿರಂಗದ ಬಗ್ಗೆ, ಅಮೆರಿಕದ ರಕ್ಷಣಾ ಇಲಾಖೆಗೆ ಸಂಬಂಧಿಸಿದ ಮಹತ್ವದ ಗುಪ್ತ ದಾಖಲೆಗಳನ್ನು ಕೆಲ ವರ್ಷಗಳ ಹಿಂದೆ ಬಹಿರಂಗಗೊಳಿಸಿದ್ದ ಎಡ್ವರ್ಡ್ ಸ್ನೋಡೆನ್ ಹೇಳಿದ್ದಾರೆ. ಲ್ಯಾಟಿನ್ ಅಮೆರಿಕಾದ ಪನಾಮ ದೇಶದಲ್ಲಿರುವ ಮೊಸ್ಸಾಕ್ ಫೋನ್ಸೇಕಾ ಎಂಬ ಹೆಸರಿನ ಕಾನೂನು ಸೇವೆಗಳ ಸಂಸ್ಥೆಯು ವಿಶ್ವದ ಶ್ರೀಮಂತರಿಗೆ ಮತ್ತು ಪ್ರಭಾವಿ ವ್ಯಕ್ತಿಗಳಿಗೆ ಅವರ ಕಪ್ಪು ಹಣವನ್ನು ರಹಸ್ಯವಾಗಿ ಹೂಡಿಕೆ ಮಾಡಲು ಒಂದು ಸರಳ ವ್ಯವಸ್ಥೆ ಕಲ್ಪಿಸಿಕೊಡುತ್ತದೆ.

ಈ ಸಂಸ್ಥೆ ನಿರ್ಮಿಸಿರುವ 2,14,000 ಬೋಗಸ್ ಕಂಪೆನಿಗಳಿಗೆ ಸಂಬಂಧಿಸಿದ 1ಕೋಟಿ 15ಲಕ್ಷ ಫೈಲುಗಳಲ್ಲಿರುವ ಮಾಹಿತಿ ಸೋರಿಕೆಯಾಗಿದೆ. 1977 ರಿಂದ ಡಿಸೆಂಬರ್ 2015ರ ವರೆಗಿನ ಬೃಹತ್ ಗಾತ್ರದ ಮಾಹಿತಿಯನ್ನು ತಡಕಾಡಿರುವ ತನಿಖಾ ವರದಿಗಾರರ ಅಂತಾರಾಷ್ಟ್ರೀಯ ಒಕ್ಕೂಟವು ಕೆಲವು ಮಹತ್ವದ ಮತ್ತು ಕುತೂಹಲಕಾರಿ ಅಂಶಗಳನ್ನು ಬಹಿರಂಗಪಡಿಸಿದೆ. ಅನೇಕ ದೇಶಗಳಲ್ಲಿ ಪ್ರಭುತ್ವದ ಅತ್ಯುನ್ನತ ಹುದ್ದೆಗಳಲ್ಲಿರುವ ಕೆಲವು ವ್ಯಕ್ತಿಗಳು ಮತ್ತು ಅವರ ರಕ್ತ ಸಂಬಂಧಿಗಳು, ಉದ್ದಿಮೆದಾರರು, ಸಿನೆಮಾ ತಾರೆಗಳು ಮತ್ತು ಅನೇಕ ಖ್ಯಾತ ನಾಮರು ತಮ್ಮ ದೇಶದ ತೆರಿಗೆ ಕಾನೂನುಗಳನ್ನು ಉಲ್ಲಂಘಿಸಿ ಹೊಂದಿರುವ ಅಪಾರ ಹಣವನ್ನು ಮೊಸ್ಸಾಕ್ ಫೋನ್ಸೇಕಾ ಸಂಸ್ಥೆಯ ಸೇವೆಗಳನ್ನು ಬಳಸಿಕೊಂಡು, ಹೊರ ದೇಶಗಳಲ್ಲಿ ಹೇಗೆ ಹೂಡಿಕೆ ಮಾಡಿದ್ದಾರೆ ಎಂಬ ವಿವರಗಳು ಈಗ ಬಹಿರಂಗಗೊಂಡಿವೆ.

ಇಂತಹ ಕಾನೂನು ಬಾಹಿರ ಕೃತ್ಯಗಳಲ್ಲಿ ತೊಡಗಿದ ಆಪಾದನೆಗೆ ಒಳಗಾಗಿರುವ, ಅತ್ಯುನ್ನತ ಹುದ್ದೆಯಲ್ಲಿರುವ ವ್ಯಕ್ತಿಗಳ ಪೈಕಿ ಐಸ್‌ಲ್ಯಾಂಡಿನ ಪ್ರಧಾನ ಮಂತ್ರಿ, ಇತ್ತೀಚೆಗೆ ಅರ್ಜೆಂಟೀನಾದ ಅಧ್ಯಕ್ಷರಾಗಿ ಚುನಾಯಿತರಾಗಿರುವ ಬಲ ಪಂಥೀಯ ಮೊರ್ರಿ, ಉಕ್ರೇನ್ ಅಧ್ಯಕ್ಷ, ಇವರುಗಳ ಹೆಸರು ಪಟ್ಟಿಯಲ್ಲಿದೆ.

ಅತ್ಯುನ್ನತ ಹುದ್ದೆಯಲ್ಲಿರುವ ವ್ಯಕ್ತಿಗಳ ರಕ್ತ ಸಂಬಂಧಿಗಳು ಈ ವ್ಯವಹಾರದಲ್ಲಿ ತೊಡಗಿದ್ದಾರೆ ಎನ್ನುವವರ ಪಟ್ಟಿಯಲ್ಲಿ ಇಂಗ್ಲೆಂಡಿನ ಪ್ರಧಾನ ಮಂತ್ರಿ ಡೇವಿಡ್ ಕೆಮರೂನ್(ಅವರ ತಂದೆ), ರಷ್ಯಾದ ಅಧ್ಯಕ್ಷ ವ್ಲಾಡಿಮಿರ್ ಪುಟಿನ್(ಅವರ ಮಿತ್ರರು), ಚೀನಾದ ಅಧ್ಯಕ್ಷ ಕ್ಸಿ ಅವರ ಭಾವ ಮೈದುನ, ಪಾಕಿಸ್ತಾನದ ಪ್ರಧಾನ ಮಂತ್ರಿ ನವಾಜ್ ಷರೀಫ್‌ರ ಪುತ್ರರು, ಸಿರಿಯಾದ ಅಧ್ಯಕ್ಷ ಬಷಾರ್ ಅವರ ದಾಯಾದಿ, ಈಜಿಪ್ತಿನ ಮಾಜಿ ಅಧ್ಯಕ್ಷ ಮುಬಾರಕ್ ಪುತ್ರ ಮುಂತಾದವರ ಹೆಸರುಗಳಿವೆ.

ಅಮಿತಾಬ್ ಬಚ್ಚನ್, ಐಶ್ವರ್ಯ ರೈ, ಡಿಎಲ್‌ಎಫ್‌ನ ಕೆ.ಪಿ. ಸಿಂಗ್, ಪ್ರಧಾನ ಮಂತ್ರಿ ಮೋದಿಯವರ ಪರಮಾಪ್ತ ಗೌತಮ್ ಅದಾನಿಯವರ ಅಣ್ಣ ವಿನೋದ್ ಅದಾನಿ ಮುಂತಾದ ಸುಮಾರು 500 ಮಂದಿ ಭಾರತೀಯರು ಪಟ್ಟಿಯಲ್ಲಿದ್ದಾರೆ.

ಪನಾಮದಲ್ಲಿ ಗುಟ್ಟಾಗಿ ಕಪ್ಪು ಹಣ ಇಟ್ಟವರ ಪಟ್ಟಿ ರಟ್ಟಾಗುತ್ತಿದ್ದಂತೆಯೇ ಎಲ್ಲೆಡೆ ಬಿರುಸಿನ ಚಟುವಟುಕೆಗಳು ನಡೆದಿವೆ. ಐಸ್‌ಲ್ಯಾಂಡಿನಲ್ಲಿ ಬೃಹತ್ ಪ್ರತಿಭಟನಾ ಪ್ರದರ್ಶನಗಳ ನಂತರ ಅಲ್ಲಿನ ಪ್ರಧಾನ ಮಂತ್ರಿ ರಾಜೀನಾಮೆ ಕೊಟ್ಟಿದ್ದಾರೆ. ಇಂಗ್ಲೆಂಡ್, ಫ್ರಾನ್ಸ್, ಆಸ್ಟ್ರೇಲಿಯಾ ಮತ್ತು ನ್ಯೂಜಿಲೆಂಡ್ ದೇಶಗಳಲ್ಲಿ, ತೆರಿಗೆಗಳ್ಳತನ ಮತ್ತು ಅಕ್ರಮ ಮೂಲದ ಹಣವನ್ನು ಸಕ್ರಮಗೊಳಿಸುವ ವ್ಯವಹಾರಗಳಲ್ಲಿ ತೊಡಗಿರುವ ಪ್ರಮುಖ ವ್ಯಕ್ತಿಗಳ ವಿರುದ್ಧ ಉನ್ನತ ಮಟ್ಟದ ತನಿಖೆ ನಡೆಯಲಿದೆ.

ದೇಶದಲ್ಲಿ ಸ್ವಾಯತ್ತ ತನಿಖಾ ಸಂಸ್ಥೆಯ ಅಗತ್ಯ

ಭಾರತದಲ್ಲೂ, ವರಮಾನ ತೆರಿಗೆ, ರಿಸರ್ವ್ ಬ್ಯಾಂಕ್ ಹಾಗೂ ಇತರ ಸಂಸ್ಥೆಗಳನ್ನೊಳಗೊಂಡ ಒಂದು ತನಿಖಾ ತಂಡವನ್ನು ನೇಮಿಸಲಾಗಿದೆ. ಆದರೆ, ಈ ಪ್ರಕರಣದಲ್ಲಿ ಸಿಕ್ಕಿಹಾಕಿಕೊಂಡಿರಿರುವ ಅನೇಕ ವ್ಯಕ್ತಿಗಳು ಮೋದಿ ಸರ್ಕಾರದೊಂದಿಗೆ ನಿಕಟ ಸಂಬಂಧ ಹೊಂದಿರುವುದರಿಂದ, ಸರ್ಕಾರದ ಅಂಗ ಸಂಸ್ಥೆಗಳಿಂದ ಕೂಡಿದ ಈ ತನಿಖೆ ಎಷ್ಟರ ಮಟ್ಟಿಗೆ ನಿಷ್ಪಕ್ಷಪಾತವಾದ ತನಿಖೆ ನಡೆಸ ಬಲ್ಲದು ಎನ್ನುವ ಬಗ್ಗೆ ಅನುಮಾನಗಳು ಉಂಟಾಗುತ್ತವೆ. ಏಕೆಂದರೆ, ಸ್ವಲ್ಪ ಸಮಯದ ಹಿಂದೆ, ಕಪ್ಪು ಹಣದ ಬಗ್ಗೆ ತನಿಖೆ ನಡೆಸಲು ಸುಪ್ರೀಂ ಕೋರ್ಟ್ ವ್ಯವಸ್ಥಾಪಿಸಿದ್ದ ಎಸ್‌ಐಟಿಯು ತನಗೆ ಸರ್ಕಾರದ ಬೇರೆ ಬೇರೆ ಇಲಾಖೆಗಳಿಂದ ಸಹಕಾರ ಸಿಗುತ್ತಿಲ್ಲ ಎಂದು ಗೊಣಗುತ್ತಿದೆ. ಹಾಗಾಗಿ, ಸರ್ಕಾರಕ್ಕೆ ತೀರ ಹತ್ತಿರದಲ್ಲಿರುವ ವ್ಯಕ್ತಿಗಳಿಗೆ ಸಂಬಂಧಿಸಿದ ತನಿಖೆ ಇದಾಗಿರುವುದರಿಂದ ಅನುಮಾನಗಳಿಗೆ ಕಾರಣವಿದೆ.

ಇಂತಹ ಅನುಮಾನಗಳು ಮೂಡಲು ಇನ್ನೊಂದು ಅಧಿಕ ಮತ್ತು ಬಲವಾದ ಕಾರಣವೂ ಇದೆ. ಒಂದು ಆಳವಾದ ಬಿಕ್ಕಟ್ಟಿಗೆ ಸಿಲುಕಿ ವಿಲಿ ವಿಲಿ ಒದ್ದಾಡುತ್ತಿರುವ ಅರ್ಥವ್ಯವಸ್ಥೆಯ ಉಸ್ತುವಾರಿ ಹೊತ್ತಿರುವ ಮೋದಿ ಸರ್ಕಾರಕ್ಕೆ ಅದನ್ನು ಹೇಗೆ ನಿಭಾಯಿಸಬೇಕೆಂಬುದು ತೋಚುತ್ತಿಲ್ಲ. ಅವರಿಗೆ ಗೊತ್ತಿರುವುದು ವಿದೇಶಿ ಬಂಡವಾಳ ಮತ್ತು ಅದರ ಭಾರತೀಯ ಸಹಚರರಿಗೆ ರಿಯಾಯ್ತಿಗಳ ಸುರಿಮಳೆಗೈಯ್ಯುವುದು ಮಾತ್ರ. ತಮ್ಮ ಮಹತ್ವಾಕಾಂಕ್ಷೆಯ "ಮೇಕ್ ಇನ್ ಇಂಡಿಯಾ" ಕಾರ್ಯಕ್ರಮವನ್ನು ಹೇಗಾದರೂ, ಯಶಸ್ವಿಗೊಳಿಸುವಂತೆ ಅವರನ್ನು ಪುಸಲಾಯಿಸುತ್ತಾರೆ ಮತ್ತು ಅವರನ್ನು ಖುಷಿಯಾಗಿಡಲು ಪ್ರಯತ್ನಿಸುತ್ತಿರುತ್ತಾರೆ.

ಅವರ ಆಶೋತ್ತರಗಳಿಗೆ ಹೇಗೆ ಸ್ಪಂದಿಸುತ್ತಾರೆ ಎಂಬುದನ್ನು ತಿಳಿಯಲು ಒಂದು ಉದಾಹರಣೆ ಇಲ್ಲಿದೆ. ಸುಪ್ರೀಂ ಕೋರ್ಟ್ ನೇಮಕದ ಎಸ್‌ಐಟಿ ತನಿಖೆಯ ಆರಂಭದ ಅವಧಿಯಲ್ಲಿ, ಮಾರಿಷಿಯಸ್ ಮೂಲದಿಂದ ಬರುವ ತೆರಿಗೆಗಳ್ಳತನದಿಂದ ಕೂಡಿದ ವಿದೇಶಿ ಬಂಡವಾಳದ ಹರಿವನ್ನು ನಿಲ್ಲಿಸಬೇಕೆಂಬ ಪ್ರಸ್ತಾಪ ಬಂದಿತ್ತು. ಸರ್ಕಾರವೂ ಅದನ್ನು ಬೆಂಬಲಿಸುವ ಇಂಗಿತ ವ್ಯಕ್ತಪಡಿಸಿತ್ತು. ಆದರೆ, ಬಹುರಾಷ್ಟ್ರೀಯ ಕಂಪನಿ(ಎಮೆನ್‌ಸಿ)ಗಳ ಒತ್ತಡದಿಂದಾಗಿ ಆ ಪ್ರಸ್ತಾಪ ಕೈಬಿಡಲಾಯ್ತು. ಅಷ್ಟೇ ಅಲ್ಲದೆ ಎಂಎನ್‌ಸಿಗಳಿಗೆ ತೆರಿಗೆಗಳು ಪೂರ್ವಾನ್ವಯವಾಗದಂತೆ ನೋಡಿಕೊಳ್ಳುವ ಭರವಸೆ ಕೊಡಲಾಯ್ತು. ಈ ಎಲ್ಲ ಕಸರತ್ತುಗಳ ಬಳಿಕವೂ "ಮೇಕ್ ಇನ್ ಇಂಡಿಯಾ" ಯಶಸ್ವಿಯಾಗುವುದಿಲ್ಲ. ಏಕೆಂದರೆ, ಈಗ, ಪ್ರಪಂಚದಲ್ಲಿ ಎಲ್ಲೆಲ್ಲಿಯೂ ಹೂಡಿಕೆಯಾಗುತ್ತಿಲ್ಲ. ಮೇಕ್ ಇನ್ ಇಂಡಿಯಾ ಪ್ರಚಾರದ ಪ್ರಭಾವ ಹಿನ್ನಡೆ ಪಡೆಯುತ್ತಿದ್ದಂತೆ ಹತಾಶೆಗೊಳಗಾಗಿರುವ ಮೋದಿ ಸರ್ಕಾರ ಎಂಎನ್‌ಸಿಗಳಿಗೆ ರಿಯಾಯ್ತಿಗಳನ್ನು ಮತ್ತಷ್ಟು ಹೆಚ್ಚಿಸುತ್ತದೆ. ಇಂತಹ ಪರಿಸ್ಥಿತಿಯಲ್ಲಿ, ಸ್ವಾಭಾವಿಕವಾಗಿ, ಪನಾಮ ಗುಟ್ಟುಗಳ ಬಗ್ಗೆ ಸರ್ಕಾರ ದಿವ್ಯ ಮೌನ ತಾಳುತ್ತದೆ. ಆದ್ದರಿಂದ, ಪನಾಮ ದಾಖಲೆಗಳ ಬಗ್ಗೆ ನಡೆಯುವ ತನಿಖೆಯನ್ನು ಮೋದಿ ಸರ್ಕಾರದಿಂದ ಬೇರ್ಪಡಿಸಿ ಅದನ್ನು ಒಂದು ಸ್ವಾಯತ್ತ ಸಂಸ್ಥೆಗೆ ವಹಿಸಬೇಕಾಗುತ್ತದೆ.

ಸಮಕಾಲೀನ ಬಂಡವಾಳಶಾಹಿಯ ಕಾರ್ಯವೈಖರಿ

ಸಮಕಾಲೀನ ಬಂಡವಾಳಶಾಹಿ ವ್ಯವಸ್ಥೆಯು ಹೇಗೆ ತನ್ನ ಕಾರ್ಯಭಾರಗಳನ್ನು ನಿರ್ವಹಿಸುತ್ತಿದೆ ಎನ್ನುವ ಬಗ್ಗೆ ಪನಾಮ ದಾಖಲೆಗಳು ಬೆಳಕು ಚೆಲ್ಲುತ್ತವೆ. ಅದರಲ್ಲಿ ಮುಖ್ಯವಾದ ಮೂರು ಅಂಶಗಳು ನಮ್ಮ ಗಮನ ಸೆಳೆಯುತ್ತವೆ ಎನ್ನುತ್ತಾರೆ ಪ್ರಖ್ಯಾತ ಅರ್ಥಶಾಸ್ತ್ರಜ್ಞ ಪ್ರೊ.ಪ್ರಭಾತ್ ಪಟ್ನಾಯಕ್.

ಮೊದಲನೆಯ ಮತ್ತು ಎದ್ದು ಕಾಣುವ ಅಂಶ, ಶ್ರೀಮಂತರು ಮತ್ತು ಬಲಾಢ್ಯರು ತಮ್ಮ ತಮ್ಮ ದೇಶಗಳಲ್ಲಿ ದೊಡ್ಡ ಮೊತ್ತದ ಆದಾಯ ತೆರಿಗೆ ಕೊಡುವುದನ್ನು ತಪ್ಪಿಸಿಕೊಂಡು ಪನಾಮದಂತಹ ಸುರಕ್ಷಿತ ಅಡಗುದಾಣಗಳಲ್ಲಿ ಗುಟ್ಟಿನ ಹೂಡಿಕೆ ಮಾಡುತ್ತಾರೆ.

ಇಂದಿನ ಪ್ರಪಂಚದಲ್ಲಿ, "ಹಿತಾಸಕ್ತಿಗಳ ತುಮುಲ" ಅಗಾಧ ಪ್ರಮಾಣದಲ್ಲಿ ನಡೆಯುತ್ತಿದೆ. ಇದು ಎರಡನೆಯ ಅಂಶ. ತಮ್ಮ ಹೆಸರಿನಲ್ಲಿ ಅಥವಾ ತಮ್ಮ ಬಂಧು-ಮಿತ್ರರ ಹೆಸರಿನಲ್ಲಿ ಅಗಾಧ ಪ್ರಮಾಣದ ಹಣವನ್ನು ಅಡಗುದಾಣಗಳ ಮುಖಾಂತರ ಗುಟ್ಟಾಗಿ ಹೂಡಿಕೆ ಮಾಡುವ ಪ್ರಭುತ್ವದ ಉನ್ನತ ಹುದ್ದೆಯಲ್ಲಿರುವ ವ್ಯಕ್ತಿಗಳೇ "ರಾಷ್ಟ್ರ ಹಿತ"ದ ಪರವಾಗಿ ತೀರ್ಮಾನಗಳನ್ನು ತೆಗೆದುಕೊಳ್ಳುತ್ತಾರೆ. ಈ ತೋರಿಕೆಯ ತೀರ್ಮಾನಗಳು ರಾಷ್ಟ್ರದ ಹಿತ ಕಾಯುವುದರ ಬದಲು ಅವರ ವೈಯುಕ್ತಿಕ ಹಿತಗಳಿಗೆ ಪೂರಕವಾಗಿರುತ್ತವೆ. ಅದು ಜನರ ಅರಿವಿಗೆ ಬಂದಿರುವುದಿಲ್ಲ. ಏಕೆಂದರೆ, ಈ ನಾಯಕಮಣಿಗಳು ತಾವು ಪನಾಮಾದಂತಹ ತಾಣಗಳಲ್ಲಿ ಹೊಂದಿರುವ ಸಂಪತ್ತನ್ನು ಸಾರ್ವಜನಿಕವಾಗಿ ಘೋಷಿಸಿರುವುದಿಲ್ಲ.

ಐಸ್‌ಲ್ಯಾಂಡಿನ ಪ್ರಧಾನ ಮಂತ್ರಿಯವರ ನಿದರ್ಶನ ಈ ಅಂಶವನ್ನು ಸ್ಪಷ್ಟಪಡಿಸುತ್ತದೆ. ಅವರು ಮತ್ತು ಅವರ ಹೆಂಡತಿ ಸಾಗರದಾಚೆಯ ದೇಶದ ಕಂಪೆನಿಯೊಂದರಲ್ಲಿ (ಷೆಲ್ ಕಂಪೆನಿ, ಅಂದರೆ, ಚಿಪ್ಪಿನ ರೀತಿಯ ರಕ್ಷಣೆ ಕೊಡುವಂತದ್ದು) ಭಾರಿ ಮೊತ್ತದ ಹೂಡಿಕೆ ಮಾಡಿದ್ದರು. ಆ ಕಂಪೆನಿ ಐಸ್‌ಲ್ಯಾಂಡ್ ಬ್ಯಾಂಕ್‌ಗಳ ಬಾಂಡ್‌ಗಳನ್ನು ಕೊಂಡಿತ್ತು. 2008ರ ಆರ್ಥಿಕ ಬಿಕ್ಕಟ್ಟಿನಲ್ಲಿ ಈ ಬ್ಯಾಂಕ್‌ಗಳು ಮುಳುಗುವ ಸ್ಥಿತಿ ತಲುಪಿದಾಗ ಐಸ್‌ಲ್ಯಾಂಡ್ ಸರ್ಕಾರ ಪಾರು ಯೋಜನೆಯ ಮೂಲಕ ಅವುಗಳನ್ನು ಬದುಕಿಸಿದಾಗ, ವಾಸ್ತವವಾಗಿ ಪ್ರಧಾನ ಮಂತ್ರಿಗಳು ತಮ್ಮ ಸಂಪತ್ತನ್ನು ಅಕ್ಷರಶಃ ರಕ್ಷಿಸಿಕೊಳ್ಳುತ್ತಿದ್ದರು ಎಂಬುದು ಜನರಿಗೆ ಎಳ್ಳಷ್ಟೂ ಗೊತ್ತಿರಲಿಲ್ಲ.

ಶ್ರೀಮಂತರು ಮತ್ತು ಬಲಾಢ್ಯರ ಭವಿಷ್ಯ ಮಾದಕ ವಸ್ತುಗಳ ಉತ್ಪಾದನೆ, ಬೆಲೆ ಮತ್ತು ಮಾರಾಟಗಳನ್ನು ನಿಯಂತ್ರಿಸುವ ಕೂಟಗಳು ಮತ್ತು ಭಯೋತ್ಪಾದಕ ಸಂಸ್ಥೆಗಳ ಭವಿಷ್ಯದೊಂದಿಗೆ ಮಿಶ್ರಿತವಾಗಿದೆ. ಇದು, ಮೂರನೆಯ ಅಂಶ. ಇಂತಹ ಸಮಾಜ ಘಾತುಕ ಸಂಸ್ಥೆಗಳ ಹಾವಳಿಯ ಬಗ್ಗೆ ಇದೇ ನಾಯಕಮಣಿಗಳು ಏರು ದನಿಯಲ್ಲಿ ಮಾತನಾಡುತ್ತಾರೆ. ನೈತಿಕತೆ ಮತ್ತು ಅನೈತಿಕತೆಗಳ ನಡುವೆ, ಕಾನೂನುಬದ್ಧ ಮತ್ತು ಕಾನೂನು ಬಾಹಿರ ನಡೆಗಳ ನಡುವೆ ಹಾಗೂ ನ್ಯಾಯಸಮ್ಮತ ಮತ್ತು ನ್ಯಾಯಸಮ್ಮತವಲ್ಲದ ವಿಷಯಗಳ ನಡುವೆ ಇರುವ ಅಂತರದ ಬಗ್ಗೆ ಸಾರ್ವಜನಿಕವಾಗಿ ಬೊಬ್ಬೆ ಹೊಡೆಯುತ್ತಿದ್ದರೂ, ವಾಸ್ತವವಾಗಿ, ಅವುಗಳ ನಡುವಿನ ಅಂತರ ಅಥವಾ ವ್ಯತ್ಯಾಸ ಅಳಿಸಿ ಹೋಗುತ್ತಿದೆ.

ಪನಾಮ ದಾಖಲೆಗಳ ಪ್ರಕಟಣೆಯನ್ನು ತೆರಿಗೆಗಳ್ಳರಿಗೆ ಮತ್ತು ವಂಚಕರಿಗೆ ಶಿಕ್ಷೆ ವಿಧಿಸುವ ಮೂಲಕ ವ್ಯವಸ್ಥೆಯನ್ನು ಚೊಕ್ಕಟಗೊಳಿಸುವ ಒಂದು ಅವಕಾಶವೆಂದು ಅನೇಕ ಮಂದಿ ಬಗೆಯುತ್ತಾರೆ. ಈ ನಿಲುವನ್ನು ಬೆಂಬಲಿಸುವುದು ಸರಿ. ಆದರೆ, ಆ ಮೂಲಕ ನಾವು ಒಂದು ಚೊಕ್ಕಟವಾದ ಬಂಡವಾಳಶಾಹಿ ವ್ಯವಸ್ಥೆಯನ್ನು ಪಡೆಯುತ್ತೇವೆ ಎಂಬ ಭ್ರಮೆಗೆ ಒಳಗಾಗಬಾರದು ಎನ್ನುತ್ತಾರೆ ಪ್ರೊ.ಪಟ್ನಾಯಕ್. ಏಕೆಂದರೆ, ಭ್ರಷ್ಟಾಚಾರವು ಬಂಡವಾಳಶಾಹಿಯಿಂದ ಬೇರ್ಪಡಿಸಲಾಗದ ಸಂಗತಿ. ಅದೇನಿದ್ದರೂ, ಇಂತಹ ಪ್ರಯತ್ನಗಳು, ವ್ಯವಸ್ಥೆಯ ಬಗ್ಗೆ ಒಂದು ಸರಿಯಾದ ತಿಳುವಳಿಕೆ ಮೂಡಿಸಲು ಸಹಾಯವಾಗುತ್ತವೆ ಎನ್ನುತ್ತಾರೆ ಅವರು.

ಹಲ್ಲಿಲ್ಲದ ಮೋದಿ ಸರಕಾರಗಳ ಕ್ರಮಗಳು

ಹಣಕಾಸು ಮಂತ್ರಿಗಳು ಏನೇ ಹೇಳಿದರೂ, ಮೋದಿ ಸರಕಾರ ಕಪ್ಪು ಹಣವನ್ನು ಬಯಲಿಗೆಳೆಯುವ ಬಗ್ಗೆ ಇನ್ನಷ್ಟು ಅಬ್ಬರದ ಮಾತುಗಳನ್ನಾಡಬಹುದೇ ಹೊರತು ಗಟ್ಟಿ ಕ್ರಮಗಳನ್ನು ಕೈಗೊಳ್ಳಲಾರದು ಎಂದು ಹಿರಿಯ ಸಿಪಿಐ(ಎಂ) ಮುಖಂಡ ಪ್ರಕಾಶ ಕಾರಟ್ ಕೂಡ ಅಭಿಪ್ರಾಯ ಪಟ್ಟಿದ್ದಾರೆ. ಕಳೆದ ಎರಡು ವರ್ಷಗಳ ಅದರ ವರ್ತನೆ ಈ ಬಗ್ಗೆ ಯಾವುದೇ ವಿಶ್ವಾಸವನ್ನು ಮೂಡಿಸುತ್ತಿಲ್ಲ.

ಮೋದಿ ಸರಕಾರಕ್ಕೆ ನಿಜಕ್ಕೂ ಕಪ್ಪು ಹಣವನ್ನು ಹೊರತೆಗೆಯಬೇಕೆಂದಿದ್ದರೆ, ತೆರಿಗೆವಂಚನೆ ಮತ್ತು ಕಪ್ಪು ಹಣವನ್ನು ಬಿಳಿಮಾಡುವುದನ್ನು ತಡೆಯಬೇಕೆಂದಿದ್ದರೆ ಅದು ಭಾರತೀಯರು ಚಿಪ್ಪು ಕಂಪನಿಗಳನ್ನು ನಡೆಸುವುದನ್ನು, ತೆರಿಗೆಧಾಮಗಳಲ್ಲಿ ಗುಪ್ತಖಾತೆಗಳನ್ನು ಹೊಂದುವುದನ್ನು ನಿಷೇಧಿಸಬೇಕು. ಮೋದಿ ಸರಕಾರಕ್ಕೆ ಇದನ್ನು ಮಾಡುವ ಧೈರ್ಯ ಇಲ್ಲ ಎನ್ನುತ್ತಾರೆ ಪ್ರಕಾಶ ಕಾರಟ್. ಏಕೆಂದರೆ, ಪ್ರೊ. ಪಟ್ನಾಯಕ್ ಹೇಳಿರುವಂತೆ, ಇಡೀ ಅಂತರ್ರಾಷ್ಟ್ರೀಯ ಹಣಕಾಸು ಬಂಡವಾಳ ವ್ಯವಸ್ಥೆಯಲ್ಲಿ ಈ ತೆರಿಗೆಧಾಮಗಳು ಮತ್ತು ಚಿಪ್ಪುಕಂಪನಿಗಳು ಹಾಸುಹೊಕ್ಕಾಗಿವೆ.

ಮೋದಿ ಸರಕಾರ ಗುಪ್ತ ಖಾತೆಗಳಲ್ಲಿ ಕಾನೂನುಬಾಹಿರವಾಗಿ ಹಣ ಇಟ್ಟಿರುವ ಸಂಗತಿಯನ್ನು ಮತ್ತು ಚಿಪ್ಪು ಕಂಪನಿಗಳನ್ನು ನಡೆಸುತ್ತಿರುವ ಸಂಗತಿಯನ್ನು ತಾಂತ್ರಿಕವಾಗಿಯಷ್ಟೇ ನೋಡುತ್ತಿದೆ. ಏಕೆಂದರೆ ಈ ಹಿಂದೆ ಇಂತಹ ಕಾನೂನುಬಾಹಿರ ಖಾತೆಗಳು ಬಯಲಾದಾಗ ಅದು ತೆರಿಗೆ ನೋಟೀಸುಗಳನ್ನು ಕಳಿಸುವುದು ಬಿಟ್ಟು ಬೇರೇನೂ ಮಾಡಿಲ್ಲ. ಬಹುಪಕ್ಷೀಯ ಸಂಧಿಗಳು ಇಂತಹ ಕಾನೂನುಬಾಹಿರ ಚಟುವಟಿಕೆಗಳಲ್ಲಿ ತೊಡಗಿರುವವರನ್ನು ಪತ್ತೆ ಮಾಡಲು ನೆರವಾಗುತ್ತವೆ ಎಂಬುದು ಕೇವಲ ಕಪೋಲ ಕಲ್ಪನೆ. ಏಕೆಂದರೆ ಪನಾಮ ದೇಶ ಇಂತಹ ಸಂಧಿಗಳಿಗೆ ಸಹಿ ಹಾಕಿಲ್ಲ ಎಂಬ ಸಂಗತಿಯತ್ತ ಪ್ರಕಾಶ ಕಾರಟ್ ಗಮನ ಸೆಳೆದಿದ್ದಾರೆ. ತೆರಿಗೆವಂಚನೆಗೆ ಆಶ್ರಯ ಕೊಡುವ ಇಂತಹ ತೆರಿಗೆಧಾಮಗಳು ಇವನ್ನೆಲ್ಲ ನಿರ್ಲಕ್ಷಿಸಲು ಇಂತಹ ಸಂಧಿಗಳಲ್ಲಿ ಸಾಕಷ್ಟು ತೂತುಗಳನ್ನು ಬಿಡಲಾಗಿದೆ.

ಹಣಕಾಸು ಮಂತ್ರಿಗಳು ಮತ್ತು ರಿಝರ್ವ್ ಬ್ಯಾಂಕ್ ಮುಖ್ಯಸ್ಥರ ರಾಗ

ಹಣಕಾಸು ಮಂತ್ರಿಗಳು ಮತ್ತು ರಿಝರ್ವ್ ಬ್ಯಾಂಕ್ ಮುಖ್ಯಸ್ಥರು ಕೂಡ ಈ ಪನಾಮ ಸಂಪತ್ತುಗಳಲ್ಲಿ ಹಲವು ಕಾನೂನುಬದ್ಧವಾದವುಗಳೂ ಇರಬಹುದು ಎಂದು ರಾಗ ಎಳೆದಿರುವುದನ್ನು ಕೂಡ ಗಮನಿಸಬಹುದು. ಇದು ನಿಜ ಪ್ರಶ್ನೆಯನ್ನು ಬದಿಗೊತ್ತುವ ಪ್ರಯತ್ನ ಎನ್ನುತ್ತಾರೆ ಪ್ರಕಾಶ ಕಾರಟ್. ಚಿಪ್ಪು(ಬೋಗಸ್) ಕಂಪನಿಗಳನ್ನು ಪಡೆಯುವುದು, ತೆರಿಗೆಧಾಮಗಳಲ್ಲಿ ಗುಪ್ತ ಖಾತೆಗಳನ್ನು ಹೊಂದುವುದನ್ನು ಸರಕಾರ ಏಕೆ ಕಾನೂನುಬದ್ಧ ಎನ್ನಬೇಕು? ಈ ಹಿಂದೆ ಇದೇ ಸರಕಾರ ಮೋಸ್ಸಾಕ್ ಫೊನ್ಸೆಕಾದಿಂದ ಕೆಲವು ಖಾತೆಗಳು ಮತ್ತು ವ್ಯವಹಾರಗಳ ಮಾಹಿತಿ ಪಡೆಯುವಲ್ಲಿ ವಿಫಲವಾಗಿತ್ತು. ಫ್ರೆಂಚ್ ಸರಕಾರ ಪನಾಮವನ್ನು ಸಹಕರಿಸದ ಪ್ರದೇಶ ಎಂದು ಕಪ್ಪು ಪಟ್ಟಿಗೆ ಸೇರಿಸಿದೆ. ಆದರೆ ಮೋದಿ ಸರಕಾರ ಅದನ್ನೂ ಮಾಡಿಲ್ಲ.

ಮೋದಿ ಸರಕಾರಕ್ಕೆ ನಿಜಕ್ಕೂ ಕಪ್ಪು ಹಣವನ್ನು ಹೊರತೆಗೆಯಬೇಕೆಂದಿದ್ದರೆ, ತೆರಿಗೆವಂಚನೆ ಮತ್ತು ಕಪ್ಪು ಹಣವನ್ನು ಬಿಳಿಮಾಡುವುದನ್ನು ತಡೆಯಬೇಕೆಂದಿದ್ದರೆ ಅದು ಭಾರತೀಯರು ಚಿಪ್ಪು ಕಂಪನಿಗಳನ್ನು ನಡೆಸುವುದನ್ನು, ತೆರಿಗೆಧಾಮಗಳಲ್ಲಿ ಗುಪ್ತಖಾತೆಗಳನ್ನು ಹೊಂದುವುದನ್ನು ನಿಷೇಧಿಸಬೇಕು.

ಆದರೆ, ಮೋದಿ ಸರಕಾರಕ್ಕೆ ಇದನ್ನು ಮಾಡುವ ಧೈರ್ಯ ಇಲ್ಲ ಎನ್ನುತ್ತಾರೆ ಪ್ರಕಾಶ ಕಾರಟ್. ಏಕೆಂದರೆ, ಪ್ರೊ. ಪಟ್ನಾಯಕ್ ಹೇಳಿರುವಂತೆ, ಇಡೀ ಅಂತರ್ರಾಷ್ಟ್ರೀಯ ಹಣಕಾಸು ಬಂಡವಾಳ ವ್ಯವಸ್ಥೆಯಲ್ಲಿ ಈ ತೆರಿಗೆಧಾಮಗಳು ಮತ್ತು ಚಿಪ್ಪುಕಂಪನಿಗಳು ಹಾಸುಹೊಕ್ಕಾಗಿವೆ. ಹಣಕಾಸು ಬಂಡವಾಳದ ಮರ್ಜಿಯನ್ನು ಹಿಡಿಯುವ ಧೋರಣೆಗಳನ್ನು ಅಪ್ಪಿಕೊಂಡ ಒಂದು ಸರಕಾರ ಹೇಗೆ ತಾನೇ ಇಂತಹ ಧೈರ್ಯ ತೋರಲು ಸಾಧ್ಯ? ಈಗ ಕಪ್ಪು ಹಣವನ್ನು ಬಿಳಿ ಮಾಡುವ ಮಾರಿಶಸ್ ದಾರಿಯನ್ನು ಹಣಕಾಸು ಹೂಡಿಕೆಗಳಿಗೆ ತೆರದು ಕೊಟ್ಟದ್ದು ಹಿಂದಿನ ಬಿಜೆಪಿ ನೇತೃತ್ವದ ಎನ್‌ಡಿಎ ಸರಕಾರವೇ ತಾನೇ?

ಆದ್ದರಿಂದ ಪನಾಮ ದಾಖಲೆಗಳ ಮೇಲೆ ಮೋದಿ ಸರಕಾರ ಕೈಗೊಳ್ಳುವ ಕ್ರಮಗಳು ಹೆಚ್ಚೆಂದರೆ ಮೇಲುಮೇಲಿನದಾಗಿರುತ್ತವೆ, ತೆರಿಗೆ ವಂಚನೆಗಳಿಗೆ ಆಶ್ಯತಾಣಗಳಾದ ತೆರಿಗೆ ಧಾಮಗಳ, ಕಪ್ಪು ಹಣ ಉತ್ಪಾದನೆಯ ರಚನೆಗಳನ್ನು ಅವು ತಟ್ಟುವುದಿಲ್ಲ ಎಂದು ಪ್ರಕಾಶ ಕಾರಟ್ ಹೇಳುತ್ತಾರೆ.

ಎನ್ಐಟಿ ಶ್ರೀನಗರದಲ್ಲಿ ಅಶಾಂತಿ:ಶೈಕ್ಷಣಿಕ ಸಂಸ್ಥೆಗಳನ್ನು ಅಲ್ಪಮತಿಗಳ ಸ್ವಾರ್ಥಸಾಧನೆಯ ರಣರಂಗವಾಗಿಸಬೇಡಿ–ಜಮ್ಮು-ಕಾಶ್ಮೀರ ಸಿಪಿಐ(ಎಂ) ಮನವಿ

ಜಮ್ಮು-ಕಾಶ್ಮೀರದ ರಾಜಧಾನಿ ಶ್ರೀನಗರದಲ್ಲಿರುವ ನ್ಯಾಶನಲ್ ಇನ್ಸ್‌ಟಿಟ್ಯೂಟ್ ಆಫ್ ಟೆಕ್ನಾಲಜಿ (ಎನ್ಐಟಿ) ಯಲ್ಲಿ ಸ್ಥಳೀಯ ಮತ್ತು ಹೊರಗಿನ ವಿದ್ಯಾರ್ಥಿಗಳ ನಡುವೆ ಏರ್ಪಟ್ಟ ಹಿಂದೆಂದೂ ಕಾಣದಂತಹ ಕಲಹ ಈಗ ತಪ್ಪು ವ್ಯಾಖ್ಯಾನಗಳು, ಮಾಧ್ಯಮಗಳ ಅಬ್ಬರ ಮತ್ತು ಕೀಳು ರಾಜಕೀಯದಿಂದಾಗಿ ದ್ವೇಷ ಸ್ವರೂಪ ಪಡೆದುಕೊಳ್ಳುತ್ತಿದೆ ಎಂದು ಸಿಪಿಐ(ಎಂ) ಜಮ್ಮು-ಕಾಶ್ಮೀರ ರಾಜ್ಯ ಸಮಿತಿ ಖೇದ ವ್ಯಕ್ತಪಡಿಸಿದೆ.

ಮಾರ್ಚ್ 31ರಂದು ಟಿ-20 ಕ್ರಿಕೆಟ್ ಸೆಮಿಫೈನಲ್‌ನಲ್ಲಿ ಭಾರತದ ತಂಡ ವೆಸ್ಟ್‌ಇಂಡೀಸ್ ತಂಡದಿಂದ ಸೋಲುಂಡಿತು. ಇದನ್ನು ಎನ್ಐಟಿಯಲ್ಲಿನ ವಿದ್ಯಾರ್ಥಿಗಳ ಒಂದು ಗುಂಪು ಹರ್ಷದಿಂದ ಆಚರಿಸಿತಂತೆ. ಇದರಿಂದ ಕುಪಿತಗೊಂಡ ಇನ್ನೊಂದು ಕಾಶ್ಮೀರದ ಹೊರಗಿನಿಂದ ಬಂದ ವಿದ್ಯಾರ್ಥಿಗಳ ಒಂದು ಗುಂಪು ಅದನ್ನು ವಿರೋಧಿಸಿತು. ಎರಡೂ ಗುಂಪುಗಳ ನಡುವೆ ಕಿತ್ತಾಟ ನಡೆಯಿತು.

ಮರುದಿನ ಎಪ್ರಿಲ್ 1 ರಂದು, ಸ್ಥಳೀಯರಲ್ಲದ ವಿದ್ಯಾರ್ಥಿಗಳ ಗುಂಪು ತ್ರಿವರ್ಣ ಬಾವುಟ ಹಿಡಿದು-ಕೊಂಡು 'ಭಾರತ್ ಮಾತಾಕೀ ಜೈ', 'ಹಿಂದುಸ್ತಾನ್ ಜಿಂದಾಬಾದ್' ,'ಪಾಕಿಸ್ತಾನ್ ಮುರ್ದಾಬಾದ್' ಮುಂತಾದ ಘೋಷಣೆಗಳನ್ನು ಕೂಗಿತು. ಬಿಜೆಪಿ ಎಂಪಿ ತರುಣ್ ವಿಜಯ್ ಈ 'ದೇಶಪ್ರೇಮಿ ವಿದ್ಯಾರ್ಥಿಗಳು' ತ್ರಿವರ್ಣ ಬಾವುಟವನ್ನು ಕ್ಯಾಂಪಸ್‌ನಲ್ಲಿ ಹಾರಿಸಿ 'ಪ್ರತ್ಯೇಕತಾವಾದಿಗಳಿಗೆ ಪಾಠ ಕಲಿಸಿದ್ದಾರೆ' ಎಂದು ಹೊಗಳಿದರಂತೆ. ಇದಕ್ಕೆ ಪ್ರತಿಯಾಗಿ ಕಾಶ್ಮೀರಿ ವಿದ್ಯಾರ್ಥಿಗಳ ಗುಂಪು 'ಹಂ ಕ್ಯಾ ಚಾಹತೇ -ಆಝಾದಿ' ಎಂದು ಘೋಷಣೆ ಕೂಗಿತಂತೆ(ಇಂಡಿಯನ್ ಎಕ್ಸ್‌ಪ್ರೆಸ್, ಎಪ್ರಿಲ್ 7). ಕ್ಯಾಂಪಸ್‌ನಲ್ಲಿ ಗಲಭೆಯ ಪರಿಸ್ಥಿತಿ ಸೃಷ್ಟಿಯಾಯಿತು.

ಎಪ್ರಿಲ್ 2ರಂದು ಸಂಸ್ಥೆಯ ನಿರ್ದೇಶಕರು ಮಧ್ಯಪ್ರವೇಶಿಸಿ ಪರಿಸ್ಥಿತಿ ಹತೋಟಿಗೆ ಬಂದಿತು, ಬಲವಾದ ಸಿಆರ್‌ಪಿಎಫ್ ಭದ್ರತೆ ಒದಗಿಸಲಾಯಿತು. ಮರುದಿನ ಭಾನುವಾರ, ಸೋಮವಾರ ಎಪ್ರಿಲ್ 4ರಂದು ತರಗತಿಗಳು ಎಂದಿನಂತೆ ನಡೆದವು. ಆದರೆ ಎಪ್ರಿಲ್ 5ರಂದು ಮತ್ತೆ ಗಲಭೆ, ಸ್ಥಳೀಯರಲ್ಲದ ವಿದ್ಯಾರ್ಥಿಗಳ ಗುಂಪು ಬಾವುಟ, ಘೋಷಣಾ ಫಲಕಗಳನ್ನು ಹಿಡಿದು ಪ್ರತಿಭಟನೆ ನಡೆಸಿದರು. ಪೋಲೀಸರು ಅವರು ಪ್ರತಿಭಟಿಸುತ್ತ ಕ್ಯಾಂಪಸ್‌ನಿಂದ ಹೊರಗೆ ಹೊರಟಿದ್ದನ್ನು ಅವರದೇ ಭದ್ರತೆಯ ದೃಷ್ಟಿಯಿಂದ ತಡೆದುದರಿಂದ ಕಿತ್ತಾಟ ಆರಂಭವಾಯಿತು ಎನ್ನುತ್ತಾರೆ. ಪೋಲಿಸರು ಹಾಸ್ಟೆಲುಗಳಿಗೆ ನುಗ್ಗಿ ಸ್ಥಳೀಯರಲ್ಲದ ವಿದ್ಯಾರ್ಥಿಗಳನ್ನು ಥಳಿಸಿದರು, ಬೆದರಿಸಿದರು ಎನ್ನಲಾಗಿದೆ. ಸ್ಥಳೀಯರಲ್ಲದವರ ಪ್ರತಿಭಟನೆ ಈಗ ಭದ್ರತೆಯ ಪ್ರಶ್ನೆಯತ್ತ ತಿರುಗಿತು, ತಮಗೆ ಇಲ್ಲಿ ಭದ್ರತೆಯಿಲ್ಲ ಎಂಬುದರತ್ತ ತಿರುಗಿ-ತು, ಕೊನೆಗೆ ಎನ್ಐಟಿಯನ್ನು ಇಲ್ಲಿಂದ ಜಮ್ಮುಗೆ ವರ್ಗಾಯಿಸಬೇಕು ಎಂಬುದು ಅವರ ಮುಖ್ಯ ಬೇಡಿಕೆಯಾಯ್ತು. ಅತ್ತ ದಿಲ್ಲಿ ಮತ್ತು ಇತರೆಡೆಗಳಲ್ಲಿ ಎಬಿವಿಪಿ ಮತ್ತಿತರ ಸಂಘಟನೆಗಳು, ಅನುಪಮ್ ಖೇರ್‌ರಂತವರು ಇವರಿಗೆ ಬೆಂಬಲವಾಗಿ 'ಚಲೋ ಶ್ರೀನಗರ'ದ ಕರೆ ನೀಡಿದರು.

ಈ ಬೆಳವಣಿಗೆಗಳನ್ನು ಈಗ ಬಿಜೆಪಿ ಸರಕಾರ ಪ್ರೋತ್ಸಾಹಿಸುತ್ತಿರುವ ಖೋಟಾ ರಾಷ್ಟ್ರೀಯವಾದದ ಹಿನ್ನೆಲೆಯಲ್ಲಿ ಅರ್ಥ ಮಾಡಿಕೊಳ್ಳಬೇಕಾಗಿದೆ ಎಂದು ಸಿಪಿಐ(ಎಂ) ರಾಜ್ಯ ಸಮಿತಿ ಅಭಿಪ್ರಾಯ ಪಟ್ಟಿದೆ.

1960ರಲ್ಲಿ ಸ್ವತಂತ್ರ ಭಾರತದ ಎರಡನೇ ಪಂಚವಾರ್ಷಿಕ ಯೋಜನೆಯಲ್ಲಿ ತಂತ್ರಜ್ಞಾನ ಶಿಕ್ಷಣಕ್ಕಾಗಿ ಆರಂಭವಾದ ಮೊದಲ 17 ಪ್ರಾದೇಶಿಕ ಇಂಜಿನಿಯರಿಂಗ್ ಕಾಲೇಜು(ಆರ್‌ಇಸಿ)ಗಳಲ್ಲಿ ಇದೂ ಒಂದು. ಮುಂದೆ ಇವೆಲ್ಲ(ನಮ್ಮ ರಾಜ್ಯದ ಸುರತ್ಕಲ್‌ನಲ್ಲಿನ ಆರ್‌ಇಸಿಯೂ ಸೇರಿದಂತೆ) 2003ರಲ್ಲಿ ಎನ್ಐಟಿ, ಅಂದರೆ ರಾಷ್ಟ್ರೀಯ ತಂತ್ರಜ್ಞಾನ ಸಂಸ್ಥೆಗಳಾಗಿ ಮೇಲ್ದರ್ಜೆಗೆ ಏರಿಸಲಾಯಿತು. ಈ 56 ವರ್ಷಗಳಲ್ಲಿ ಕಾಶ್ಮೀರ ಕಣಿವೆಯಲ್ಲಿ ಬಹಳಷ್ಟು ಕಹಿ ಘಟನೆಗಳು ನಡೆದರೂ ಈ ಸಂಸ್ಥೆಯ ಆವರಣದಲ್ಲಿ ಈಗ ಬಿಂಬಿಸುತ್ತಿರುವ ಅಭದ್ರತೆಯ ಭಾವನೆ ಎಂದೂ ಕಂಡಿರಲಿಲ್ಲ. ಈಗಲೂ ಕೆಲವು ಸ್ಥಳೀಯರಲ್ಲದ ವಿದ್ಯಾರ್ಥಿಗಳು ಈ ಸಂಸ್ಥೆಯನ್ನು ಈ ರೀತಿ ನಕಾರಾತ್ಮವಾಗಿ ಬಿಂಬಿಸಲು ಪಟ್ಟಭದ್ರ ಹಿತಾಸಕ್ತಿಗಳು ಪ್ರಯತ್ನಿಸುತ್ತಿದ್ದಾರೆ ಎಂದು ಆತಂಕ ವ್ಯಕ್ತಪಡಿಸಿದ್ದಾರೆ.



ಅದೇ ರೀತಿ ಸ್ಥಳೀಯರು ಈ ಸಂಸ್ಥೆಯ ಆವರಣದಲ್ಲಿ ಶಾಂತಿ-ಸೌಹಾರ್ದ ಕಾಪಾಡುವ ಕೆಲಸದಲ್ಲಿ ನೆರವಾಗಲು ಮುಂದೆ ಬಂದಿದ್ದಾರೆ ಎಂದಿರುವ ಸಿಪಿಐ(ಎಂ) ರಾಜ್ಯಸಮಿತಿ ರಾಜ್ಯ ಮತ್ತು ಕೇಂದ್ರ ಸರಕಾರಗಳು ಪರಿಸ್ಥಿತಿಯನ್ನು ಜಾಗರೂಕತೆಯಿಂದ ನಿರ್ವಹಿಸಬೇಕು ಎಂದು ಆಗ್ರಹಿಸಿದೆ.

ಭದ್ರತೆಯ ಕುರಿತ ಈ ಸಂಸ್ಥೆಯ ಸ್ಥಳೀಯರಲ್ಲದ ವಿದ್ಯಾರ್ಥಿಗಳ ಆತಂಕಗಳನ್ನು ನಿವಾರಿಸಬೇಕು, ಅದೇ ವೇಳೆಗೆ ಜಮ್ಮು-ಕಾಶ್ಮೀರದ ಹೊರಗೆ ಕಾಶ್ಮೀರಿ ವಿದ್ಯಾರ್ಥಿಗಳ ಆತಂಕಗಳನ್ನೂ ನಿವಾರಿಸಬೇಕು. ದೇಶದ ಎಲ್ಲೇ ಆದರೂ ಉನ್ನತ ಶಿಕ್ಷಣ ಪಡೆಯುತ್ತಿರುವವರು ಅದನ್ನು ನಿರಾತಂಕವಾಗಿ ಪಡೆಯುವಂತಾಗಬೇಕು ಎಂದು ಸಿಪಿಐ(ಎಂ) ಜಮ್ಮು-ಕಾಶ್ಮೀರ ರಾಜ್ಯ ಸಮಿತಿ ಆಶಯ ವ್ಯಕ್ತಪಡಿಸಿದೆ.

ಸಿಪಿಐ(ಎಂ) ಶಾಸಕ ಮಹಮ್ಮದ್ ಯೂಸುಫ್ ತರಿಗಾಮಿಯವರು ಈ ಸಂಸ್ಥೆಯ ಹೆಸರಿಗೆ ಕಳಂಕ ಬಾರದಂತೆ ನೋಡಿಕೊಳ್ಳಬೇಕು, ಸ್ಥಳೀಯರು ಮತ್ತು ಸ್ಥಳೀಯರಲ್ಲದ ವಿದ್ಯಾರ್ಥಿಗಳು ಎಂಬ ಬೇಧಭಾವವುಂಟಾಗದಮತೆ ಪರಸ್ಪರರ ಒಳಿತನ್ನು ಗಮನದಲ್ಲಿಟ್ಟುಕೊಂಡು ಸೌಹಾರ್ದಯುತ ಪರಿಹಾರಕ್ಕೆ ಪ್ರಯತ್ನಿಸಬೇಕು ಎಂದು ಮನವಿ ಮಾಡಿಕೊಂಡಿದ್ದಾರೆ. ವಿದ್ಯಾರ್ಥಿಗಳ ಮೇಲೆ ಪೋಲೀಸ್ ಬಲಪ್ರಯೋಗವನ್ನು ಯಾವುದೇ ರೀತಿಯಲ್ಲೂ ಸಮರ್ಥಿಸಲಾಗದು ಎಂದ ಅವರು ಸಂಸ್ಥೆಯ ಆಡಳಿತ ಮಂಡಳಿ ವಿದ್ಯಾರ್ಥಿಗಳ ನಡುವಿನ ಆತಂಕಗಳನ್ನು ತಮ್ಮ ಸ್ವಾರ್ಥಕ್ಕೆ ಬಳಸಲು ಪ್ರಯತ್ನಿಸುವವರ ಮೇಲೆ ಕಣ್ಣಿಡಬೇಕು ಎಂದೂ ಹೇಳಿದ್ದಾರೆ.

ಪಶ್ಚಿಮ ಬಂಗಾಲ: ಮುಕ್ತ, ನ್ಯಾಯ ಚುನಾವಣೆಯ ಭರವಸೆ.......

ಪುಟ 2 ರಿಂದ



ಇವು ನಡೆಯಲು ಒಂದು ಮುಖ್ಯ ಕಾರಣ ಕೇಂದ್ರೀಯ ಪಡೆಗಳ ನಿಷ್ಕ್ರಿಯತೆ ಮತ್ತು ದುರುದ್ದೇಶಪೂರ್ವಕ ದುರ್ಬಳಕೆ ಎಂದು ಈ ಮನವಿ ಹೇಳಿದೆ. ಚುನಾವಣಾ ಆಯೋಗ ಮತ್ತೆ-ಮತ್ತೆ ಭರವಸೆ ನೀಡಿದರೂ , ಮತದಾನದ ಹಿಂದಿನ ದಿನ ಕೇಂದ್ರೀಯ ಪಡೆಗಳನ್ನು ಬಳಸಲಿಲ್ಲ, ಮತದಾನದ ದಿನವಂತೂ ಅವು ಕೆಲಸವಿಲ್ಲದೆ ಕುಳಿತಿದ್ದವು. ತಮ್ಮ ಕಣ್ಣೆದುರೇ ಹಿಂಸಾಚಾರ ಮತ್ತು ದಾಳಿ ನಡೆ-ಯುತ್ತಿದ್ದರೂ ಅವು ಕೈಕಟ್ಟಿ ಕುಳಿತಿದ್ದವು.

ಇನ್ನೂ ಅತ್ಯಂತ ಬೇಸರದ ಸಂಗತಿಯೆಂದರೆ, ಚುನಾವಣಾ ಯಂತ್ರವನ್ನು ನಡೆಸಬೇಕಾಗಿರುವವರ ನಿಲುವು. ದೂರುಗಳಿಗೆ ಅವರು ಸ್ಪಂದಿಸುತ್ತಿರಲಿಲ್ಲ, ಕೆಲವರು ಮೊಬೈಲುಗಳನ್ನು ಸ್ವಿಚ್ ಆಫ್ ಮಾಡಿಕೊಂಡಿದ್ದರು. ಕೆಲವು ಕೇಂದ್ರೀಯ ವೀಕ್ಷಕರನ್ನು ತಲುಪುವುದೂ ಸಾಧ್ಯವಾಗಲಿಲ್ಲ ಎಂದು ಮನವಿ ಖಾರವಾಗಿ ಹೇಳಿತ್ತು.

ಇದಕ್ಕೆ ಮೊದಲು ಮಾರ್ಚ್ 18, 29, ಎಪ್ರಿಲ್ 2, 6 ಹಾಗೂ 9ರಂದು ಮುಖ್ಯ ಚುನಾವಣಾ ಆಯುಕ್ತರನ್ನು ಭೇಟಿಯಾದ ಸಿಪಿಐ(ಎಂ) ನಿಯೋಗಗಳು ಆಳುವ ಪಕ್ಷದ ಕಿಡಿಗೇಡಿ ಕೃತ್ಯಗಳತ್ತ ಗಮನ ಸೆಳೆದಿದ್ದವು.

ಎಪ್ರಿಲ್ 12ರಂದು ಮತ್ತೆ ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚೂರಿ ಹಾಗೂ ಕೇಂದ್ರ ಕಾರ್ಯದರ್ಶಿ ಮಂಡಳಿ ಸದಸ್ಯ ನೀಲೋತ್ಪಲ ಬಸು ಮುಖ್ಯ ಚುನಾವಣಾ ಆಯುಕ್ತರನ್ನು ಭೇಟಿಯಾಗಿ ಚುನಾವಣಾ ಆಯೋಗ ಸಂವಿಧಾನ ತನಗೆ ನೀಡಿರುವ ಆದೇಶವನ್ನು ಮತ್ತು ಜವಾಬ್ದಾರಿಯನ್ನು ನಿರ್ವಹಿಸಲು ಸಕಲ ಕ್ರಮಗಳನ್ನೂ ಕೈಗೊಳ್ಳಬೇಕು ಎಂದು ಆಗ್ರಹಿಸುವ ಮನವಿಯನ್ನು ಸಲ್ಲಿಸಿದ್ದಾರೆ.

ಎಪ್ರಿಲ್ 11ರಂದು ಮತದಾನದ ವೇಳೆ ವ್ಯಾಪಕ ಅಕ್ರಮಗಳು, ಹಿಂಸಾಚಾರಗಳು ನಡೆದಿದ್ದರೂ, ಕೊಲ್ಕತಾದಲ್ಲಿ ಪತ್ರಿಕಾ ಹೇಳಿಕೆ ನೀಡಿದ ಉಪ ಚುನಾವಣಾ ಆಯುಕ್ತರು ಸಾಮಾನ್ಯ ಸ್ಥಿತಿಯಲ್ಲಿ ಮತದಾನ ನಡೆದಿದೆ ಎಂದಿರುವ ಬಗ್ಗೆ ಈ ಮನವಿಯಲ್ಲಿ ಆಶ್ಚರ್ಯ ವ್ಯಕ್ತಪಡಿಸಲಾಗಿದೆ. ನಡೆದಿರುವ ಘಟನೆಗಳಲ್ಲ ಮತಗಟ್ಟೆಗಳ ಹೊರಗೆ ನಡೆದವುಗಳು, ಅದನ್ನು ತಡೆಯುವ ಹೊಣೆ ತಮ್ಮದಲ್ಲ ಎಂಬತೆ ಹೇಳಿಕೆ ನೀಡಿರುವ ಬಗ್ಗೆ ಸಿಪಿಐ(ಎಂ) ಬಲವಾದ ಆಕ್ಷೇಪ ವ್ಯಕ್ತ ಪಡಿಸಿತು.

ಅಂದರೆ ಚುನಾವಣಾ ಆಯೋಗ ಮುಕ್ತ ಮತ್ತು ನ್ಯಾಯಯುತ ಚುನಾವಣೆಗಳನ್ನು ನಡೆಸುವ ತನ್ನ ಹೊಣೆಗಾರಿಕೆಯ ಬಗ್ಗೆ ಹಿಂದೆ ನೀಡಿರುವ ಭರವಸೆಗಳಿಂದ ತಪ್ಪಿಸಿಕೊಳ್ಳಲು ಪ್ರಯತ್ನಿಸುತ್ತಿರುವಂತೆ ಕಾಣುತ್ತಿದೆ ಎಂದು ಕಟುವಾಗಿ ಹೇಳಿರುವ ಸಿಪಿಐ(ಎಂ) ಮನವಿ ಉಳಿದ 245 ಕ್ಷೇತ್ರಗಳ ಐದು ಘಟ್ಟಗಳ ಮತದಾನದಲ್ಲಿ ತನ್ನ ಹೊಣೆಗಾರಿಕೆಯನ್ನು ಅದು ನಿರ್ವಹಿಸಬೇಕು ಎಂದು ಸಿಪಿಐ(ಎಂ) ಆಗ್ರಹಿಸಿದೆ.

ಈ ನಡುವೆ, ಕೊನೆಗೂ ಕೊಲ್ಕತಾದ ಪೊಲಿಸ್ ಕಮಿಶನರ್ ರಾಜೀವ್ ಕುಮಾರ್ ಅವರನ್ನು ವರ್ಗಾಯಿಸಿರುವ ಚುನಾವಣಾ ಆಯೋಗ ಎಪ್ರಿಲ್ 14ರಿಂದ ಪಶ್ಚಿಮ ಬಂಗಾಲಕ್ಕೆ ಎರಡು ದಿನಗಳ ಭೇಟಿ ನೀಡುವುದಾಗಿ ಪ್ರಕಟಿಸಿದೆ. ಮುಖ್ಯ ಚುನಾವಣಾ ಆಯುಕ್ತರ ಜೊತೆಗೆ ಉಳಿದಿಬ್ಬರು ಚುನಾವಣಾ ಆಯುಕ್ತರೂ ಇರುತಾರೆ.

ಸಮರ ತೀವ್ರಗೊಳ್ಳುತ್ತಿದೆ

ಅತ್ತ ಚುನಾವಣಾ ಕ್ಷೇತ್ರದಲ್ಲಿ ಸಮರ ರೇಖೆಗಳು ಸ್ಪಷ್ಟಗೊಳ್ಳುತ್ತಿವೆ. ಶಾರದಾ ಚಿಟ್‌ಫಂಡ್ ಹಗರಣದ ಬಗ್ಗೆ ಸಿಬಿಐ ತನಿಖೆ ಬಹುಶಃ ಉದ್ದೇಶಪೂರ್ವಕವಾಗಿಯೇ ನಿಧಾನಗತಿಯಲ್ಲಿ ಸಾಗಿದ್ದರೂ ನಾರದ ನ್ಯೂಸ್‌ನ ಕುಟುಕು ಕಾರ್ಯಾಚರಣೆ ಭ್ರಷ್ಟಾಚಾರದ ಸಂಗತಿಯನ್ನು ಮತ್ತೆ ರಂಗದ ಮೇಲೆ ಕೇಂದ್ರಕ್ಕರ ತಂದು ನಿಲ್ಲಿಸಿದೆ. ಮೊದಲು ಈ ಬಗ್ಗೆ ಉಪೇಕ್ಷೆಯನ್ನು ತೋರಿದರೂ ಈಗ 'ಆಂತರಿಕ ತನಿಖೆ' ನಡೆಸುವುದಾಗಿ ಆಳು ವಪಕ್ ಷಹೇಳಬೇಕಾಗಿ ಬಮದಿದೆ.

ಪಶ್ಚಿಮ ಬಂಗಾಲ ಸರಕಾರದ ಮಾಜಿ ಮುಖ್ಯ ಕಾರ್ಯದರ್ಶಿ ಅರ್ಧೇಂದು ಸೆನ್, ನಿವೃತ್ತ ನ್ಯಾಯಮೂರ್ತಿ ಆಸೋಕ ಕುಮಾರ್ ಗಂಗೂಲಿ, ಮತ್ತಿತರ ಕಾನೂನು ಪ್ರತಿಷ್ಠಿತರು ಮತ್ತು ಬುದ್ಧಿಜೀವಿಗಳ ಬೆಂಬಲ ಎಡಪಕ್ಷಗಳ ಪ್ರಚಾರಕ್ಕೆ ಬಲ ತುಂಬಿದೆ. ಕಳೆದ ಐದು ವರ್ಷಗಳಲ್ಲಿ ದಾಳಿಗಳಿಗೆ ಒಳಗಾದ ಬುದ್ಧಿಜೀವಿಗಳ ರಚಿಸಿಕೊಂಡಿರುವ 'ಆಕ್ರಾಂತ ಆಮ್ರ' ಇಬ್ಬರು ಅಭ್ಯರ್ಥಿಗಳನ್ನು ಕಣಕ್ಕಿಳಿಸಲು ನಿರ್ಧರಿಸಿದೆ. ಇವರಲ್ಲಿ ಒಬ್ಬರು ಮುಖ್ಯಮಂತ್ರಿಗಳ ಕಾರ್ಟೂನನ್ನು ಬೇರೆಯವರ ಗಮನಕ್ಕೆ ತಂದದ್ದಕ್ಕಾಗಿ ಬಂಧಿತರಾದ ಜಾಧವ್‌ಪುರ ವಿವಿಯ ಪ್ರೊ> ಅಂಬಿಕೇಶ ಮಹಾಪಾತ್ರ ಮತ್ತು ಇನ್ನೊಬ್ಬರು ಒಂದು ಜಲಾಶಯವನ್ನು ರಕ್ಷಸಲು ಹೋಗಿ ಟಿಎಂಸಿ ಗೂಂಡಾಗಳಿಗೆ ಬಲಿಯಾದವ್ರ ಪತ್ನಿ ಪ್ರತಿಮಾ ದತ್ತ. ಇವರಿಬ್ಬರಿಗೂ ಎಡರಂಗ ಮತ್ತು ಕಾಂಗ್ರೆಸ್‌ಪಕ್ಷ ಕೂಡ ಬೆಂಬಲ ನೀಡುತ್ತಿವೆ.

ಮತ್ತೆ ಅಧಿಕಾರಕ್ಕೆ ಮರಳುವ ದಾರಿ ಬಹಳಷ್ಟು ಕಠಿಣವಾಗುತ್ತಿದೆ ಎಂದು ಅರಿತುಕೊಳ್ಳುತ್ತಿರುವ ಟಿಎಂಸಿ ಹೆಚ್ಚೆಚ್ಚು ಹಿಂಸಾಚಾರಕ್ಕೆ ಇಳಿಯುತ್ತಿರುವುದು ಎಪ್ರಿಲ್11ರ ಮತದಾನದಲ್ಲಿ ಕಂಡು ಬಂದಿದೆ. ಈ ಹಿನ್ನೆಲೆಯಲ್ಲಿ ಚುನಾವಣಾ ಆಯೋಗ ತನ್ನ ಹೊಣೆ ನಿಭಾಯಿಸಬೇಕೆಂದು ಸಿಪಿಐ(ಎಂ) ಆಗ್ರಹಿಸುತ್ತಿದೆ.

ಕೇರಳ: ಪಟಾಕಿ ದುರಂತ

ಪುಟ 2 ರಿಂದ

ತಂದಿಟ್ಟದ್ದ ಸಿಡಿಮದ್ದುಗಳ ದಾಸ್ತಾನಿಗೂ ಬಿದ್ದು ಬೃಹತ್ ಸ್ಫೋಟದಿಂದ ಉಂಟಾದ ದೊಡ್ಡ ಅಗ್ನಿ ದುರಂತ ಇಷ್ಟೊಂದು ಜನಗಳ ಪ್ರಾಣಬಲಿ ಪಡೆಯಿತು.

ದೇವಸ್ಥಾನದ ಆಡಳಿತಗಾರರು ಪಟಾಕಿ ಪ್ರದರ್ಶನದ ಸ್ಪರ್ಧೆ ಏರ್ಪಡಿಸಿದ್ದಾರೆ ಎಂಬ ಸ್ಥಳೀಯ ಪೋಲೀಸರ ಮಾಹಿತಿಯ ಮೇರೆಗೆ ಕೊಳ್ಳಂ ಜಿಲ್ಲಾ ಆಡಳಿತ ಈ ಪಟಾಕಿ ಪ್ರದರ್ಶನಕ್ಕೆ ಪರವಾನಿಗೆಯನ್ನು ನಿರಾಕರಿಸಿತ್ತು. ಇದನ್ನು ಉಲ್ಲಂಘಿಸಿದರೆ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಪೋಲೀಸ್ ಕಮಿಶನರ್ ಕಚೇರಿಗೂ ಸಂದೇಶ ಕಳಿಸಲಾಗಿತ್ತಂತೆ. ಆದರೆ ದೇವಸ್ಥಾನದ ಆಡಳಿತಗಾರರು ಅದನ್ನು ಉಪೇಕ್ಷಿಸಿ ಈ ಸ್ಪರ್ಧೆಯ ಬಗ್ಗೆ ಬಹಳ ಪ್ರಚಾರ ಮಾಡಿದ್ದರಿಂದ ಸುತ್ತಮುತ್ತಲ ಜಿಲ್ಲೆಗಳಿಂದ ಬಹಳಷ್ಟು ಜನ ಇದನ್ನು ವೀಕ್ಷಿಸಲು ಜಮಾಯಿಸಿದ್ದರು ಎನ್ನಲಾಗಿದೆ. ಕೊನೆಗೆ ಈ ಪಟಾಕಿ ಪ್ರದರ್ಶನ ಪೋಲೀಸರ ಹಾಜರಾತಿಯಲ್ಲೇ ನಡೆಯಿತು ಎನ್ನಲಾಗಿದೆ.

ರಾಜ್ಯ ಸರಕಾರ ಈಗ ಒಂದು ನ್ಯಾಯಾಂಗ ತನಿಖೆಗೆ ಆದೇಶವಿತ್ತಿದೆ, ಕ್ರೈಮ್ ಬ್ರಾಂಚ್ ತನಿಖೆ ಕೂಡ ಆರಂಭವಾಗಿದೆ. ಪರವೂರ್ ಪೋಲೀಸರು ದೇವಸ್ಥಾನದ ಆಡಳಿತಗಾರರು ಮತ್ತು ಈ ಸಿಡಿಮದ್ದು ಪ್ರದರ್ಶನದ ಕಂಟ್ರಾಕ್ಟರ್ ಮೇಲೆ ಕೇಸು ದಾಖಲಿಸಿದ್ದಾರೆ. ಈತ ಕೂಡ 80ಶೇ. ಸುಟ್ಟ ಗಾಯಗಳೊಂದಿಗೆ ಆಸ್ಪತ್ರೆಯಲ್ಲಿದ್ದಾನೆ ಎಂದು ವರದಿಯಾಗಿದೆ. ಜಿಲ್ಲಾ ಕಲೆಕ್ಟರ್ ಪೋಲೀಸ್ ಕಮಿಶನರ್‌ಗೆ ಶೋಕಾಸ್ ನೋಟೀಸ್ ಕಳಿಸಿದ್ದಾರೆ. ಈ ನಡುವೆ ಕೇರಳ ಹೈಕೋರ್ಟ್ ರಾಜ್ಯದ ಎಲ್ಲ ಪೂಜಾಸ್ಥಳಗಳಲ್ಲಿ ಸೂರ್ಯಾಸ್ತದಿಂದ ಸೂರ್ಯೋದಯದ ವರೆಗೆ, ಅಪಾಯಕಾರಿ ಸಿಡಿಮದ್ದುಗಳು ಮಾತ್ರವಲ್ಲ, ಸದ್ದು ಮಾಡುವ ಪಟಾಕಿ ಪ್ರದರ್ಶನವನ್ನು ನಿಷೇಧಿಸಿದೆ.

ಪ್ರಧಾನ ಮಂತ್ರಿಗಳು ಅಖಿಲ ಭಾರತ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಪರಿಣಿತ ವೈದ್ಯರೊಂದಿಗೆ ಭೇಟಿ ನೀಡಿದ್ದಾರೆ. ಅವರು ತಮ್ಮ 'ಪಾಪ ಪ್ರಜ್ಞೆ'ಯೊಂದಿಗೆ ಅಲ್ಲಿಗೆ ಬಂದಿದ್ದಾರೆ ಎಂದು ಈ ಹಿಂದೆ ಆರೆಸ್ಸೆಸ್‌ಗೆ ಆಪ್ತರಾಗಿದ್ದ ಮೋಹನ್ ಗುರುಸ್ವಾಮಿ ತಮ್ಮ ಫೇಸ್‌ಬುಕ್ ಪುಟದಲ್ಲಿ ಬರೆದಿದ್ದಾರೆ. ಕೊಳ್ಳಂ ಜಿಲ್ಲಾ ಕಲೆಕ್ಟರ್ ಆಡಳಿತ ಈ ಪಟಾಕಿ ಪ್ರದರ್ಶನಕ್ಕೆ ಪರವಾನಿಗೆ ನಿರಾಕರಿಸಿತ್ತು. ಆದರೆ ಆರೆಸ್ಸೆಸ್ ಪ್ರಾಬಲ್ಯದ ದೇವಸ್ಥಾನ ಸಮಿತಿ ಉದ್ದೇಶಪೂರ್ವಕವಾಗಿಯೇ ಈ ಆದೇಶವನ್ನು ಪಾಲಿಸಲಿಲ್ಲ. ಜಿಲ್ಲಾ ಕಲೆಕ್ಟರ್ ಮತ್ತು ಜಿಲ್ಲಾ ಪೋಲೀಸ್ ವರಿಷ್ಠರಿಬ್ಬರೂ ಮುಸ್ಲಿಮರಾದ್ದರಿಂದ ಅವರು ನಿಷೇಧವನ್ನು ಜಾರಿ ಮಾಡಿದರೆ ಅದನ್ನೇ ಚುನಾವಣಾ ಪ್ರಚಾರಕ್ಕೆ ಬಳಸಿಕೊಳ್ಳಬೇಕೆಂದಿದ್ದರು. ರಾಜ್ಯ ಸರಕಾರವೂ ಒತ್ತಡಕ್ಕೆ ತಲೆಬಾಗಿತು. ಪ್ರಧಾನ ಮಂತ್ರಿಗಳಿಗೆ ಇವೆಲ್ಲ ಗೊತ್ತಿರುವುದರಿಂದ ಭೇಟಿಗೆ ಧಾವಿಸಿದ್ದಾರೆ ಎಂದು ಮೋಹನ್ ಗುರುಸ್ವಾಮಿಯವರ ಫೇಸ್‌ಬುಕ್ ಪೋಸ್ಟ್ ಹೇಳಿದೆ. ಕಾಂಗ್ರೆಸ್ ಉಪಾಧ್ಯಕ್ಷ ರಾಹುಲ್ ಗಾಂಧಿ ಕೂಡ ದೇವಸ್ಥಾನಕ್ಕೆ ಮತ್ತು ಆಸ್ಪತ್ರೆಗಳಿಗೆ ಭೇಟಿ ನೀಡಿದರು.

ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚೂರಿ, ರಾಜ್ಯ ಕಾರ್ಯದರ್ಶಿ ಕೊಡಿಯೇರಿ ಬಾಲಕೃಷ್ಣನ್, ಪಿಬಿ ಸದಸ್ಯರಾದ ಪಿನರಾಯಿ ವಿಜಯನ್ ಮತ್ತು ಕೇರಳ ವಿಧಾನ ಸಭೆಯಲ್ಲಿ ಪ್ರತಿಪಕ್ಷದ ಮುಖಂಡ ವಿ.ಎಸ್. ಅಚ್ಯುತಾನಂದನ್ ಕೂಡ ದುರಂತದ ಸ್ಥಳ ಮತ್ತು ಆಸ್ಪತ್ರೆಗಳಿಗೆ ಭೇಟಿ ನೀಡಿದರು. ಈ ದುರಂತವನ್ನು ಒಂದು ರಾಷ್ಟ್ರೀಯ ದುರಂತ ಎಂದು ಘೋಷಿಸಿ ಅದಕ್ಕೆ ತಕ್ಕ ಪರಿಹಾರ ಒದಗಿಸಬೇಕೆಂದು ಆಗ್ರಹಿಸಿದ್ದಾರೆ.

ಈ ಸ್ಫೋಟ ನಿಜಕ್ಕೂ ಆಘಾತಕಾರಿ, ಈ ಬಗ್ಗೆ ಹಾಲಿ ನ್ಯಾಯಾಧೀಶರಿಂದಲೇ ತನಿಖೆ ಮಾಡಿಸಬೇಕು, ಈ ದುರಂತಕ್ಕೆ ಬಲಿಯಾಗಿ ಪ್ರಾಣ ಕಳಕೊಂಡ ಮತ್ತು ಗಾಯಗೊಂಡಿರುವವರ ಕುಟುಂಬಗಳಲ್ಲಿ ಒಬ್ಬರಿಗಾದರೂ ಸರಕಾರೀ ಉದ್ಯೋಗ ಕೊಡಬೇಕು ಹಾಗೂ ಈ ದುರಂತದಲ್ಲಿ ಆಸ್ತಿಗಳಿಗೆ ಅಪಾರ ಹಾನಿ ಅನುಭವಿಸಿರುವವರಿಗೂ ಪರಿಹಾರ ಒದಗಿಸಬೇಕು ಎಂದು ಯೆಚೂರಿ ಆಗ್ರಹಿಸಿದ್ದಾರೆ. ಕಲೆಕ್ಟರ್ ನಿಷೇಧಿಸಿದ್ದರೂ ಪೋಲೀಸ್ ಪರವಾನಿಗೆ ನೀಡಿದರು ಎನ್ನಲಾಗಿದೆ, ಇದಕ್ಕೆ ರಾಜ್ಯ ಸರಕಾರ ಸ್ಪಷ್ಟೀಕರಣ ನೀಡಬೇಕು ಎಂದೂ ಅವರು ಆಗ್ರಹಿಸಿದ್ದಾರೆ.

ಜಗದ ಸುತ್ತ

ಶರತ್‌ಚಂದ್ರ

ಬ್ರೆಕ್ಸಿಟ್: ಯುರೋಪ್ ಕೂಟದಲ್ಲಿ ಬ್ರಿಟನ್ ಮುಂದುವರೆಯಬೇಕೆ?



ಈ ಪ್ರಶ್ನೆಯನ್ನು ಬ್ರಿಟಿಶ್ ನಾಗರಿಕರು ಜೂನ್ 23ರಂದು ಒಂದು ಜನಮತ-ಸಂಗ್ರಹದಲ್ಲಿ ಉತ್ತರಿಸಲಿದ್ದಾರೆ. ಯುರೋಪ್ ಕೂಟದಲ್ಲಿ ಇರಬೇಕೆ ಬೇಡವೇ ಎಂಬುದು ಈಗ ಕೂಟದ ಹಲವು ದೇಶಗಳಲ್ಲಿ ವಾದ-ವಿವಾದದ ವಿಷಯವಾಗಿದೆ. ಈಗಿನ ಆಳುವ ಕನ್ಸರ್ವೇಟಿವ್ ಪಕ್ಷದ ಒಳಗೆ ಈ ಬಗ್ಗೆ ಒಮ್ಮತ ಇಲ್ಲದಿರುವುದು ಈ ಜನಮತ-ಸಂಗ್ರಹಕ್ಕೆ ಕಾರಣವಾಗಿತ್ತು. ಕನ್ಸರ್ವೇಟಿವ್ ಪ್ರಧಾನಿ ಯುರೋಪ್ ಕೂಟದಲ್ಲಿ ಮುಂದುವರೆಯಬೇಕೆಂಬ ಅಭಿಪ್ರಾಯದವರು. ಆದರೆ ಅವರ ಆರು ಪ್ರಮುಖ ಸಚಿವರು ಮತ್ತು ಲಂಡನ್ ಮೇಯರ್ ಬ್ರಿಟನ್ ಕೂಟ ಬಿಡಬೇಕು ಎಂದು ವಾದಿಸುತ್ತಾರೆ. ಉಗ್ರ ಬಲಪಂಥಿಯ ಇಂಡಿಪೆಂಡೆನ್ಸ್ ಪಾರ್ಟಿ ಬ್ರಿಟನ್ ಕೂಟ ಬಿಡಬೇಕು ಎಂದು ಬಲವಾಗಿ ಪ್ರತಿಪಾದಿಸುತ್ತದೆ. ಲೇಬರ್, ಲಿಬರಲ್, ಸ್ಕಾಟಿಶ್ ನೇಶನಲ್ ಪಕ್ಷಗಳು ಕೂಟದಲ್ಲಿ ಮುಂದುವರೆಯಬೇಕು ಎಂದು ವಾದಿಸುತ್ತವೆ. ಆಧರೆ ಈ ಪಕ್ಷಗಳಲ್ಲೂ ಕೂಟ ಬಿಡಬೇಕು ಎಂಬ ಭಿನ್ನಾಭಿಪ್ರಾಯವುಳ್ಳವರೂ ಇದ್ದಾರೆ. ಸಾಮಾನ್ಯ ನಾಗರಿಕರ ಮಟ್ಟಕ್ಕೆ ಬಂದಾಗ, ಹೆಚ್ಚು ಕಡಿಮೆ ಅರ್ಧ-ಅರ್ಧ ಜನ ಕುಟ ಪರ-ವಿರೋಧವಾಗಿದ್ದಾರೆ ಎಂದು ಹೇಳಲಾಗಿದೆ. 'ಬ್ರಿಟಿಶ್ ಎಕ್ಸಿಟ್'ನ ಹ್ರಸ್ವ ಸ್ವರೂಪವಾಗಿ ಈ ಜನಮತಸಂಗ್ರಹಕ್ಕೆ 'ಬ್ರೆಕ್ಸಿಟ್' ಎಂದು ಕರೆಯಲಾಗುತ್ತಿದೆ.

ಯುರೋಪಿಯನ್ ಕೂಟ ಒಂದು ರಾಜಕೀಯ, ಆರ್ಥಿಕ ಒಕ್ಕೂಟವಾಗಿದ್ದು ಈಗ 25ಕ್ಕೂ ಹೆಚ್ಚು ದೇಶಗಳ ಕೂಟವಾಗಿದೆ. ಈ ಕೂಟದ ಹೆಚ್ಚಿನ ದೇಶಗಳು ನಾಟೋ ಮಿಲಿಟರಿ ಕೂಟದ ಸದಸ್ಯರೂ ಕೂಡಾ. ಎರಡನೇ ಮಹಾಯುದ್ಧದ ನಂತರ ಯುರೋಪಿಯನ್ ದೇಶಗಳು (ಅದರಲ್ಲೂ ಫ್ರಾನ್ಸ್, ಜರ್ಮನಿ) ಪರಸ್ಪರ ಕಾದಾಡಬಾರದು. ಆರ್ಥಿಕ ಸಹಕಾರ ಹೊಂದಿರಬೇಕು ಎಂದು ಪಶ್ಚಿಮ ಯುರೋಪಿನ 6 ದೇಶಗಳ ಆರ್ಥಿಕ ಕೂಟವಾಗಿ ಆರಂಭವಾಯಿತು. 1975ರಲ್ಲಿ ಬ್ರಿಟನ್ ಈ ಆರ್ಥಿಕ ಕೂಟವನ್ನು ಸೇರಿತು. ಆದರೆ ಮುಂದೆ ಹೆಚ್ಚು ನಿಕಟವಾದ (ಮತ್ತು ದೇಶಗಳಿಗೆ ಕಡಿಮೆ ಸಾರ್ವಭೌಮತೆ ಇರುವ) ರಾಜಕೀಯ-ಆರ್ಥಿಕ ಕೂಟ ಬಂದಾಗ ಬ್ರಿಟನಿನಲ್ಲಿ ಪುನಃ ಈ ವಿವಾದ ಆರಂಭವಾಗಿದೆ. ಯುರೋಪ್ ಕೂಟ, ಸಮಾನ ಯುರೋ ನಾಣ್ಯ ಮತ್ತು ಜಂಟಿ ವೀಸಾ ವ್ಯವಸ್ಥೆ ಆರಂಭಿಸಿದಾಗ; ಬ್ರಿಟನ್ ಅದರಿಂದ ಹೊರಗುಳಿಯಿತು.

ಯುರೋ ಕೂಟ ಹೆಚ್ಚೆಚ್ಚು ಕೇಂದ್ರೀಕೃತ ವಾಗುತ್ತಿರುವಾಗ, ಕೆಲವು ದೇಶಗಳ (ಜರ್ಮನಿ ಮತ್ತು ಫ್ರಾನ್ಸ್) ಯಜಮಾನ್ಯ ಹೆಚ್ಚುತ್ತಿರುವಾಗ, ಸಾರ್ವತ್ರಿಕ ಬಿಕ್ಕಟ್ಟು ತೀವ್ರವಾಗುತ್ತಿರುವಾಗ ಮತ್ತು ರಾಷ್ಟ್ರೀಯ ನೀತಿಗಳಿಗೆ ಅವಕಾಶ ಕಡಿಮೆಯಾಗುತ್ತಿರುವಾಗ ಹಲವರು ಅದನ್ನು ವಿರೋಧಿಸುತ್ತಿರುವುದು ಕಾಣುತ್ತಿರಬಹುದು. ಸಮಾನ ಯುರೋಪ್ ನೀತಿ ಹೆಸರಲ್ಲಿ ಈಗಿರುವ ಜನತೆಯ ಆಶೋತ್ತರಗಳನ್ನು ಪ್ರತಿಬಿಂಬಿಸುವ ಈಗಿನ ರಾಷ್ಟ್ರೀಯ ಕಾನೂನು/ನೀತಿ/ನಿಯಮಗಳನ್ನು ಕಿತ್ತು ಹಾಕಿ ಹೊಸ ಯುರೋ ಕಾನೂನು/ನೀತಿಗಳನ್ನು ಹೊರಿಸಲಾಗುತ್ತಿದೆ. ಇದನ್ನು ಪ್ರಜಾಪ್ರಭುತ್ವ ರೀತಿಯಲ್ಲಿ ಆಯ್ಕೆಯಾಗದ ಯುರೋ ಅಧಿಕಾರಶಾಹಿ ನಿರ್ಧರಿಸುತ್ತದೆ. ಆರ್ಥಿಕ ಬಿಕ್ಕಟ್ಟು ತೀವ್ರವಾಗುತ್ತಿರುವಾಗ 'ಮಿತವ್ಯಯ'ದ ಹೆಸರಲ್ಲಿ ಹಲವು ದೇಶಗಳ ಕಲ್ಯಾಣ ಯೋಜನೆಗಳನ್ನು ಕಡಿತಗೊಳಿಸಲಾಗುತ್ತಿದೆ. ಇದರಿಂದಾಗಿ ಯುರೋ ಕೂಟಕ್ಕೆ ವಿರೋಧ ಹೆಚ್ಚುತ್ತಿದೆ. ಯುರೋಪಿನ ಬೂರ್ಜ್ವಾ ಹೆಚ್ಚುಕಡಿಮೆ ಕಲೆತು ಒಂದಾಗಿರುವುದು ಯುರೋ ಕೂಟದ ಪ್ರಧಾನ ನೆಲೆ ಎಂದು ಗಮನಿಸಬೇಕು. ಈ ಕಾರಣಕ್ಕಾಗಿಯೇ ಹಿಂದೆ ಹೆಚ್ಚಿನ ಕಮ್ಯುನಿಸ್ಟ್ ಪಕ್ಷಗಳು ಇಡೀ ಯೂರೋಪನ್ನು ಸಮಾಜವಾದಿ ಆಗಿಸುವ ಕನಸು ಹೊತ್ತು ಯುರೋ ಕೂಟವನ್ನು ಬೆಂಬಲಿಸಿದ್ದವು. ಎರಡು ಮಹಾಯುದ್ಧಗಳ ಮೂಲಕ ನರಮೇಧ ನಡೆಸಿದ ಉಗ್ರ ರಾಷ್ಟ್ರವಾದವನ್ನು ದೂರವಿಡುವುದು ಕಾರಣವಾಗಿದ್ದಿರಬಹುದು. ಯು-ರೋದಾದ್ಯಂತ ಮಿತವ್ಯಯದ ವಿರುದ್ಧ ಹೋರಾಟದ ಅನುಭವದಿಂದ ಈಗ ಪಾಠ ಕಲಿತು ಹೆಚ್ಚಿನ ಪಕ್ಷಗಳು ಈಗ ಯುರೋ ಕೂಟದಿಂದ ಹೊರ ಬರುವುದಕ್ಕೆ ಒತ್ತಾಯಿಸುತ್ತಿವೆ. ಏಕೆಂದರೆ ರಾಷ್ಟ್ರೀಯ ಮಟ್ಟದಲ್ಲಿ ದಶಕಗಳ ಹೋರಾಟದ ನಂತರ ಕಾರ್ಮಿಕ ವರ್ಗ ಪಡೆದ ಸವಲತ್ತುಗಳನ್ನು, ಯುರೋ ಸಮಾನ ನೀತಿ ಹೆಸರಲ್ಲಿ ನಾಶಮಾಡಲಾಗುತ್ತಿದೆ. ಗ್ರೀಸ್, ಪೋರ್ಚುಗಲ್, ಸ್ಪೈನ್ ಎಡ-ಕಮ್ಯುನಿಸ್ಟ್ ಪಕ್ಷಗಳು ಪ್ರಮುಖವಾಗಿ ಇದನ್ನು ಎದುರಿಸಿದ್ದು ಕೂಟದಿಂದ ಹೊರ ಬರುವ ಪರವಾಗಿವೆ. ಬ್ರಿಟನಿನಲ್ಲಿ ಸಂಘಟಿತ ಎಡ-ಕಮ್ಯುನಿಸ್ಟ್ ಪಕ್ಷ ಇಲ್ಲದಿದ್ದರೂ ಇಂತಹ ವ್ಯಕ್ತಿಗಳು-ಗುಂಪುಗಳ ಸಣ್ಣ ಪಕ್ಷಗಳು ಕೂಟದಿಂದ ಹೊರ ಬರುವ ಪರವಾಗಿವೆ. ಆದರೆ ಲೇಬರ್ ಪಕ್ಷದ ನಿಯಂತ್ರಣದಲಲಿರುವ ಹೆಚ್ಚಿನ ಯೂನಿಯನುಗಳು ಕೂಟದಲ್ಲಿರಲು ಬಯಸುತ್ತವೆ. ಬಲಪಂಥಿಯ ಇಂಡಿಪೆಂಡೆನ್ಸ್ ಪಾರ್ಟಿ 'ರಾಷ್ಟ್ರೀಯ ಸಾರ್ವಭೌಮತೆ'ಗೆ ಧಕ್ಕೆ ಹೆಸರಲ್ಲಿ ಮಾತ್ರ ವಿರೋಧಿಸುತ್ತಿವೆ. ಇತ್ತೀಚಿನ ಭಯೋತ್ಪಾದಕ ದಾಳಿಗಳು, ನಿರಾಶ್ರಿತರ ಬಿಕ್ಕಟ್ಟು ಜನತೆಯಲ್ಲಿ ಯು-ರೋ ಕೂಟದ ಬಗ್ಗೆ ಆತಂಕಗಳನ್ನು ಹೆಚ್ಚಿಸಿದೆ.


ಬ್ರೆಕ್ಸಿಟ್ ಜನಮತಸಂಗ್ರಹ ಬ್ರಿಟನಿನ ರಾಜಕೀಯದಲ್ಲಿ ಪ್ರಮುಖ ಪಾತ್ರ ವಹಿಸಲಿದೆ. ಅದರಲ್ಲೂ ಬಹುಮತ ಕೂಟದಿಂದ ಹೊರ ಬರುವ ಪರವಾಗಿ ಬಂದರೆ. ಏಕೆಂದರೆ ಇದು ಆದರೆ ಪ್ರಧಾನಿ ಕೆಮರೂನ್ ರಾಜಿನಾಮೆ ಕೊಡಬೇಕಾದೀತು. ಪನಾಮಾ ಪೇಪರ್ಸ್ ಹಗರಣದಿಂದ ರಾಜೀನಾಮೆ ಕೊಡುವಂತೆ ಒತ್ತಡ ಈಗಾಗಲೇ ಅವರ ಮೇಲಿದೆ. ಬ್ರೆಕ್ಸಿಟ್ ಜನಮತಸಂಗ್ರಹದ ಪ್ರಚಾರ ಈಗಾಗಲೇ ಆರಂಭವಾಗಿದ್ದು ಇನ್ನಷ್ಟು ರಭಸ ಪಡೆಯುತ್ತಿದೆ.

ಕೊಮಗಾಟ ಮಾರು ಪ್ರಕರಣಕ್ಕೆ ಕೆನಡಾ ಸರಕಾರದ ಕ್ಷಮಾಯಾಚನೆ

102 ವರ್ಷಗಳ ಹಿಂದೆ ನಡೆದ ಹಲವು ಸಿಖ್ಖರನ್ನು ಬಲಿ ತೆಗೆದುಕೊಂಡ ಕೊಮಗಾಟ ಮಾರು ಪ್ರಕರಣದ ಬಗ್ಗೆ ಕೆನಡಾ ಸರಕಾರ ಆ ಘಟನೆ ನಡೆದ ಮೇ 18ರಂದು ಕ್ಷಮಾಯಾಚನೆ ಮಾಡಲಿದೆ. ಈ ಮೂಲಕ ಪ್ರಧಾನಿ ಟ್ರುಡೊ ಅವರ ಲೇಬರ್ ಪಕ್ಷ ಸಿಖ್ಖರಿಗೆ ಮಾಡಿದ ವಾಗ್ದಾನವನ್ನು ಉಳಿಸಿಕೊಳ್ಳಲಿದಾರೆ. ಅವರು ಪಂಜಾಬಿ ಹಬ್ಬ ಬೈಸಾಖಿ ಹಬ್ಬದಂದು ಈ ಘೋಷಣೆ ಮಾಡಿದರು. ಆ ಕಾಲದ 'ತಾರತಮ್ಯದ ಕಾನೂನು' ಮತ್ತು ನೀತಿಗಳ ದೆಸೆಯಿಂದ ಈ ದುರಂತ ನಡೆಯಿತು ಎಂದು ಅವರು ಹೇಳಿದ್ದಾರೆ.

1914 ಮೇ 18ರಂದು 376 ಭಾರತೀಯರು (ಹೆಚ್ಚಿನವರು ಪಂಜಾಬಿನಿಂದ ಬಂದಿದ್ದ ಸಿಖ್ಖರು) ಇದ್ದ ಕೊಮಗಾಟ ಮಾರು ಎಂಬ ಹಡಗಿಗೆ ಕೆನಡಾಕ್ಕೆ ಬರಲು ಅನುಮತಿ ನಿರಾಕರಿಸಲಾಯಿತು. ಆಗ ಕೆನಡಾದಲ್ಲಿ ಭಾರತದಿಂದ ವಲಸೆಯನ್ನು ತಡೆಯುವ ಕಾನೂನು ಜಾರಿಯಲ್ಲಿತ್ತು. ಅದನ್ನು ಕೆನಡಾ ಮತ್ತು ಅಮೆರಿಕದಲ್ಲಿದ್ದ ಭಾರತೀಯರ ಸಂಘಗಳು ವಿರೋಧಿಸಿದ್ದವು. ಅದರಲ್ಲಿ ಸಮರಶೀಲ ಗದರ್ ಪಾರ್ಟಿ ಒಂದಾಗಿತ್ತು. ಹಡಗದಲ್ಲಿ ಬಂದವರಲ್ಲೂ ಕೆಲವರು ಗದರ್ ಪಾರ್ಟಿ ಬೆಂಬಲಿಗರಿದ್ದರು. ಕೊಮಗಾಟ ಮಾರು ತನ್ನ ಪ್ರಯಾಣಿಕರೊಂದಿಗೆ ಭಾರತ-ಕ್ಕೆ ಹಿಂದಿರುಗಬೇಕಾಯಿತು. ಅದು ಸೆಪ್ಟೆಂಬರಿನಲ್ಲಿ ಕಲ್ಲತ್ತಾ ತಲುಪಿದಾಗ ಬ್ರಿಟಿಶ್ ಸರಕಾರ ಅವರನ್ನು ಕಾನೂನು ಮುರಿದ ಅಪರಾಧಿಗಳಂತೆ ಕಂಡು ಅವರನನು ಬಂಧಿಸಲು ಮುಂದಾಯಿತು. ಆಗ ಕೊಮಗಾಟ ಮಾರು ಪ್ರಯಾಣಿಕರು ರೊಚ್ಚಿಗೆದ್ದು ದಂಗೆಯ ಸ್ಥಿತಿ ಉಂಟಾಯಿತು. ಬ್ರಿಟಿಶ್ ಪಡೆಗಳು ಮತ್ತು ಪ್ರಯಾಣಿಕರ ಘರ್ಷಣೆಯಲ್ಲಿ 19 ಪ್ರಯಾಣಿಕರು ಸತ್ತರು.

ಈ ಸಾವಿಗೆ ಹೊಣೆ ಹೊತ್ತು ಕೆನಡಾ ಸರಕಾರ ಈ ಕ್ಷಮಾಯಾಚನೆ ಘೋಷಿಸಿದೆ.



ಬ್ರೆಜಿಲಿನಲ್ಲಿ ಬಲಪಂಥೀಯ 'ಕ್ಷಿಪ್ರಕ್ರಾಂತಿ'ಗೆ ಪ್ರಯತ್ನ

ಬ್ರೆಜಿಲಿನಲ್ಲಿ 'ದೋಷಾರೋಪಣೆ' ಮೂಲಕ ಅಧ್ಯಕ್ಷೆ ದಿಲ್ಮಾ ರೂಸೆಫ್ ಅವರನ್ನು ಪದಚ್ಯುತಿಗೊಳಿಸುವ ಬಲಪಂಥೀಯ ವಿರೋಧ ಪಕ್ಷಗಳ ಪ್ರಯತ್ನ ಒಂದು ಹೆಜ್ಜೆ ಮುಂದೆ ಹೋಗಿದೆ. ಸಂಸದೀಯ ಸಮಿತಿ ಸರಳ ಬಹುಮತದಿಂದ ಅಧ್ಯಕ್ಷರ ವಿರುದ್ಧ 'ದೋಷಾರೋಪಣೆ' ಪ್ರಕ್ರಿಯೆ ಆರಂಭಿಸಲು ನಿರ್ಣಯಿಸಿದೆ. ಇದು ಕಾಂಗ್ರೆಸ್ ಎಂಬ ಸಂಸತ್ತಿನ ಕೆಳಸದನಕ್ಕೆ ಹೋಗಲಿದೆ. 'ದೋಷಾರೋಪಣೆ' ಬಗ್ಗೆ ಮತದಾನದಲ್ಲಿ 513 ಸದಸ್ಯರಿರುವ ಅಧ್ಯಕ್ಷರ ವಿರುದ್ಧ 'ದೋಷಾರೋಪಣೆ' ಪ್ರಕ್ರಿಯೆ ಆರಂಭಿಸಲು ನಿರ್ಣಯಿಸಿದೆ. ಇದಕ್ಕೆ ಕಾಂಗ್ರೆಸ್‌ನಲ್ಲಿ ಮೂರನೇ ಎರಡರಷ್ಟು ಬಹುಮತ ಅಂ-ದರೆ 342 ಸದಸ್ಯರು ಬೆಂಬಲಿಸಿದರೆ ದಿಲ್ಮಾ ತಮ್ಮ ಅಧ್ಯಕ್ಷ ಪದವಿ ಕಳೆದುಕೊಳ್ಳಲಿದ್ದಾರೆ. ಒಂದು ಪತ್ರಿಕೆ ನಡೆಸಿದ ಸಂದರ್ಶನದ ಪ್ರಕಾರ 298 ಸದಸ್ಯರು 'ದೋಷಾರೋಪಣೆ'ಗೆ ಬೆಂಬಲಿಸುತ್ತಿದ್ದು, 119 ಸದಸ್ಯರು ವಿರೋಧಿಸುತ್ತಿದ್ದಾರೆ. ಉಳಿದ ಸದಸ್ಯರು ಇನ್ನೂ ಏನೂ ನಿರ್ಣಯಿಸಿಲ್ಲ.

ಅಧ್ಯಕ್ಷರ ವಿರುದ್ಧ 'ದೋಷಾರೋಪಣೆ'ಯನ್ನು ದಿಲ್ಮಾ ಅವರ ವರ್ಕರ್ಸ್ ಪಾರ್ಟಿ, ಕಮ್ಯುನಿಸ್ಟ್ ಪಾರ್ಟಿ ಮುಂತಾದ ಎಡ ಪಕ್ಷಗಳು ಸಾಂವಿಧಾನಿಕ 'ಕ್ಷಿಪ್ರಕ್ರಾಂತಿ'ಗೆ ಪ್ರಯತ್ನ ಎಂದು ಕರೆದಿದ್ದಾರೆ. ದಿಲ್ಮಾ ದೇಶದ ಹಣಕಾಸು ಪರಿಸ್ಥಿತಿಯ ಬಗ್ಗೆ ತಪ್ಪು ಮಾಹಿತಿ ಕೊಟ್ಟಿದ್ದಾರೆ ಎಂಬುದು ವಿರೋಧ ಪಕ್ಷಗಳ ಆಪಾದನೆ. ಬಜೆಟಿನ ನಿಜ ಸ್ಥಿತಿ ಮುಚ್ಚಿಟ್ಟು ಸರಕಾರದ ಸಾರ್ವಜನಿಕ ಸಾಮಾಜಿಕ ಕಾರ್ಯಕ್ರಮಗಳಿಗೆ ಹಣಕಾಸು ಹೊಂದಿಸಲು ವಿಶೇಷ ಕ್ರಮಗಳನ್ನು ಕೈಗೊಂಡಿದ್ದಾರೆ ಎಂಬುದು ಅವರ ಆಪಾದನೆ. ಇದು ರಾಜಕೀಯ-ಪ್ರೇರಿತ ಆಪಾದನೆ. ಅಧ್ಯಕ್ಷೀಯ 'ಜವಾಬ್ದಾರಿಗೆ ವ್ಯತಿರಿಕ್ತವಾದ ಅಪರಾಧ' ಅಲ್ಲ. ಅಧ್ಯಕ್ಷರು 'ಜವಾಬ್ದಾರಿಗೆ ವ್ಯತಿರಿಕ್ತವಾದ ಅಪರಾಧ' ಮಾಡಿದ್ದಾರೆ ಎಂಬುದಕ್ಕೆ ಯಾವುದೇ ಆಧಾರವಿಲ್ಲದೆ ರಾಜಕೀಯ ಉದ್ದೇಶದಿಂದ 'ದೋಷಾರೋಪಣೆ'ಯನ್ನು ಹರಿಯಬಿಡಲಾಗಿದೆ. ಬಲಪಂಥೀಯ ವಿರೋಧ ಪಕ್ಷಗಳು ಕಳೆದ ಚುನಾವಣೆಯಲ್ಲಿ (2014ರಲ್ಲಿ) 2002ರಿಂದ ಸತತ 4 ನೇ ಸೋಲನ್ನು ಒಪ್ಪಿಕೊಂಡಿಲ್ಲ. ಅದಕ್ಕಾಗಿ ಈ ಸಾಂವಿಧಾನಿಕ 'ಕ್ಷಿಪ್ರಕ್ರಾಂತಿ'ಗೆ ಪ್ರಯತ್ನ ನಡೆಸಿದ್ದಾರೆ ಎಂಬುದು ಎಡಪಕ್ಷಗಳ ವಾದ. ಇದಕ್ಕಾಗಿ ಉಚ್ಚ ವರ್ಗದವರು, ಗುತ್ತೇದಾರಿ ಮಾಧ್ಯಮ ಕಂಪನಿಗಳು, ನ್ಯಾಯಾಂಗದ ದೊಡ್ಡ ವಿಭಾಗ, ಬಲಪಂಥೀಯ ಪಕ್ಷಗಳು ಸೇರಿ ಈ ಹುನ್ನಾರ ನಡೆಸಿವೆ. ಇದರ ವಿರುದ್ಧ ಎಡ-ನಡು ಪಂಥೀಯ ಶಕ್ತಿಗಳು, ಸಾಮಾಜಿಕ ಚಳುವಳಿಗಳೂ, ಪ್ರಗತಿಪರ ವ್ಯಕ್ತಿಗಳು/ಗುಂಪುಗಳು ವ್ಯಾಪಕ ಪ್ರಚಾರಾಂದೋಲನ ನಡೆಸಿವೆ.

ಇದು ಕಷ್ಟಕರ ಅಂತರ್ರಾಷ್ಟ್ರೀಯ ಆರ್ಥಿಕ ಬಿಕ್ಕಟ್ಟಿನ ಸನ್ನಿವೇಶದಲ್ಲೂ ಕಳೆದ 14 ವರ್ಷಗಳಲ್ಲಿ ಪ್ರಮುಖ ಬಡತನ-ವಿರೋಧಿ ಕ್ರಮಗಳನ್ನು ಕೈಗೊಂಡ ಎಡ-ನಡುಪಂಥಿಯ ಸರಕಾರ ಉಳಿಸುವ ಮತ್ತು ಬಡ-ಮಧ್ಯಮ ವರ್ಗಗಳ ಹಿತಾಸಕ್ತಿ ಕಾಯುವ ದೃಷ್ಟಿಯಿಂದ ಬಹಳ ಮುಖ್ಯ. ಈಗಾಗಲೇ ಲ್ಯಾಟಿನ್ ಅಮೆರಿಕದ ಹಲವು ದೇಶಗಳಲ್ಲಿ ಎಡ ಶಕ್ತಿಗಳಿಗೆ ಹಿನ್ನಡೆಯಾಗುತ್ತಿರುವ ಹಿನ್ನೆಲೆಯಲ್ಲಿ ಬ್ರೆಜಿಲಿನ ಪ್ರಗತಿಪರ ಸರಕಾರ ಉಳಿಸಿಕೊಳ್ಳುವುದು ಮುಖ್ಯವಾಗುತ್ತದೆ.

PEÃV½ZÀÄÄ

ಶನಿ ಶಿಂಗ್ಣಾಪುರದಲ್ಲಿ ಮಹಿಳೆಯರ ಪ್ರವೇಶದಿಂದ ಮಹಿಳೆಯರ ಮೇಲೆ ಅತ್ಯಾಚಾರದಂತಹ ಪ್ರಕರಣಗಳಲ್ಲಿ ಹೆಚ್ಚಳವಾಗುತ್ತದೆ ಶನಿಯನ್ನು ಮಹಿಳೆಯರು ಮುಟ್ಟಿ ಪೂಜಿಸಿದರೆ ಅಪಶಕುನವಾಗುತ್ತದೆ. ಶನಿ ಶಿಂಗ್ಣಾಪುರದ ದೇವಾಲಯದ ಪ್ರವೇಶಕ್ಕೆ ಬದಲು ಪುರುಷರು ಮಾದಕ ದ್ರವ್ಯಗಳನ್ನು ತೆಗೆದುಕೊಂಡು ಮಾಡುವ ಅತ್ಯಾಚಾರಗಳನ್ನು ನಿಲ್ಲಿಸಲು ಪ್ರಯತ್ನ ಮಾಡಬಹುದಿತ್ತು..

ಮಹಾರಾಷ್ಟ್ರದ ವಿವಿಧ ದೇವಾಲಯಗಳಲ್ಲಿ ಸಾಯಿಬಾಬ ಪೂಜೆ ಮಾಡುವ ಪರಿಪಾಠ ಹೆಚ್ಚಾಗುತ್ತಿದ್ದು ಇದು ರಾಜ್ಯದಲ್ಲಿ ಬರ ಪರಿಸ್ಥಿತಿಗೆ ಕಾರಣವಾಗಿದೆ

– ಸ್ವಾಮಿ ಸ್ವರೂಪಾನಂದ,
ಹರಿದ್ವಾರದ ದ್ವಾರಕಾ ಪೀಠದ ಶಂಕರಾಚಾರ್ಯ

ಶನಿಯ ಶಿಲೆಯನ್ನು ಮಹಿಳೆಯರು ಮುಟ್ಟಿ ಪೂಜೆ ಮಾಡುವ ಮುಂಚೆ ನಡೆದ ಸ್ತ್ರೀಯರ ಅತ್ಯಾಚಾರಗಳಿಗೆ ಏನು ಕಾರಣ ಮತ್ತು ಸಾಯಿಬಾಬಾ ದೇವಸ್ಥಾನಗಳಿಲ್ಲದ ಕರ್ನಾಟಕದ ಹಲವು ಜಿಲ್ಲೆಗಳು, ಮಧ್ಯಪ್ರದೇಶ ಮುಂತಾದ ಕಡೆ ಹೇಗೆ ಬರ ಪರಿಸ್ಥಿತಿ ಉಂಟಾಗಿದೆ ಎಂಬ ಬಗ್ಗೆ ಸ್ವಾಮಿ ಸ್ವರೂಪಾನಂದರೇ ಸ್ಪಷ್ಟನೆ ನೀಡಬೇಕಾಗಿದೆ.

JANASHAKTHI KANNADA VARA PATRIKE APR 24, 2016 Price : Rs. 10/-
"REGISTERD" Postal Reg. No. RNP/KA/BGS/2078/2016-18 Posted at Bangalore PSO, BG - 560026
RNI No. KARKAN /2006/17926 Posted on every Satuarday
Licensed to Post without prepayment License No. WPP-283

'ಸಮಾನತಾ ಸಂಕಲ್ಪ ದಿನ': ಅಂಬೇಡ್ಕರ್ 125

ವಿಶೇಷ ಸಂಸತ್ ಅಧಿವೇಶನ ಕರೆಯಲು ಉಪವಾಸ ಧರಣಿ





ಡಾ. ಬಿ.ಆರ್.ಅಂಬೇಡ್ಕರ್‌ರವರ 125ನೇ ಜನ್ಮ ಜಯಂತಿಯ ಅಂಗವಾಗಿ ದಲಿತರ ಬದುಕಿನ ಬಗ್ಗೆ ಚರ್ಚಿಸಲು ವಿಶೇಷ ಸಂಸತ್ ಅಧಿವೇಶನ ಕರೆಯಲು ಒತ್ತಾಯಿಸಿ ದಲಿತ ಹಕ್ಕುಗಳ ಸಮಿತಿಯಿಂದ ಏಪ್ರಿಲ್ 13ರಂದು ಉಪವಾಸ ಸತ್ಯಾಗ್ರಹ ಮಾಡುವ ಮೂಲಕ 'ಸಮಾನತಾ ಸಂಕಲ್ಪ ದಿನ' ವನ್ನು ಆಚರಿಸಲಾಯಿತು.

ದಲಿತ ಶೋಷಣಾ ಮುಕ್ತಿ ಮಂಚ್ (ಡಿ.ಎಸ್.ಎಂ.ಎಂ.) ಮತ್ತು ದಲಿತ ಹಕ್ಕುಗಳ ಸಮಿತಿ, ಕರ್ನಾಟಕ ವತಿಯಿಂದ ಡಾ॥ ಬಿ.ಆರ್. ಅಂಬೇಡ್ಕರ್‌ರವರ 125ನೇ ವರ್ಷದ ಸಂದರ್ಭದಲ್ಲಿ ದೇಶದ ದಲಿತರ ಬದುಕಿನ ಬಗ್ಗೆ ಪಾರ್ಲಿಮೆಂಟ್‌ನಲ್ಲಿ ಚರ್ಚೆಯಾಗಬೇಕು. ಅದಕ್ಕಾಗಿ ಸಂಸತ್ತಿನ ವಿಶೇಷ ಅಧಿವೇಶನ ನಡೆಸಬೇಕೆಂದು ಧರಣಿ ಮೂಲಕ ಒತ್ತಾಯಿಸಲಾಯಿತು.

ಖಾಸಗಿ ಕ್ಷೇತ್ರಕ್ಕೂ ಮೀಸಲಾತಿ ವಿಸ್ತರಿಸುವ,. ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ ಬುಡಕಟ್ಟುಗಳ ಉಪಯೋಜನೆಗೆ ಕಡ್ಡಾಯ ಸ್ಥಾನಮಾನ ಕೊಡುವ, ವೃತ್ತಿಪರ ಶಿಕ್ಷಣ ಮತ್ತು ಉನ್ನತ ಶಿಕ್ಷಣಕ್ಕೂ ಮೀಸಲಾತಿ ವಿಸ್ತರಿಸುವ ಕಾನೂನುಗಳನ್ನು ವಿಶೇಷ ಅಧಿವೇಶನ ಚರ್ಚಿಸಬೇಕು. ರಾಷ್ಟ್ರೀಯ ಅಸ್ಪೃಶ್ಯತಾ ನಿರ್ಮೂಲನಾ ಮಿಷನ್ ಅಸ್ತಿತ್ವಕ್ಕೆ ತರಬೇಕು ಎಂದು ಒತ್ತಾಯಿಸಲಾಯಿತು.

'ದೇವಸ್ಥಾನಕ್ಕೆ ಪ್ರವೇಶ, ಹೋಟೆಲ್‌ಗಳಲ್ಲಿ ಎರಡು ಲೋಟ ಪದ್ಧತಿ, ದಲಿತ–ಸವರ್ಣೀಯರ ನಡುವೆ ಪ್ರೇಮ–ವಿವಾಹ್ಯ ಮೇಲೆ ಪ್ರತಿಬಂಧ, ದಲಿತರು ಕ್ಷೌರ ನಿಷೇಧ ಮುಂತಾದ ಹಲವು ವಿಧಗಳಲ್ಲಿ ಅಸ್ಪೃಶ್ಯತೆ ಆಚರಣೆಗಳ ವಿರುದ್ಧ, ವರ್ಣಾಶ್ರಮ, ಜಾತಿ ಪದ್ದತಿ ವಿರುದ್ಧ ರಾಜಿ ಇಲ್ಲದ ಅವಿಶ್ರಾಂತ ಹೋರಾಟಕ್ಕೆ ಈ ದಿನ ಸಂಕಲ್ಪದ ದಿನವಾಗಬೇಕು. ರಾಜ್ಯದಲ್ಲಿ ನಡೆಯುತ್ತಿರುವ ಸಾಮಾಜಿಕ ಬಹಿಷ್ಕಾರಗಳು, ಜಾತಿ ತಾರತಮ್ಯ, ದೌರ್ಜನ್ಯಗಳ ಪ್ರಕರಣಗಳಲ್ಲಿ ನ್ಯಾಯ ಸಿಗಬೇಕು. ಇದು ಎಲ್ಲೆಡೆ ಸತ್ಯಾಗ್ರಹದಲ್ಲಿ ಆಡಿದ ಮಾತುಗಳಲ್ಲಿ ಮೂಡಿದ ಕೂಗು ಆಗಿತ್ತು.

ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ಜನಸಂಖ್ಯೆಗನುಗುಣವಾಗಿ ಬಜೆಟ್‌ನಲ್ಲಿ ಕಡ್ಡಾಯವಾಗಿ ಹಣ ಮೀಸಲಿಡಬೇಕು ಹಾಗೂ ಮೀಸಲಿಟ್ಟ ಹಣವನ್ನು ಈ ಸಮುದಾಯದ ಅಭಿವೃದ್ದಿಗಾಗಿಯೇ ಬಳಸಬೇಕು, ಇನ್ನಾವ ಕೆಲಸಗಳಿಗೆ ಈ ಹಣವನ್ನು ಬಳಸಬಾರದು. ಇದರಲ್ಲಿ ಆಗುತ್ತಿರುವ ವಂಚನೆ, ದುರ್ಬಳಕೆ ತಡೆಯಲು ಪಣ ತೊಡಲಾಯಿತು.

ಬೆಂಗಳೂರು

ಬೆಂಗಳೂರಿನಲ್ಲಿ ನಡೆದ ಕಾರ್ಯಕ್ರಮವನ್ನು ಹಿರಿಯ ಸಾಹಿತಿ ಡಾ॥ಕೆ.ಮರುಳಸಿದ್ಧಪ್ಪರವರು ಉದ್ಘಾಟಿಸಿದರು. ಹಿರಿಯ ರಂಗಕರ್ಮಿ ಸಿ.ಬಸವಲಿಂಗಯ್ಯ, ಆರ್ಥಿಕ ತಜ್ಞರಾದ ಟಿ.ಆರ್. ಚಂದ್ರಶೇರ್, ಕಾರ್ಮಿಕ ಮುಖಂಡರಾದ ಕೆ.ಪ್ರಕಾಶ್, ದಲಿತ ಹಕ್ಕುಗಳ ಸಮಿತಿಯ ರಾಜ್ಯ ಸಂಚಾಲಕರಾದ ಗೋಪಾಲಕೃಷ್ಣ ಅರಳಹಳ್ಳಿ, ಬೆಂಗಳೂರು ಉತ್ತರ ಜಿಲ್ಲಾ ಸಂಚಾಲಕರಾದ ಎನ್.ನಾಗರಾಜ್, ರಾಜ್ಯ, ಜಿಲ್ಲಾ ವಲಯ ನಾಯಕರು ಭಾಗವಹಿಸಿ ಮಾತನಾಡಿದರು. ಶ್ರೀರಾಮಪುರ, ಕಮಲಾನಗರ, ಹಲಸೂರು, ಇಂದಿರಾನಗರ, ವಿಜನಾಪುರ, ಚನ್ನಸಂದ್ರ, ಬೆನ್ನಿಗಾನಹಳ್ಳಿ, ಗೌತಮಪುರ, ಆನೇಕಲ್, ಶಾಂತಿನಗರ ಮುಂತಾದ ಪ್ರದೇಶಗಳಿಂದ ಜನರು ಭಾಗವಹಿಸಿದ್ದರು.

ವಿಜಯಪುರ

ಜಿಲ್ಲೆಯಲ್ಲಿ ನಡೆದ ಪ್ರತಿಭಟನೆಯಲ್ಲಿ ಪ್ರಾಂತ ರೈತ ಸಂಘದ ರಾಜ್ಯ ಉಪಾಧ್ಯಕ್ಷರಾದ ಭೀಮಸಿ ಕಲಾದಗಿ ಮಾತನಾಡಿ – ಮಾರ್ಚ್ ತಿಂಗಳು ಮುಗಿದಿದೆ. ಎಸ್.ಸಿ.ಎಸ್.ಪಿ/ಟಿ.ಎಸ್.ಪಿ ಉಪಯೋಜನೆಗೆ ಖರ್ಚು ಮಾಡದೆ ಉಳಿದ 12,416ಕೋಟಿ ರೂ.ಗಳು ಮಾರ್ಚ್ ತಿಂಗಳಲ್ಲಿ ಪೂರ್ಣಗೊಳಿಸದ ಅಧಿಕಾರಿಗಳ ಮೇಲೆ ಕ್ರಮ ಜರುಗಿಸುವುದಾಗಿ ಖಡಕ್ ಹೇಳಿಕೆ ನೀಡಿದ ಮುಖ್ಯಮಂತ್ರಿಗಳು, ಅಧಿಕಾರಿಗಳ ಮೇಲೆ ಕ್ರಿಮಿನಲ್ ಕೇಸ್ ಹಾಕುವರೆ? ಎಂದು ಕೇಳಿದರು. ಗಂಗಾ ಕಲ್ಯಾಣ ದಲಿತರಿಗೆ ಆದೇಶ ಹೊರಡಿಸಿದರು. ಇನ್ನು ವಿದ್ಯುತ್ ಪೂರೈಕೆಯಾಗಿಲ್ಲ ತಕ್ಷಣ ವಿದ್ಯುತ್ ಪೂರೈಕೆ ಮಾಡಬೇಕು ಎಂದು ಸರ್ಕಾರಕ್ಕೆ ಒತ್ತಾಯಿಸಿದರು.

ರಾಜ್ಯ ಸಮಿತಿಯ ಸದಸ್ಯ ಸಂಗಪ್ಪ ನಾಲ್ಕಮಾನ ಮಾತನಾಡಿ, ಮುದ್ದೇಬಿಹಾಳ ತಾಲೂಕಿನ ಲಕ್ಕುಂಡಿಯಲ್ಲಿ ದಲಿತರ ಮೇಲೆ ಎಸಗಿದ ದೌರ್ಜನ್ಯ ಅವರ ಮನೆ ಕೆಡವಿದುದ್ದರಿಂದ ಅವರಿಗೆ ಪರಿಹಾರ ಕೊಡಬೇಕು. ಹಾಗೂ ಮುದ್ದೇಬಿಹಾಳ ಕೂಳೂರ ಗ್ರಾಮದಲ್ಲಿ ದಲಿತರ ಬಹಿಷ್ಕಾರ ಖಂಡಿಸಿ ಅವರಿಗೆ ನ್ಯಾಯ ಸಿಗಬೇಕು. ಎಂದರು.

ಮುಖಂಡರಾದ ಸುರೇಶ ಬಗಲಿ, ಮಲಿಕಸಾಬ ಬಾಗಲಕೋಟ, ಶರಣಪ್ಪ ಖಾನಾಪುರ, ಎಸ್. ಎಸ್. ಕೊಂಡಗೂಳಿ, ಮೋಹನ ಬರಗಲ್, ಇಂಡಿ ತಾಲೂಕಾ ಮುಖಂಡರಾದ ಚಿದಾನಂದ ಬೆಳ್ಳೆನವರ, ಇಂಚಗೇರಿ, ಸಾಯಬಣ್ಣ ದೊಡಮನಿ, ರಾಜಮಾನಧಾಪ, ಸುರೇಶ ಹರಿಜನ, ಈರಮ್ಮ ಬಾಣಿ, ಶಿವಪತ್ರ ಬರಗಲ್, ಹಣಮಂತ ದೊಡಮನಿ, ಶಿವಪ್ಪ ತಳೇವಾಡ, ಸೋನಾಬಾಯಿ ರಾಠೋಡ, ಸೀತಾಬಾಯಿ ರಾಠೋಢ, ಹುಸೇನಿ ರಾಠೋಡ, ಕದಂಬಾಯಿ ಹುಸೇನ ದೊಡಮನಿ, ಸಿದ್ರಾಮ ಬಂಗಾರಿ, ಸಂಗು ನಾಲ್ಕಮಾನ ಸೇರಿದಂತೆ ಮುಂತಾದವರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಮಧುಗಿರಿ

ತುಮಕೂರು ಜಿಲ್ಲೆಯ ಮಧುಗಿರಿಯಲ್ಲಿ ಉಪವಿಭಾಗಾಧಿಕಾರಿಗಳ ಮೂಲಕ ಮಾನ್ಯ ಮುಖ್ಯ ಮಂತ್ರಿಗಳಿಗೆ ಮನವಿ ಸಲ್ಲಿಸಲಾಯಿತು. ಸಂಚಾಲಕ ಬಿ.ಉಮೇಶ್, ಮತ್ತೊಬ್ಬ ಸಂಚಾಲಕರಾದ ಪಾರ್ವತಮ್ಮ ಸಂಚಾಲಕರಾದ ಹೆಚ್.ಡಿ.ಜಯ್ಯಮ್ಮನವರು ಮಾತನಾಡಿದರು. ಕಾರ್ಯಕ್ರಮದ ನೇತೃತ್ವವನ್ನು ಮುಖಂಡರಾದ ಜಿ.ಕಮಲ, ಶಕುಂತಲ, ವಿಶ್ವನಾಥ್, ವೆಂಕಟಾಚಲ, ಯುವಜನ ಮುಖಂಡ ಜಿ.ದರ್ಶನ್ ಹಾಗೂ ಪದಾಧಿಕಾರಿಗಳು ವಹಿಸಿದ್ದರು.

ಹುಣಸೂರು

ಮೈಸೂರು ಜಿಲ್ಲೆಯ ಹುಣಸೂರು ತಾಲ್ಲೂಕಿನಲ್ಲಿ ತಾಲ್ಲೂಕು ಕಛೇರಿ ಮುಂಭಾಗ ಧರಣಿ ನಡೆಸಿದರು. ಈ ಸಂದರ್ಭದಲ್ಲಿ ದಲಿತ ಹಕ್ಕುಗಳ ಸಮಿತಿಯ ಜಿಲ್ಲಾ ಸಂಚಾಲಕ ಬೆಳ್ತೂರು ವೆಂಕಟೇಶ್, ಮುಖಂಡರಾದ ಜಗದೀಶ್ ಸೂರ್‍ಯರವರು ಮಾತನಾಡಿದರು. ಸತ್ಯಾಗ್ರಹದಲ್ಲಿ ದಲಿತ ಹಕ್ಕು ಸಮಿತಿಯ ಮುಂಖಂಡರಾದ ಸಿದ್ದೇಶ್, ಜವರನಾಯ್ಕ, ನಂ–ಜಯ್ಯ, ಸಿದ್ದ ಯ್ಯ, ಮುಳ್ಳೂರು ಮಹದೇವ್, ರಾಮು, ಅಶೋಕ್, ಜಾನಕಿ, ಶಾಂತಿ, ಬಸವರಾಜ್ ಕಲ್ಕುಣಿಕೆ, ಕುಮಾರ್‌ಸ್ವಾಮಿ ಮುಂತದವರು ಭಾಗವಹಿಸಿದ್ದರು.

ಕೋಲಾರ

ಕೋಲಾರ ಜಿಲ್ಲೆಯ ಕೋರಾರ ಮತ್ತು ಮಾಲೂರಿನಲ್ಲಿ ಪ್ರತಿಭಟನೆ ನಡೆಸಲಾಗಿದೆ. ಜಿಲ್ಲಾ ಕೇಂದ್ರವಾದ ಕೋಲಾರದಲ್ಲಿ ಜಿಲ್ಲಾಧಿಕಾರಿಗಳ ಕಛೇರಿ ಮುಂದೆ ಉಪವಾಸ ಧರಣಿಯನ್ನು ನಡೆಸಲಾಯಿತು. ಕೋಲಾರದಲ್ಲಿ ನಡೆದ ಪ್ರತಿಭಟನೆಯಲ್ಲಿ ತಾಲ್ಲೂಕು ಸಂಚಾಲಕ ಹೊನ್ನೇನಹಳ್ಳಿ ಯಲ್ಲಪ್ಪ, ಸಹ ಸಂಚಾಲಕರಾದ ವಿಜಯಕೃಷ್ಣ, ಟಿ.ಎಂ.ವೆಂಕಟೇಶ್, ಭೀಮರಾಜ್, ಮುನಿರಾಜಮ್ಮ, ಮುಖಂಡರಾದ ನಾರಾಯಣರೆಡ್ಡಿ, ಕೆ.ವಿ.ಮಂಜುನಾಥ್, ಗಂಗಟ್ಟ ಯಲ್ಲಪ್ಪ, ರಾಮಾಂಜಿ ಮತ್ತಿತರರು ಭಾಗವಹಿಸಿದ್ದರು. ಮಾಲೂರಿನಲ್ಲಿ ನಡೆದ ಪ್ರತಿಭಟನೆಯಲ್ಲಿ ಜಿಲ್ಲಾ ಮುಖಂಡರಾದ ಬಿ.ವಿ.ಸಂಪಂಗಿ, ತಾಲ್ಲೂಕು ಮುಖಂಡರಾದ ಚಲಪತಿ, ಅಶೋಕ್, ಬಿ.ಎಸ್.ನಾಗಕ್ಕ ಮತ್ತಿತರರು ಭಾಗವಹಿಸಿದ್ದರು.

ರೋಣಾ

ಗದಗ ಜಿಲ್ಲೆಯ ರೋಣಾ ತಾಲ್ಲೂಕಿನ ತಹಶೀಲ್ದಾರ್ ಕಛೇರಿ ಎದುರು ಪ್ರತಿಭಟನೆ ನಡೆಸಲಾಯಿತು. ರೈತ ಮುಖಂಡರಾದ ಬಿ.ಎಸ್.ಸೊಪ್ಪಿನ್, ದಲಿತ ಹಕ್ಕುಗಳ ಸಮಿತಿಯ ಜಿಲ್ಲಾ ಸಂಚಾಲಕರಾದ ಎಂ.ಎಸ್. ಹಡಪದ ಮಾತನಾಡಿದರು. ಬೆಳವಣಿಕೆ ಗ್ರಾಮ ಪಂಚಾಯತ್ ಮಾಜಿ ಅಧ್ಯಕ್ಷರಾದ ಮಾಗುಂಡಪ್ಪ ಅಂಗಡಿ ಮಾತನಾಡಿದರು. ಧರಣಿ ನೇತೃತ್ವವನ್ನು ಮೈಲಾರಪ್ಪ ಮಾದರ, ಬಾಲು ರಾಠೋಡ, ಯುವಜನ ಮುಖಂಡರಾದ ಪೀರು ರಾಠೋಡ, ಮಾರುತಿ ಚಿಟಗಿ, ಮಹೇಶ ಹಿರೇಮಠ, ವಿದ್ಯಾರ್ಥಿ ಮುಖಂಡರಾದ ಶಿವಾನಂದ ಬೋಸ್ಲೆ, ಶಿವಾಜಿ ಗಡ್ಡದ, ಕರಿಯಮ್ಮ ಗುರಿಕಾರ, ಬೆಳವಣಿಕಿ, ಗಂಜೇಂದ್ರಗಢ, ಮಾಟರಂಗಿ, ಬೆಣಚಮಟ್ಟಿ, ಗೋಗೇರಿ, ಯಾವಗಲ್ಲ ಗ್ರಾಮಗಳಿಂದ ಜನರು ಭಾಗವಹಿಸಿದ್ದರು.

ಹಾಸನ

ಹಾಸನದಲ್ಲಿ ಅಸ್ಪೃಶ್ಯತೆ, ಜಾತಿ ತಾರತಮ್ಯ ನಿರ್ಮೂಲನೆಗಾಗಿ ಸಿಗರನಹಳ್ಳಿ ಬಹಿಷ್ಕೃತ ದಲಿತರಿಗೆ ನ್ಯಾಯಕ್ಕಾಗಿ ಜಿಲ್ಲಾದಿಕಾರಿ ಕಛೇರಿ ಎದುರು ಉಪವಾಸ ಸತ್ಯಾಗ್ರಹವನ್ನು ಹಮ್ಮಿಕೊಳ್ಳಲಾಗಿತು. ಮುಖಂಡರಾದ ಧರ್ಮೇಶ್, ಹೆಚ್.ಆರ್.ನವೀನ್ ಕುಮಾರ್, ವಸಂತಕುಮಾರ್, ಪೃಥ್ವಿ ಸೇರಿದಂತೆ ಮುಂತಾದವರು ಭಾಗವಹಿಸಿದ್ದರು.

ದಕ್ಷಿಣ ಕನ್ನಡ

ಮಂಗಳೂರಿನಲ್ಲಿ ಧರಣಿ ಉಪವಾಸ ಸತ್ಯಾಗ್ರಹವನ್ನು ಜಿಲ್ಲಾಧಿಕಾರಿ ಕಚೇರಿ ಎದುರು ಮಂಗಳೂರು ನಗರ ದಲಿತ ಹಕ್ಕುಗಳ ಸಮಿತಿ ಏರ್ಪಡಿಸಿತ್ತು. ಸಿಪಿಐ(ಎಂ) ದ.ಕ.ಜಿಲ್ಲಾ ಸಮಿತಿ ಕಾರ್ಯದರ್ಶಿ ರೈತ ಮುಖಂಡರಾದ ವಸಂತ ಆಚಾರಿ ಸತ್ಯಾಗ್ರಹವನ್ನು ಉದ್ಘಾಟಿಸಿ ಮಾತನಾಡಿದರು. ಧರಣಿಯಲ್ಲಿ ಸಮುದಾಯ ಸಂಘಟನೆಯ ವಾಸುದೇವ ಉಚ್ಚಿಲ, ದಲಿತ ಹಕ್ಕು ಸಮಿತಿಯ ಜಿಲ್ಲಾ ಸಂಚಾಲಕ ಕೃಷ್ಣಪ್ಪ ಕೊಂಚಾಡಿ, ಕೃಷ್ಣಪ್ಪ ಸಾಲ್ಯಾನ್, ಜನವಾದಿ ಮಹಿಳಾ ಸಂಘಟನೆಯ ಪದ್ಮಾವತಿ ಶೆಟ್ಟಿ, ಭಾರತಿ ಬೋಳಾರ್, ಡಿವೈಎಫ್‌ಐನ ಸಂತೋಷ್ ಬಜಾಲ್, ನವೀನ್ ಕೊಂಚಾಡಿ, ಎಸ್‌ಎಫ್‌ಐನ ನಿತಿನ್ ಮುಂತಾದವರು ಮಾತನಾಡಿದರು. ಕಾರ್ಮಿಕ ಮುಖಂಡರಾದ ಸುನಿಲ್ ಕುಮಾರ್ ಬಜಾಲ್ ಸಮಾರೋಪ ಭಾಷಣ ಮಾಡಿದರು. ದಲಿತ ಹಕ್ಕುಗಳ ನಗರ ಸಮಿತಿಯ ಅಧ್ಯಕ್ಷ ಲಿಂಗಪ್ಪ ನಂತೂರು ಸಭೆಯ ಅಧ್ಯಕ್ಷತೆ ವಹಿಸಿದ್ದರು. ಕಾರ್ಯದರ್ಶಿ ಪ್ರಶಾಂತ್ ಎಂ.ಬಿ. ಸ್ವಾಗತಿಸಿ, ವಂದಿಸಿದರು. ಬಳಿಕ ಜಿಲ್ಲಾಧೀಕಾರಿಗಳ ಮೂಲಕ ರಾಜ್ಯ ಮುಖ್ಯಮಂತ್ರಿಗೆ ಮನವಿ ಸಲ್ಲಿಸಲಾಯಿತು.

ಮೂಡಬಿದರೆಯಲ್ಲಿ ಸಭೆಯನ್ನುದ್ದೇಶಿಸಿ ಕಾರ್ಮಿಕ ಮುಖಂಡರಾದ ಯಾದವ ಶೆಟ್ಟಿ, ಜನವಾದಿ ಮಹಿಳಾ ಸಂಘಟನೆ ಮುಖಂಡರಾದ ರಮಣಿ, ದಲಿತ ಹಕ್ಕುಗಳ ಸಮಿತಿ ಮಂಗಳೂರು ನಗರ ಸಮಿತಿ ಅಧ್ಯಕ್ಷ ಲಿಂಗಪ್ಪ ನಂತೂರು, ರಾಜ್ಯ ಸಮಿತಿ ಸದಸ್ಯೆ ಗಿರಿಜ, ವಲಯ ಸಮಿತಿ ಮುಖಂಡರು ಉಪಸ್ಥಿತರಿದ್ದರು.

ಇದೇ ರೀತಿಯಲ್ಲಿ ಸಿಂಧನೂರು ಸೇರಿದಂತೆ ಹಲವು ಜಿಲ್ಲೆಗಳಲ್ಲಿ ಪ್ರತಿಭಟನಾ ಧರಣಿ ನಡೆದಿದೆ.





JANASHAKTHI KANNADA VARA PATRIKE: Printed by **G.V.SRIRAMA REDDY**, EMS Bhavana, No.37/A, 8th Cross, Mahalakshmi Layout, BANGALORE-560086 Published by: **G.V.SRIRAMA REDDY** EMS Bhavana, No.37/A, 8th Cross, Mahalakshmi Layout, BANGALORE-560086, Karnataka on behalf of / owned by **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027 Karnataka(State). and Published at BANGALORE. EMS Bhavana, No.37/A, 8th Cross, Mahalakshmi Layout, BANGALORE-560086 . Editor **NITHYANANDASWAMI** EMS Bhavana, No.37/A, 8th Cross, Mahalakshmi Layout, BANGALORE-560086 Editor : **NITHYANANDASWAMI**